"ಪ್ರಗತಿಶೀಲ ಸಾಹಿತ್ಯದ ಕಾದಂಬರಿಗಳಲ್ಲಿ ವೇಶ್ಯಾ ಸಮಸ್ಯೆಯ ನಿರೂಪಣೆ"

(ಕನ್ನಡ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ನಿಬಂಧ)

ಸಂಶೋಧಕರು

ಸುಮಿತ್ರ ಡಿ.ಸಿ.

ಮಾರ್ಗದರ್ಶಕರು

ಪ್ರೊ. ಹೆಚ್. ಬಿಳಿಗೌಡ

ಕರ್ನಾಟಕ ಸಂಘ (ರಿ), ಮಂಡ್ಯ.
ಎಂ.ಫಿಲ್: ಪ್ರೊ. ಕರಿಮಲ್ಲೇಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದ)
೨೦೦೭-೨೦೦೮

“ಪ್ರಗತಿಶೀಲ ಸಾಹಿತ್ಯದ ಕಾದಂಬರಿಗಳಲ್ಲಿ ವೇಶ್ಯಾ ಸಮಸ್ಯೆಯ ನಿರೂಪಣೆ”

(ಕನ್ನಡ ಎಂ.ಫಿಲ್. ಪದವಿಗಾಗಿ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ನಿಬಂಧ)

ಸಂಶೋಧಕರು

ಸುಮಿತ್ರ ಡಿ.ಸಿ.

ಮಾರ್ಗದರ್ಶಕರು

ಪ್ರೊ. ಹೆಚ್. ಬಿಳೀಗೌಡ

ಕರ್ನಾಟಕ ಸಂಘ (ರಿ), ಮಂಡ್ಯ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

೨೦೦೭-೨೦೦೮

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೭-೦೮ ನೇ ಸಾಲಿಗೆ ಕನ್ನಡ ಎಂ.ಫಿಲ್. ಪದವಿಗಾಗಿ **"ಪ್ರಗತಿಶೀಲ ಸಾಹಿತ್ಯದ ಕಾದಂಬರಿಗಳಲ್ಲಿ ವೇಶ್ಯಾ ಸಮಸ್ಯೆಯ ನಿರೂಪಣೆ"** ಎಂಬ ಶೀರ್ಷಿಕೆಯ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಈ ನಿಬಂಧವಾಗಲಿ, ಅಧ್ಯಾಯವಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಲ್ಪಟ್ಟಿಲ್ಲ. ಈ ಸಂಶೋಧನಾ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಗೆ ಸಂಬಂಧಿಸಿದಂತೆ ಮೌಲ್ಯ ಸ್ವೀಕಾರಕ್ಕಾಗಿ ಒಪ್ಪಿಸುತ್ತಿರುವುದಕ್ಕೆ ನನ್ನ ಒಪ್ಪಿಗೆ ಇದೆ.

ಸ್ಥಳ : ಹೊಂಬ್ಳಾರ ಶಿವಾಕೆರೆ.

ಮಾರ್ಗದರ್ಶಕರ ಸಹಿ

ದಿನಾಂಕ : 15-09-2008

(ಪ್ರೊ. ಹೆಚ್. ಬಿಳೀಗೌಡ.)

"ಪ್ರಗತಿಶೀಲ ಸಾಹಿತ್ಯದ ಕಾದಂಬರಿಗಳಲ್ಲಿ ವೇಶ್ಯಾ ಸಮಸ್ಯೆಯ ನಿರೂಪಣೆ"

ಪರಿವಿಡಿ

ಅಧ್ಯಾಯ – 1

ಅಧ್ಯಾಯನದ ಉದ್ದೇಶ, ವ್ಯಾಪ್ತಿ.

ಇಂದಿನ ಎಲ್ಲಾ ಕ್ಷೇತ್ರದ ನಡೆಗಳು ಜಡ್ಡುಗಟ್ಟಿ ಹೋಗಿವೆ. ಅವುಗಳನ್ನು ಕೆದಕದೆ ಹೋದರೆ ಹಾಗೆ ಜಡ್ಡುಗಟ್ಟುತ್ತಾ ಗೊಡ್ಡು ಆಚಾರಗಳಾಗಿ ಮಾರ್ಪಾಡು ಹೊಂದಿ ಸಾಮಾಜಿಕವಾಗಿ ಸ್ಥಾಯಿಯಾಗುವ ಅಪಾಯ ಇದೆ. ವ್ಯಕ್ತಿ ಅರಿವಿಲ್ಲದೆಯೋ ಅರಿವಿದ್ದೋ ಒಡ್ಡಿಕೊಳ್ಳುವ ನಡೆಗಳಿಂದ ಸೀಮಿತ ಅಪಾಯಗಳು ಉಂಟಾದರೆ ನಿರ್ಲಕ್ಷಿಸಬಹುದು. ಆದರೆ ಅದು ವ್ಯಕ್ತಿಯಿಂದಾಚೆ ಒಂದು ಸಮಾಜದತ್ತ ಹರಿದರೆ ಆಗುವ ಅಪಾಯ ಹೆಚ್ಚು. ಆಗಾಗಿ ಅಂತಹ ನಡೆಗಳನ್ನು ಎಚ್ಚರಿಕೆಯಿಂದ ಗಮನಿಸದಿದ್ದರೆ ಎಲ್ಲವನ್ನೂ ಆವರಿಸಿಕೊಳ್ಳುವ ಸಾಧ್ಯತೆ ಇದೆ ಈ ಕಾರಣದಿಂದಲೇ ಇಂದು ಯಾವುದೇ ವಿಚಾರ ವ್ಯಕ್ತಿಯ ಮಟ್ಟದಲ್ಲೇ ಉಳಿದುಕೊಂಡಿಲ್ಲ.

ಅರಿವು, ವೈಚಾರಿಕತೆ, ಜಾಗತೀಕರಣದ ಈ ಕಾಲದಲ್ಲಿ ಸಮಾಜ ನವೀನ ಸಮಸ್ಯೆಗಳಿಗೆ ಒಳಗಾಗುತ್ತಿದೆ. ಹಿಂದಿನ ಮೌಲ್ಯ, ಸ್ಥಾನಮಾನಗಳು ಕುಗ್ಗಿ ಇಂದು ಭಿನ್ನವಾದ.ಮನೋಭಾವ ಸೃಷ್ಟಿಯಾಗಿವೆ. ಇಂದು ಸೃಷ್ಟಿಯಾಗಿರುವ ಸಮಸ್ಯೆಗಳಲ್ಲಿ ಹೆಣ್ಣನ್ನು ಆವರಿಸಿರುವ ಸಮಸ್ಯೆಗಳು ಹೆಚ್ಚು. ಹೆಣ್ಣಿಗೆ ಹಿಂದಿನ ಸಂಪ್ರದಾಯ, ಜೀವನ ವಿಧಾನಗಳು ಬಹಳ ಪೂಜ್ಯನೀಯ ಸ್ಥಾನಗಳನ್ನು ಮೇಲ್ನೋಟಕ್ಕೆ ನೀಡಿದ್ದರೂ ಸಹ ಆಂತರ್ಯದಲ್ಲಿ ಮಾತ್ರ ಅವರ ಮೇಲೆ ದಬ್ಬಾಳಿಕೆ, ದೌರ್ಜನ್ಯಗಳು ನಡೆಯುತ್ತಿವೆ.ಆದರೆ ಇಂದು ವಾಸ್ತವವಾಗಿ ಮಹಿಳೆಯರನ್ನು ಆಧರಿಸಿದ ಸಮಸ್ಯೆಗಳು ಕಣ್ಣಿಗೆ ಕಟ್ಟುವಂತೆ ಹೃದಯ ವಿದ್ರಾವಕವಾಗಿ ಗೋಚರಿಸುತ್ತಿವೆ. ಅಂತಹ ನೋವಿನ ಸಮಸ್ಯೆಗಳತ್ತ ಚರ್ಚಿಸಿದ ಪ್ರಗತಿಶೀಲ ಕಾದಂಬರಿಗಳನ್ನು ಆದರಿಸಿ ಈ ಎಂ.ಫಿಲ್ ನಿಬಂಧನೆಯ ವಿಷಯವಾಗಿ ವೇಶ್ಯಾ ಸಮಸ್ಯೆಯನ್ನು ಚರ್ಚಿಸುವ ಆಶಯ ನನ್ನದಾಗಿದೆ.

ಸಮಾಜ ಏರಿದ ಜೀವ ವಿರೋಧಿ ನೀತಿ ನಿಯಮಗಳನ್ನು ಅಪ್ಪಿಕೊಂಡು, ಒಪ್ಪಿಕೊಂಡು ಜೀವನ ಸಾಗಿಸಿದ ಮಹಿಳೆಗೆ ಸಂಬಂಧಿಸಿದ ಯಾವುದೇ ಸಂಗತಿಗಳು ವೈಯಕ್ತಕವಾಗುವುದಕ್ಕಿಂತ, ಸಾಮಾಜಿಕವಾಗುತ್ತವೆ. ಅಂತಹ ಸಮಾಜಿಕ ಸಮಸ್ಯೆಗಳ ಒಂದು ಭಾಗವಾದ ವೇಶ್ಯಾ ಸಮಸ್ಯೆಯ ಪಾರದರ್ಶಕ ಚಿತ್ರಣ ಅಗತ್ಯವಾಗಿದೆ. ಸಾಹಿತ್ಯಕ್ಷೇತ್ರ ಸಾಕಷ್ಟು ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತಿದೆ. ಎಲ್ಲಾ ರೀತಿಯ ಸಮಸ್ಯೆಗಳನ್ನು ಎತ್ತಿ ತೋರಿಸುವ, ಅದಕ್ಕೆ ಸ್ಪಂದಿಸುವ ಹಾಗೂ ಅದರ ಸತ್ಯಾಸತ್ಯತೆಗಳನ್ನು ತೆರೆದಿಡುತ್ತಿವೆ.

ಇಂದು ಸಮಾಜ ನೂರಾರು ಸಮಸ್ಯೆಗಳ ತಾಣವಾಗಿದೆ. ಅಲ್ಲದೇ ಎಷ್ಟೋ ಸಂದರ್ಭಗಳು ಮಹಿಳೆಯ ಸಮಸ್ಯೆಗಳಾಗಿಯೂ ಸಮಾಜದ ಮೇಲೆ ಬೆಳಕು ಬೀರುತ್ತಿವೆ.

ಭಾರತೀಯ ಪರಂಪರೆಯು ಹೆಣ್ಣಿಗೆ ಪೂಜ್ಯನೀಯ ಸ್ಥಾನಮಾನ ನೀಡಿದರೂ ಆಕೆಯನ್ನು ಕೇವಲ 'ಭೋಗದವಸ್ತು' ಎಂದು ಭಾವಿಸಿ ಕ್ರೂರ, ವಕ್ರದೃಷ್ಟಿ ಬೀರುವ ಸಮಾಜ ನಮ್ಮ ಸುತ್ತಮುತ್ತಲೇ ಇದೆ. ಹೆಣ್ಣಿನ ದೈಹಿಕ ಸೌಂದರ್ಯಕ್ಕೆ ಬೆಲೆ ನೀಡಿ, ಅದು ಮಾಸಿದ ಮೇಲೆ ವೃದ್ಧಾಪ್ಯದಲ್ಲಿ ಹಣ್ಣಿನ ಸಿಪ್ಪೆಯ ಹಾಗೆ ನಡೆಸಿಕೊಳ್ಳುವ ವ್ಯವಸ್ಥೆಯ ಚಿತ್ರಣವನ್ನು ಬಿಂಬಿಸಲಾಗಿದೆ. ಹೆಣ್ಣಿನ ದೈಹಿಕ ಸೊಬಗನ್ನು ತನ್ನ ಕಾಮಾಸಕ್ತಿಗೆ ಬಳಸಿಕೊಂಡು ಆಕೆಯ ಮನಸ್ಸಿನ ಸೌಂದರ್ಯವನ್ನು ಗ್ರಹಿಸದೆ ಕರುಣಾಹೀನರಾಗಿ, ಅಮಾನವೀಯರಾಗಿ ನಡೆದುಕೊಳ್ಳುತ್ತಾರೆ.

ಇಂತಹ ನೋವಿನ ಸಮಸ್ಯೆಯನ್ನು ಆದರಿಸಿ ಕಥೆ, ಕಾದಂಬರಿಗಳು ಸಾಕಷ್ಟು ಸಂಖ್ಯೆಯಲ್ಲಿ ರಚನೆಯಾಗಿವೆ. ಇಲ್ಲಿ ಈ ಸಮಸ್ಯೆಯಿಂದ ಸಮಾಜದ ಮೇಲಿನ ಪ್ರಭಾವ, ಇಂತಹ ಹೆಣ್ಣಿನ ಜೀವನ ಚಿತ್ರಣ, ಒತ್ತಡಗಳು, ದೌರ್ಜನ್ಯಗಳು–ಇವುಗಳನ್ನು ತಿಳಿಯುವುದಾಗಿದೆ. ಭಾರತೀಯ ಸಮಾಜದ ವೇಶ್ಯಾ ವ್ಯವಸ್ಥೆ, ಕಾದಂಬರಿಗಳ ಕಥಾವಸ್ತು, ಈ ವೃತ್ತಿಗೆ ಬರಲು ಇರುವ ಸಮಸ್ಯೆಗಳು, ಇದನ್ನು ಹೋಗಲಾಡಿಸಿ ಅಗತ್ಯ ಕ್ರಮಗಳು ಮುಂತಾದವುಗಳನ್ನು ತಿಳಿಯುವುದಾಗಿದೆ. ಆಯ್ದ ಕಾದಂಬರಿಗಳಲ್ಲಿ ಹೆಣ್ಣಿನ ಅಂಗಾಂಗಗಳ ಅತಿ ರಂಜನೀಯ ವರ್ಣನೆ, ಆಕೆಯ ಮೇಲಿನ ಪುಷರ ದೌರ್ಜನ್ಯ, ದಬ್ಬಾಳಿಕೆ, ಕಾದಂಬರಿಕಾರರ ಸ್ತ್ರೀಪರ ಕಾಳಜಿಗಳು ಇವುಗಳನ್ನು ತಿಳಿಯುವ ಉದ್ದೇಶ ಈ ನಿಬಂಧನೆಯದಾಗಿದೆ.

ಪುರುಷ ತನ್ನ ತಾಯಿ, ಅಕ್ಕ, ತಂಗಿಯ ಹಾಗೆ ಒಂದು 'ಹೆಣ್ಣು' ಎಂದು ಭಾವಿಸದೆ, ಆಕೆಯನ್ನು 'ಸೂಳೆ, ವೇಶ್ಯೆ'ಯ ಹಾಗೆ ನಡೆಸಿಕೊಳ್ಳುತ್ತಾರೆ. ಅಂತಹ ಹೆಣ್ಣಿನ ಬದುಕನ್ನು ಒಬ್ಬ ಪುರುಷ ಗ್ರಹಿಸಿ ರಚಿಸುವುದಕ್ಕೂ ಒಂದು ಹೆಣ್ಣು ಸೂಳೆಯ ಮನಸ್ಸು, ಆಂತರ್ಯವನ್ನು ಅರಿತು ರಚಿಸುವುದಕ್ಕೂ ಸಾಕಷ್ಟು ಭಿನ್ನತೆಗಳಿವೆ. ಇದನ್ನು ಈ ಕಾದಂಬರಿಗಳಲ್ಲಿ ಸೂಚಿಸುವ ಒಂದು ಸಣ್ಣ ಪ್ರಯತ್ನವಾಗಿದೆ.

ವ್ಯಾಪ್ತಿ :

ಸಾಹಿತ್ಯ ಕೃತಿಗಳು ಸಾಮಾಜಿಕ ಸಮಸ್ಯೆಗಳು, ನೈತಿಕ ಮೌಲ್ಯಗಳು, ಹೆಣ್ಣಿನ ಮೇಲಿನ ಪುರುಷನ ದೌರ್ಜನ್ಯ ದಬ್ಬಾಳಿಕೆ, ಸಮಾಜದ ಅನೈತಿಕ ವರ್ತನೆಯ ಹೆಣ್ಣಿನ ಶೋಚನೀಯ ಬದುಕನ್ನು ಕುರಿತು ಅಧ್ಯಯನ ಮಾಡುವುದಾಗಿದೆ.

ಇಂತಹ ವೇಶ್ಯಾ ಸಮಸ್ಯೆಗಳನ್ನು ಆಧರಿಸಿ ಸಾಕಷ್ಟು ಸಾಹಿತ್ಯ ಕೃತಿಗಳು ರಚನೆಯಾಗಿವೆ. ಆದರೆ ನಮ್ಮ ಅಧ್ಯಯನದ ದೃಷ್ಟಿಯಿಂದ, ಕಾಲದ ಮಿತಿಯಿಂದ ಪ್ರಗತಿಶೀಲ ಸಾಹಿತ್ಯ ಪಂಥದಲ್ಲಿ ಬರುವಂತಹ ಪ್ರಮುಖ ಕಾದಂಬರಿಕಾರರ ಕೆಲವೊಂದು ಕಾದಂಬರಿಗಳನ್ನು ಆಧರಿಸಿ ಅಧ್ಯಯನ ಮಾಡಲಾಗಿದೆ.

ಪ್ರಗತಿಶೀಲ ಪಂಥದಲ್ಲಿ ಬರುವಂತಹ, ಹಲವಾರು ಕಾದಂಬರಿಕಾರರು ಈ ಸಮಸ್ಯೆಯನ್ನು ಆಧರಿಸಿ. ಸಾಕಷ್ಟು ಕಾದಂಬರಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ವೇಶ್ಯಾ ಸಮಸ್ಯೆಯನ್ನು ಆಧರಿಸಿದ, ಅ.ನ.ಕೃಷ್ಣರಾಯರ 'ಶನಿಸಂತಾನ', ತ.ರಾ.ಸುಬ್ಬರಾಯರ 'ಮಸಣದ ಹೂ', ಎಂ.ಕೆ.ಇಂದಿರಾ ಅವರ 'ಗೆಜ್ಜೆಪೂಜೆ', ತ್ರಿವೇಣಿಯವರ 'ಹೂವು-ಹಣ್ಣು'; ಶಿವರಾಮಕಾರಂತರ 'ಮೈ ಮನಗಳ ಸುಳಿಯಲ್ಲಿ' , ಬಸವರಾಜ ಕಟ್ಟೀಮನಿಯವರ 'ಬೀದಿಯಲ್ಲಿ ಬಿದ್ದವಳು'- ಈ ಕಾದಂಬರಿಗಳನ್ನು ಆಧರಿಸಿ ಅವುಗಳಲ್ಲಿನ ಹೆಣ್ಣಿನ ಮೇಲಿನ ದೌರ್ಜನ್ಯ ಅವಳ ಈ ವೃತ್ತಿಬದುಕಿಗೆ ಬರುವುದಕ್ಕೆ ಸಮಾಜದ ಕಾರಣ, ಅವರ ವೈಯಕ್ತಿಕ ಸಮಸ್ಯೆಗಳು, ಹೆಣ್ಣು ಮತ್ತು ಗಂಡಿನ ಕಾಮಾಸಕ್ತಿ, ಹೆಣ್ಣು ಆ ವೃತ್ತಿಗೆ ಬರಲು ಇರುವ ಪಾರಂಪರಿಕ ಕಾರಣಗಳು-ಇವುಗಳನ್ನು ಅಧ್ಯಯನ ಮಾಡುವ ವ್ಯಾಪ್ತಿಗೆ ಬರುತ್ತದೆ. ಜೊತೆಗೆ ಇಂತಹ ಸಮಸ್ಯೆ ಭಾರತೀಯ ಸಮಾಜದಲ್ಲಿ ಬೆಳೆದು ಬಂದ ರೀತಿ, ಇದರಿಂದ ಸಮಾಜಕ್ಕೆ, ಕುಟುಂಬಕ್ಕೆ, ವ್ಯಕ್ತಿಗೆ ಆಗುವಂತಹ ಹಾನಿಕಾರಕ ವ್ಯವಸ್ಥೆ, ಅದನ್ನು ನಿವಾರಿಸಲು ಸರ್ಕಾರದ ಕ್ರಮ ಮತ್ತು ಕಾದಂಬರಿಕಾರಕ ಆಶಯವನ್ನು ಅಧ್ಯಯನ ಮಾಡುವುದಾಗಿದೆ.

ಅಧ್ಯಾಯ – 2

ಭಾರತೀಯ ಸಮಾಜ ಮತ್ತು ವೇಶ್ಯಾ ವ್ಯವಸ್ಥೆ.

'ಹೆಣ್ಣು' ಎಲ್ಲಿ ಪೂಜಿಸಲ್ಪಡುವಳೋ ಅಲ್ಲಿ ದೇವತೆಗಳು ವಾಸಿಸುತ್ತಾರೆ'– ಎಂಬ ಸಂಸ್ಕೃತಿಯನ್ನು ಹೊಂದಿರುವ ದೇಶ ನಮ್ಮದು. ಮಹಾಕಾವ್ಯಗಳ ಕಾಲದಿಂದಲೂ ಹೆಣ್ಣಿಗೆ ಪೂಜ್ಯನೀಯ ಸ್ಥಾನಮಾನಗಳನ್ನು ತಾಯಿ, ಅಕ್ಕ, ತಂಗಿ, ಹೀಗೆ – ಬೇರೆ ಬೇರೆ ಬಾಂಧವ್ಯಗಳ ಹಿನ್ನೆಲೆಯಲ್ಲಿ ನೀಡಲಾಗಿದೆ. ಆದ್ದರಿಂದಲೇ ಪಾವಿತ್ರ್ಯ ವಸ್ತುಗಳಿಗೆ ಹೆಣ್ಣಿನ ಹೆಸರನ್ನು ನೀಡಿ ಗೌರವಿಸಲಾಗಿದೆ. ಉದಾಹರಣೆಗೆ, ಭೂಮಿತಾಯಿ ಹೆಣ್ಣು, ಹರಿಯುವ ನದಿ, ಹೆಣ್ಣು ಪೂಜಿಸಲ್ಪಡುವ ದೇವತೆಗಳು ಹೆಣ್ಣು, ಹೀಗೆ ಬೇರೆ ಬೇರೆ ಹೆಸರುಗಳಿಂದಲೇ ಪೂಜಿಸಲಾಗಿದೆ. ಇದು ನಮ್ಮ ಭಾರತೀಯ ಸಮಾಜದಲ್ಲಿ ಹೆಣ್ಣಿಗೆ ಇರುವ ಬಾಹ್ಯ ಗೌರವಾಭಿಮಾನಗಳಾಗಿವೆ.

ಹೆಣ್ಣನ್ನು ಎಲ್ಲಿ ಪೂಜಿಸುತ್ತೇವೋ ಅಲ್ಲಿಯೇ ಆಕೆಗೆ ಅನೇಕ ಸಾಮಾಜಿಕ, ಸಾಂಪ್ರದಾಯಿ ನಿರ್ಭಂಧಗಳನ್ನು ಹಾಕಿ, 'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಸೂತ್ರದಡಿಯಲ್ಲಿ ಆಕೆಯ ಸ್ವಾತಂತ್ರ್ಯವನ್ನು ಕುಗ್ಗಿಸಲಾಗಿದೆ. ನಮ್ಮದು ಪಿತೃಪ್ರಧಾನ ವ್ಯವಸ್ಥೆ, ಪುರುಷ ತನ್ನ ಅನುಕೂಲಕ್ಕೆ ತಕ್ಕ ಹಾಗೆ ಸಮಾಜದಲ್ಲಿ ನೀತಿ ನಿಯಮಗಳನ್ನು ರೂಪಿಸಿದ್ದಾನೆ. ಪ್ರಕೃತಿಯಲ್ಲಿ ಲಿಂಗಭಿನ್ನತೆಯಾಗಿ ಹೆಣ್ಣು, ಗಂಡುಗಳೆಂಬ ರೂಪಗಳಿರಬಹುದು. ಆದರೆ ಅವರಿಬ್ಬರಲ್ಲೂ ನಿಸರ್ಗ ಸಹಜವಾಗಿ ಇತರ ಜೀವಿಗಳಲ್ಲಿರುವಂತೆ ಲೈಂಗಿಕತೆಯ ಸರ್ವಸಾಧಾರಣ ಲಕ್ಷಣಗಳು ಇವೆ. ಇದು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಲೈಂಗಿಕ ಭಾವನೆಗಳನ್ನು ಲಿಂಗಭೇದವಾಗಿ ಅಳವಡಿಸಿ ಇಬ್ಬಗೆಯ ತಾರತಮ್ಯ ನೀತಿಯನ್ನು ರೂಪಿಸಿದೆ. ಈ ಕಾರಣದಿಂದಾಗಿ ಹೆಣ್ಣನ್ನು ಕೇವಲ ಉಪಭೋಗದ ವಸ್ತುವನ್ನಾಗಿ ಪರಿಗಣಿಸಲಾಗಿದೆ.

ಪುರುಷನಂತೆ ಸ್ತ್ರೀಗೂ ಇರುವ ಲೈಂಗಿಕ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಸಲುವಾಗಿ ಅವಳ ಮೇಲೆ ಅತಿಯಾದ ಪಾವಿತ್ರ್ಯದ ನಿರ್ಬಂಧಗಳನ್ನು ವಿಧಿಸಲಾಗಿದೆ. ಪುರುಷ ಯಾವುದೇ ಕಟ್ಟು ನಿಟ್ಟಾದ ನಿರ್ಬಂಧಗಳಿಲ್ಲದೆ ತನ್ನ ಲೈಂಗಿಕ ತೃಪ್ತಿಯನ್ನು ಕುಟುಂಬ ಮತ್ತು ಸಮಾಜದಲ್ಲಿ ಪಡೆಯುವ ಧೈರ್ಯ, ಅಧಿಕಾರ, ಸ್ವಾತಂತ್ರ್ಯಗಳಿವೆ. ಅದರ ಬಗ್ಗೆ ಆತನಲ್ಲಿ ಯಾವುದೇ ಬಗೆಯ ಅವಮಾನ, ನಾಚಿಕೆ, ಇವುಗಳಿಗೆ ಬೆಲೆ ಇಲ್ಲ. ಆದರೆ ಹೆಣ್ಣಿನಲ್ಲಿ ನಾಚಿಕೆ, ಅವಮಾನ,–ಇಂತಹ ಗುಣಗಳನ್ನು ಪ್ರಚೋದಿಸಿ, ತನ್ನ ಕಾಮನೆಗಳನ್ನು ವ್ಯಕ್ತಪಡಿಸಲು, ಮುಕ್ತವಾಗಿ ಈಡೇರಿಸಿಕೊಳ್ಳಲು ನಿರ್ಬಂಧಗಳನ್ನು

ವಿಧಿಸಲಾಯಿತು. ಈ ರೀತಿಯಾಗಿ ಎಲ್ಲಾ ವಿಚಾರಗಳಲ್ಲೂ ನಿರ್ಬಂಧ, ನಿಯಮಗಳನ್ನು ವಿಧಿಸಿ ಗಂಡು ಹೆಣ್ಣಿನ ನಡುವೆ ತಾರತಮ್ಯಗಳು ಸೃಷ್ಟಿಯಾಗಿ ಗಂಡು ಹೆಣ್ಣಿನ ಮೇಲೆ ಹತೋಟಿ, ನಿಯಂತ್ರಣ, ದಬ್ಬಾಳಿಕೆ, ಶೋಷಣೆಗಳನ್ನು ನಡೆಸಲಾಯಿತು.

ನಾಗರೀಕತೆಯ ಪೂರ್ವದಲ್ಲಿ ಹೆಣ್ಣೇ ಗುಂಪಿನ ನಾಯಕಿ. ಸ್ತ್ರೀ ತನ್ನ ದೈಹಿಕ ಕಾಮನೆಗೆ ಒಬ್ಬ ಗಂಡನು ಸಾಕಾಗದಿದ್ದರೆ ರಾಜಾರೋಷವಾಗಿ ಮತ್ತೊಬ್ಬ ಪುರುಷನನ್ನು ಹತ್ತಿರ ಕರೆದುಕೊಳ್ಳುತ್ತಿದ್ದಳು. ಮಾನವ ಜನಾಂಗದ ಆದಿಯಲ್ಲಿ ಮನುಷ್ಯ ಸಮಾಜವನ್ನು ಬೆಳೆಸಿದವಳು ಹೆಣ್ಣು, ಜೀವಕುಲವನ್ನೇ ತನ್ನ ಹತೋಟಿಯಲ್ಲಿಟ್ಟುಕೊಂಡು ಜೀವಿಸಿದ ಹೆಣ್ಣು ಶಕ್ತಿಯಾಗಿ ಕಂಡು 'ಹೆಣ್ಣೇ' ಅದ್ಭುತ ಎನಿಸಿರಬೇಕು. ಆದ್ದರಿಂದ ಪುರುಷ ಹೆಣ್ಣಿನಲ್ಲಿಯೇ ದೇವತೆಯನ್ನು ಕಂಡಿದ್ದಾನೆ. ಇದರಿಂದ ಮಾತೃದೇವತಾ ಪರಿಕಲ್ಪನೆ ಮೂಡಿತು. ಇಂತಹ ವೈವಿಧ್ಯತೆಯ ವ್ಯಕ್ತಿತ್ವವುಳ್ಳ ಹೆಣ್ಣನ್ನು ರೂಢಿ, ಸಂಪ್ರದಾಯ ಮತ್ತು ಧರ್ಮಾಚರಣೆಗಳನ್ನು ಜಾರಿಗೊಳಿಸಿ ಅವುಗಳ ಮರೆಯಲ್ಲಿ ತಾನು ಪ್ರಧಾನ ಧಾರೆಗೆ ಬಂದಿರುವುದನ್ನು ಮನುಷ್ಯನ ಇತಿಹಾಸದಿಂದ ತಿಳಿಯಬಹುದು.

ಹೆಣ್ಣನ್ನು ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದ ಪದ್ಧತಿ ಗುಲಾಮಗಿರಿ, ಯುದ್ಧಗಳಲ್ಲಿ ಹೋರಾಡಿ ಜಯಪಡೆದ ರಾಜರು, ಸೋತವನು ಎಲ್ಲವನ್ನು ಒಳಗೊಂಡಂತೆ ಹೆಣ್ಣನ್ನು, ತನ್ನ ಬಳಿ ಇದ್ದ ಗುಲಾಮರನ್ನು ಒಪ್ಪಿಸುತ್ತಿದ್ದ. ಹೀಗಾಗಿ ಶ್ರೀಮಂತ ಹಾಗೂ ರಾಜರು ತನಗೆ ಬೇಕಾದಷ್ಟು ಹೆಣ್ಣನ್ನು ಇಟ್ಟುಕೊಂಡು ಉಳಿದವರನ್ನು ಮಾರಾಟ ಮಾಡುತ್ತಿದ್ದ ವ್ಯವಸ್ಥೆ ಬೆಳೆಸಿಕೊಂಡು ಬಂದಿದ್ದರು.

ಶಿಲಾಯುಗದಲ್ಲಿ ಪುರುಷರು ತನ್ನ ಭೋಗಕ್ಕಾಗಿ ತಾಯಿ, ತಂಗಿ, ಅಕ್ಕ ಇಲ್ಲವೆ ಮಗಳೇ ಆಗಿರಬಹುದು ಇವರನ್ನು ಯಾವುದೇ ಶಿಷ್ಟಾಚಾರವಿಲ್ಲದೆ ಬಳಸಿಕೊಳ್ಳುತ್ತಿದ್ದರು. ಇದು ವಾಸ್ತವದಲ್ಲೂ ಎಷ್ಟೋ ಪುರುಷರು ಮಾನವೀಯ ಸಂಬಂಧಗಳಿಗೆ, ಬಾಂದವ್ಯಕ್ಕೆ ಬೆಲೆ ಕೊಡದೆ ಲೈಂಗಿಕ ವರ್ತನೆಗೆ ಅವಕಾಶವಿರುವ ಸ್ಥಿತಿಗಳು ಮರುಕಳಿಸುತ್ತಿವೆ. ಈ ಯುಗದಲ್ಲಿಯೂ ಗಂಡು ಸುಂದರಳಾದ, ಆಕರ್ಷಕ ಮೈ ಬಣ್ಣದ, ಮೃದು ಶರೀರದ, ಬಳುಕುವ ಸೊಂಟದ, ವಿಧೇಯಳಾದ ಸತ್ಕಾರ ಗುಣದ ಹೆಣ್ಣನ್ನು ಬಯಸುತ್ತಿದ್ದುದ್ದು ಇದೆ. ಶಿಲಾಯುಗದ ಸಂಸ್ಕೃತಿ ಆಧುನಿಕ ಮನುಷ್ಯ ಸ್ವಯಂಸೃಷ್ಟಿಸಿಕೊಂಡಿರುವ ಸ್ತ್ರೀ ಪುರುಷರ ನಡುವಿನ ಅಸಮಾನತೆಯತ್ತ ಬೆಳಕು ಚೆಲ್ಲುತ್ತದೆ.

ಈ ಯುಗದ ನಂತರ 'ಕೂಟವಿವಾಹ' ಅಂದರೆ ಸಹೋದರ ಸಹೋದರಿಯರನ್ನು ವಿವಾಹವಾಗುವ ಪದ್ಧತಿ ಜಾರಿಯಲ್ಲಿತ್ತು. ಸಿಂಧೂ ಬಯಲಿನ ನಾಗರೀಕತೆಯ ಕಾಲದಲ್ಲಿ

ಮಾತೃದೇವತಾ ವಿಗ್ರಹಗಳ ಆರಾಧನೆಯಲ್ಲಿ ಹೆಣ್ಣನ್ನು ನಗ್ನಳಾಗಿ ತನ್ನ ರೂಪವನ್ನೇ ದೇವರಿಗೆ ನೈವೇದ್ಯ ಮಾಡಿ ನೃತ್ಯದೊಂದಿಗೆ ಪೂಜಿಸಲ್ಲಿಸುತ್ತಿದ್ದ ನಿದರ್ಶನಗಳಿರುವುದರಿಂದ ಪ್ರಾಚೀನ ನಾಗರೀಕತೆಯಲ್ಲಿಯೂ ಹೆಣ್ಣಿನ ಮೈ ಪ್ರದರ್ಶನಕ್ಕೆ ಧಾರ್ಮಿಕ ಮುಖವಾಡವಿದ್ದುದ್ದು ಕಂಡುಬರುತ್ತದೆ. ಈ ಪದ್ಧತಿಯೇ ಮುಂದೆ ದೇವದಾಸಿ ಪದ್ಧತಿಯ ಆಚರಣೆಗೆ ಕಾರಣವಾಗಿದೆ.

ವೇದಗಳ ಕಾಲದಲ್ಲಿಯೇ ಆಚರಣೆಗೆ ಬಂದ ಬಹುಪತ್ನಿತ್ವ ಪದ್ಧತಿ ಮಹಿಳೆಯರನ್ನು ಪುರುಷ ತನ್ನ ತೊತ್ತೆಂದು, ದೈಹಿಕ ಸುಖಕ್ಕೆ ಮಾತ್ರ ಎಂದು ಭಾವಿಸಿದ್ದರು. ಜೂಜುಗಾರರು ತಮ್ಮ ಹೆಂಡತಿಯನ್ನು ಪಣವಾಗಿ ಒಡ್ಡಿ ಜೂಜಾಡುವಾಗ ಸೋತವನು ತನ್ನ ಹೆಂಡತಿಯನ್ನು ಗೆದ್ದವನ ವಶಕ್ಕೆ ನೀಡಬೇಕಾಗಿತ್ತು. ಆಗ ಆಕೆ ಜಾರಿಣಿಯೆನಿಸಿ, ನರ್ತನಕ್ಕೆಳೆಯುತ್ತಿದ್ದು ಆ ಮೂಲಕ ಗಣಿಕೆಯರ ವರ್ಗವೇ ನಿರ್ಮಾಣವಾಯಿತು. ಇದು ಮುಂದೆ ವೇಶ್ಯಾ ವೃತ್ತಿಗೆ ಅವಕಾಶ ಮಾಡಿತು. ಜೈನಧರ್ಮವು ಹೆಣ್ಣನ್ನು ಕಾಮದ ವಸ್ತು, ಲೈಂಗಿಕ ತೃಪ್ತಿಗೆ ಮಾತ್ರ ಸೀಮಿತ ಎನ್ನುತ್ತದೆ.

"ಮೇಲ್ಜಾತಿಯ ಪುರುಷನು ಕೆಳಜಾತಿಯ ಸ್ತ್ರೀಯನ್ನು ಮೋಹಿಸಿದರೆ ಆತನಿಗೆ ಏನೂ ದಂಡನೆಯಿಲ್ಲ. ಆದರೆ ಅದೇ ಕೆಳಜಾತಿ ಪುರುಷರು ಮೇಲ್ಜಾತಿಯ ಸ್ತ್ರೀಯನ್ನು ಮೋಹಿಸಿದರೆ ಆತ ವಧೆಗೆ ಅರ್ಹನ".[1] ಎಂಬ ಮನುವಿನ ವಾದವು ಕೆಳವರ್ಗದ ಮಹಿಳೆಯರನ್ನು ಮೇಲ್ವರ್ಗದವರು ಕೂಡುವುದಕ್ಕೆ ಯಾವುದೇ ಜಾತಿ ನಿರ್ಬಂಧಗಳಿರಲಿಲ್ಲ, ಜೊತೆಗೆ ತಮಗೆ ಯಾವುದು ಉಪಯೋಗ ಅನಿಸುತ್ತದೋ ಅವೆಲ್ಲವೂ ಸಹ ಧಾರ್ಮಿಕ ಕಟ್ಟುಪಾಡುಗಳಿಂದ ದೂರ ಇರುವುದನ್ನು ಸೂಚಿಸುತ್ತದೆ.

"ಸ್ತ್ರೀಯರ ಕಾಮುಕತನವು ಸೌಂದರ್ಯ, ವಯಸ್ಸು ಒಂದನ್ನೂ ಗಣಿಸುವುದಿಲ್ಲ, ಕುರೂಪಿಗೂ, ಮುದುಕನಿಗೂ, ಹುಡುಗನಿಗೂ ಬಲಿಯಾಗುತ್ತಾರೆ. ಸ್ತ್ರೀಯರ ಮನಸ್ಸು ಚಂಚಲ, ಸ್ನೇಹಹೀನ, ಅಲಂಕಾರ, ಕಾಮ, ಕ್ರೋಧ, ಕಪಟ, ದ್ರೋಹ, ದುರ್ವರ್ತನೆ– ಮುಂತಾದ ಮನೋವಿಕಾರಗಳು ಸ್ತ್ರೀಯರಿಗೆ ಜನ್ಮಸಿದ್ದವಾದವು"[2]. ಎಂಬ ಮನುವಿನ ಮಾತುಗಳು 'ಕೆಟ್ಟದ್ದು' ಎಲ್ಲವೂ ಮಹಿಳೆಯರಲ್ಲೇ ಆರೋಪಿಸಲಾಗಿದೆ. ಅಲ್ಲದೆ 'ಪುರುಷರಿಗೆ ಬಹುವಿವಾಹವು ನಿಂದ್ಯವಲ್ಲ' ಎಂಬುದು ತಾರತಮ್ಯದ ದೃಷ್ಟಿಯಿಂದ ಭಿನ್ನಭಿನ್ನವಾಗಿ ಸಾಮಾಜಿಕ ನಿಯಮಗಳನ್ನು ಹೇಳಿರುವುದು ಇಂದಿನ ಲಿಂಗ ತಾರತಮ್ಯಕ್ಕೆ ಕಾರಣವಾಗಿದೆ. ಎಷ್ಟೋ ಸಂಪ್ರದಾಯ ಬದ್ಧ ಸಮಾಜ ಮನುವಿನ ಹೇಳಿಕೆಗಳನ್ನು ಪುಷ್ಟೀಕರಿಸಿ ಮಹಿಳೆಯರನ್ನು ಸಾಮಾಜಿಕ ಪಿಡುಗುಗಳಿಗೆ ದೂಡಲಾಗಿದೆ.

1 ಮಹಿಳಾ ಚಳುವಳಿ ಹಾಲತಿ ಸೋಮಶೇಖರ್ ಪು.ಸಂ. 91
2 ಮಹಿಳಾ ಚಳುವಳಿ ಹಾಲತಿ ಸೋಮಶೇಖರ್ ಪು.ಸಂ. 95

ಇಸ್ಲಾಂ ಧರ್ಮದ ಪೈಗಂಬರ್‌ನ ಅವಧಿಯಲ್ಲಿ ಸ್ತ್ರೀ ಪುರುಷರನ್ನು ಸಾಮಾಜಿಕವಾಗಿ ಬಹಿಷ್ಕರಿಸುವಂತೆ ಆದೇಶಿಲಾಯಿತು. ಇಸ್ಲಾಮಿಕ್ ಕಾನೂನಿನ ದೃಷ್ಟಿಯಲ್ಲಿ ವಿವಾಹೋತ್ತರ ವ್ಯಭಿಚಾರವು ಘೋರವಾದ ಅಪರಾಧವಾಗಿದೆ. ಆದರೆ ಕಾಲಾನಂತರ ಬಂದ ಆ ಅನುಯಾಯಿಗಳು ತಮಗೆ ಅನುಕೂಲವಾಗುವಂತೆ, ಹೆಣ್ಣಿನ ರಕ್ಷಣೆಯ ನೆಪದಲ್ಲಿ 'ಪರದಾಪದ್ಧತಿ' ತರುವ ಮೂಲಕ ಆಕೆಯ ಮೇಲೆ ಅತ್ಯಾಚಾರ ಮಾಡಲಾಯಿತು.

"ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ವೇಶ್ಯಾವಾಟಿಕೆಯಲ್ಲಿರುವ ಮಹಿಳೆಯರನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗಿತ್ತೆಂದು ತಿಳಿಸುತ್ತಾನೆ. ಆ ವರ್ಗಗಳು ರೂಪಜೀವ, ಕುಂಭದಾಸಿ ಮತ್ತು ಗಣಿಕವೆಂದು.

ಕುಂಭ – ಕೆಳವರ್ಗದ ಮಹಿಳೆಯಾಗಿದ್ದು, ತಾನು ಕೆಲಸ ಮಾಡುವ ಮನೆಯ ಯಜಮಾನರಿಗೆ ಲೈಂಗಿಕ ಸೇವೆಯನ್ನು ಪೂರೈಸುತ್ತಿದ್ದಳು. ಇದು ಒತ್ತಾಯ ಪೂರ್ವಕವಾಗಿ ಕೂಡ ನಡೆಯುತ್ತಿತ್ತು.

ರೂಪದೇವ–ಎರಡನೇ ವರ್ಗದ ಮಹಿಳೆ. ಇವಳು ಮಧ್ಯಮ ವರ್ಗದವಳಾಗಿದ್ದು, ತನ್ನ ಗಿರಾಕಿಗಳನ್ನು ಲೈಂಗಿಕವಾಗಿ ಆಕರ್ಷಿಸುವ ಬಗ್ಗೆ ಹಲವಾರು ರೀತಿಯಾಗಿರುತ್ತದೆ. ಈ ವರ್ಗದ ಜನ ಗಂಡನ ಗಮನಕ್ಕೆ ಬಾರದೆ ವೇಶ್ಯಾವೃತ್ತಿ ಮಾಡಿದರೆ, ಇನ್ನೂ ಕೆಲವರ ಗಂಡಂದಿರೇ ಅವರ ತಲೆ ಹಿಡಿದು ಅವಳ ಗಳಿಕೆಯ ಮೇಲೆ ಬದುಕುತ್ತಿದ್ದರು.

ಗಣಿಕದಾಸಿಯರು–ಇವರು ಮೊದಲನೇ ವರ್ಗದ ಶ್ರೀಮಂತ ಮಹಿಳೆಯರು. ಇವರಿಗೆ ಕೌಟಿಲ್ಯನ ಪ್ರಕಾರ ಅರವತ್ನಾಲ್ಕು ಕಲೆಗಳು ಗೊತ್ತಿರುತ್ತಿದ್ದವು. ಕಾನೂನು ಇವರಿಗೆ ಬೆಂಬಲವಾಗಿರುತ್ತಿತ್ತು. ಇಂತಹ ವೇಳೆಯಲ್ಲಿ ಆರ್ಥಿಕವಾಗಿ ದುರ್ಬಲರಾದ ಮಹಿಳೆಯರನ್ನು ಹಾಗೂ ಕೆಳಜಾತಿಯ ಮಹಿಳೆಯರನ್ನು ಮಾತ್ರ ಈ ಪದ್ಧತಿಯಲ್ಲಿ ಅಳವಡಿಸಿಕೊಂಡಿತು."[3] ಎಂದು ಹೇಳುವ ಮಾತುಗಳು ವೇಶ್ಯಾ ಪದ್ಧತಿಯು ರಾಜರ ಆಳ್ವಿಕೆಯಿಂದಲೂ ಬಳಕೆಯಲ್ಲಿದ್ದು ಅವರ ಈ ಬದುಕಿಗೆ ಸಮಸ್ಯೆ, ಸಂದರ್ಭಗಳು ಸೃಷ್ಠಿಯಾಗಿ ಶೋಷಣೆಗೆ ದಾರಿ ಮಾಡಿದ್ದರು.

ಮಧ್ಯಯುಗದಲ್ಲಿ ಶಾಸ್ತ್ರೋಕ್ತವಾಗಿ ಹೆಣ್ಣನ್ನು ಭೋಗಿಸಿ ಬಿಸಾಕಿರುವಂತಹುದು ಇದೆ."ಹರ್ಷ ಚಕ್ರವರ್ತಿಯ ಕಾಲದಲ್ಲಿ ಲಕ್ಷಾಂತರ ದಾಸಿಯರನ್ನು ಪಶುಗಳಂತೆ ಮಾಡಲಾಗುತ್ತಿತ್ತು".[4] ಈ ಯುಗದ ದೌಷ್ಟ್ಯವೆಂದರೆ ಹೆಣ್ಣನ್ನು ರಾಜರುಗಳು ತಮ್ಮ ಭೋಗದ ಬೆಲೆ ವೆಣ್ಣುಗಳೆಂದು ಭಾವಿಸಿಕೊಂಡು ತಮ್ಮ ಕಾಮ ಪ್ರಚೋಧನೆಯ ಆಟಿಕೆಗಳಾಗಿ ನಡೆಸುತ್ತಿದ್ದರು.

3 ಮಹಿಳಾ ಅಧ್ಯಯನ ಪ್ರಸಾರಾಂಗ ಹಂಪಿ ಪು.ಸಂ. 57
4 ಮಹಿಳಾ ಚಳುವಳಿ ಹಾಲಕ್ಕಿ ಸೋಮಶೇಖರ್ ಪು.ಸಂ. 140

ವಿಧವೆಯರು ಮೂರು ರೀತಿಯಾಗಿ ಜೀವನ ನಡೆಸುತ್ತಿದ್ದರು. ಗಂಡನ ಜೊತೆ ಸಹಗಮನ ಮಾಡುವುದು, 'ಕೆಟ್ಟು ಪಟ್ಟಣ ಸೇರು' ಎಂಬಂತೆ ಪಟ್ಟಣಗಳಲ್ಲಿ ಜೀವನ ಸಾಗಿಸಲು ವೇಶ್ಯಾವೃತ್ತಿ ಮಾಡುತ್ತಿದ್ದರು. ಮತ್ತೆ ಕೆಲವರು ತೌರುಮನೆಗೆ ಹೋಗಿ ಮನೆಗೆಲಸ ಮಾಡಿಕೊಂಡು ಕಾಲ ಹಾಕುತ್ತಿದ್ದರು.

ಕುತುಬುದ್ದೀನ್ ಮುಬಾರಕ್ - ಹೆಣ್ಣು ಮಕ್ಕಳ ಹಾಗೆ ವೇಷಭೂಷಣಗಳನ್ನು ಧರಿಸಿ ವೇಶ್ಯೆಯ ಜೊತೆ ಹಾಡುವುದನ್ನು ಕುಣಿಯುವುದನ್ನು ಮಾಡುತ್ತಿದ್ದು, ಆತನ ಕಾಲದಲ್ಲಿ ವೇಶ್ಯೆಯರ ಬೇಡಿಕೆ ಮತ್ತು ಅವರ ಮಾರಾಟದ ಬೆಲೆ ಹೆಚ್ಚಾಗಿತ್ತು. ವೇಶ್ಯೆಗೆ ಇಪ್ಪತ್ತು ಪೌಂಡ್‌ಗಳನ್ನು ನೀಡಿ ಈ ಪದ್ಧತಿಗೆ ಬೆಂಬಲ ನೀಡಿದ್ದನು. ಸಾಮಾಜಿಕ ಕೆಡುಕಾಗಿ ಬೆಳೆಯಲು ಪರೋಕ್ಷವಾಗಿ ರಾಜ ಮಹಾರಾಜರು ಕಾರಣರಾಗಿದ್ದಾರೆ.ಷಹಜಾನನು ತನ್ನ ಅರಮನೆಗೆ ವೇಶ್ಯೆಯರ ಮುಕ್ತ ಪ್ರವೇಶಕ್ಕೆ ಅನುಮತಿ ನೀಡಿದ್ದನು.

'ಬಾಳೆಲೆಯ ಹಾಸ್ಯುಂಡು ಬೀಸಿ ಒಗೆಯುವಂತೆ' ಕಾಮಮುಖಿಗಳಾಗಿದ್ದರು. ಹೆಂಗಸರು ಅಲಂಕಾರ ಮತ್ತು ಸೌಂದರ್ಯಕ್ಕೆ ಸೀಮಿತ ಎಂಬ ಭಾವನೆಗಳು ಬಂದಿತ್ತು. ಹೆಣ್ಣಿಗೆ ಇಷ್ಟವಿರಲಿ, ಇಲ್ಲದಿರಲಿ, ಆಕೆ ಸಂತೋಷವಾಗಿರಲಿ, ದುಃಖದಲ್ಲಿರಲಿ ಒಂದೇ ರೀತಿಯಲ್ಲಿ ತನ್ನ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದರು.

ಇಂತಹ ಆಳ್ವಿಕೆಯ ಕಾಲದಲ್ಲಿ ವೇಶ್ಯೆಯರ ಮದುವೆಗೆ, ಅವರು ಒಳ್ಳೆಯ ಜೀವನ ನಡೆಸುವುದಕ್ಕೆ ಅಲ್ಲಾವುದ್ದೀನ್ ಖಿಲ್ಜಿ ಆದೇಶಗಳನ್ನು ನೀಡುವ ಮೂಲಕ ಅಂದಿನ ಅವರ ಸಮಸ್ಯೆಯ ನಿವಾರಣೆಗೆ ಪ್ರಯತ್ನದ ಧ್ವನಿಯು ಗೋಚರಿಸುತ್ತದೆ.

"..

ಗಂಡಾನ ಹೆಸರಿಲ್ಲ ಊರೆಲ್ಲ ಮಿಂಡಾರು
ಮದುವಿಲ್ದೆ ಮದುಮಗಳು ಗಂಡಿಲ್ದೆ ಹಡೆದೋಳು
ನಾಯಿಗೂ ಕಡೆಯಾಗಿ ಕೀಳಾಯ್ತು ನನ್ನ ಬಾಳು
ಯಲ್ಲವ್ವನ ಹಿಂದೆ ಹೋಗಿ ಎಲ್ಲಾನೂ ಕಳೆದುಕೊಂಡೆ
ಉಧೋ ಉಧೋ ಅನ್ನುತ್ತಾ ಉದುರಿದಾ
ಹೂವಾದೆ. . . . .

ಇಂತಹ ಕೋಟಿಗಾನಹಳ್ಳಿ ರಾಮಯ್ಯನವರ ಕವನದ ಸಾಲುಗಳು ದೇವದಾಸಿಯರ ಬದುಕಿನ ದುರಂತವನ್ನು ಚಿತ್ರಿಸುತ್ತದೆ".[5]

5 ಮಹಿಳಾ ಚಳುವಳಿ ಹಾಲತಿ ಸೋಮಶೇಖರ್ ಪು.ಸಂ – 155

'ದೇವದಾಸಿ ಪದ್ಧತಿ' ಎಂಬುದು ಹೆಣ್ಣನ್ನು ಧಾರ್ಮಿಕ ಆವರಣದಲ್ಲಿ ಲೈಂಗಿಕ ಕಿರುಕುಳ ಒಡ್ಡುವ ಒಂದು ಕ್ರಿಯೆ. ದೇವಸ್ಥಾನಗಳಿಗೆ ತಮ್ಮನ್ನು ಅರ್ಪಿಸಿಕೊಂಡವರು, ದೇವರೊಂದಿಗೆ ಮದುವೆಯಾದವರು. ಅವರಿಗೆ ಮತ್ತೊಂದು ಮದುವೆಯಿಲ್ಲ, ಯಾವ ಗಂಡಸೂ ಮದುವೆಯಾಗುವುದಿಲ್ಲ. ಆದರೆ ಲೈಂಗಿಕ ತೃಪ್ತಿಯನ್ನು ಮಾತ್ರ ಅನುಭವಿಸುತ್ತಾರೆ. ಧರ್ಮದ ಹೆಸರಿನಲ್ಲಿ ಸ್ತ್ರೀಯರನ್ನು ಸಂಗೀತ – ನೃತ್ಯಗಾತಿಯರನ್ನಾಗಿ ಹಾಗೂ ದೇವಸ್ಥಾನ ಸೇವಕಿಯರನ್ನಾಗಿ ಮುಡುಪಿಡುವ ಪದ್ಧತಿಯಾಗಿದೆ. ದೇವರ ಆರಾಧನೆಯಲ್ಲಿ ನೃತ್ಯ–ಸಂಗೀತಗಳ ವ್ಯಾಪಕ ಬಳಕೆ ಆರಂಭವಾದ ಮಧ್ಯಕಾಲೀನ ಯುಗದಲ್ಲಿ 'ದೇವದಾಸಿ ಪದ್ಧತಿ'ಯು ಬೆಳೆದು ಬಂದಿತು.

ದೇವರ ಸೇವೆಗೆಂದು ಆರಂಭದಲ್ಲಿ ದೈವಭಕ್ತಿ ಹಾಗೂ ಧರ್ಮಶ್ರದ್ಧೆಯಿಂದ ಕೂಡಿದ್ದರೂ ಆ ಬಳಿಕ ಅದು ತನ್ನ ಉದ್ದೇಶವನ್ನು ಕಳೆದುಕೊಂಡಿತು. ದೇವಸ್ಥಾನದ ಯಾತ್ರೆಗಾಗಿ ಬರುವ ಶ್ರೀಮಂತ ಯಾತ್ರಿಕರ ಲೈಂಗಿಕ ಬಯಕೆಗಳನ್ನು ಈಡೇರಿಸಲು ದೇವದಾಸಿಯರನ್ನು ಬಳಸುವುದರ ಮೂಲಕ ಅವರನ್ನು ವೇಶ್ಯೆಯರನ್ನಾಗಿ ಮಾಡಲಾಯಿತು. ದೇವದಾಸಿಯರಿಗೆ ಹುಟ್ಟಿದ ಹೆಣ್ಣು ಮಕ್ಕಳು ಮತ್ತು ಹರಕೆ ಹೊತ್ತವರು ತಮಗೆ ಹೆಣ್ಣು ಮಗು ಹುಟ್ಟಿದಾಗ ಆಕೆಯನ್ನು ದೇವಸ್ಥಾನಗಳಿಗೆ 'ಬಸವಿ' ಬಿಡುವುದು ಅಥವಾ 'ದೇವದಾಸಿ'–ಯಾಗುವಂತೆ ಬಿಡುವುದು ಕೂಡಾ ಇತ್ತು. ತಮ್ಮ ಹೆತ್ತವರ ಈ ನಿರ್ಧಾರವನ್ನು ಪ್ರತಿಭಟಿಸುವ ಧೈರ್ಯವೂ ಹೆಣ್ಣು ಮಕ್ಕಳಲ್ಲಿ ಇರಲಿಲ್ಲ. ಅವರಲ್ಲಿ ಅಂತಹ ಜಾಗೃತಿಯೂ ಇರಲಿಲ್ಲ. ಬರುಬರುತ್ತಾ ದೇವದಾಸಿಯರನ್ನಾಗಿ ಹೆಣ್ಣು ಮಕ್ಕಳನ್ನು ಬಿಡುವುದೆಂದರೆ ಅವರನ್ನು ವೇಶ್ಯಾವಾಟಿಕೆಗೆ ಮಾಡುವುದೆಂದೇ ತಿಳಿದುಕೊಳ್ಳಲಾಗುತ್ತಿತ್ತು. ಈ ಪದ್ಧತಿ ಭಾರಿ ವ್ಯಾಪಕವಾಗಿಲ್ಲದೇ ಹೋಗಿದ್ದರೂ ಸಾಕಷ್ಟು ಸಂಖ್ಯೆಯ ಹೆಣ್ಣು ಮಕ್ಕಳು ಇದಕ್ಕೆ ಬಲಿಪಶುಗಳಾದರು. ನರ್ತನ ಮಾಡುತ್ತಾ, ಹಾಡುತ್ತಾ, ಭೂಲೋಕದ ಪುರುಷ ಶ್ರೇಷ್ಠರನ್ನು ಲೈಂಗಿಕ ತೃಪ್ತಿ ಪಡಿಸಲು ವೇಶ್ಯೆಯರನ್ನಾಗಿ ಮಾರ್ಪಡಿಸಿದ ಕೆಟ್ಟ ಸಂಪ್ರದಾಯ ದೇವದಾಸಿ ಪದ್ಧತಿ. ಇದು ಇಂದು ಜಾಗತಿಕ ಸಮಸ್ಯೆಯಾಗಿದ್ದು ಹರಪ್ಪ, ಮಹೇಂಜೋದಾರೋ ಕಾಲದಿಂದಲೂ ಚಾಲ್ತಿಯಲ್ಲಿವೆ. "ಕೇರಳದಲ್ಲಿ 'ಮಹರಿ', ಅಸ್ಸಾಮಿನಲ್ಲಿ 'ನಟಿ', ಮಹಾರಾಷ್ಟ್ರದಲ್ಲಿ 'ಮುರಳಿ' ಆಂಧ್ರಪ್ರದೇಶದಲ್ಲಿ 'ಭೋಗಮ'ಗಳೆಂದು, ಕರ್ನಾಟಕದಲ್ಲಿ 'ಜೋಗತಿ' ಎಂಬ ಹೆಸರಿನಲ್ಲಿ ದೇವದಾಸಿ ಪದ್ಧತಿ ರೂಢಿಯಲ್ಲಿದೆ."[6] ದೇವಾಲಯದ ಸೇವೆಗೆ ಮುಡುಪಾಗಿದ್ದ ಕನ್ಯೆಯರು ಕಾಮುಕ, ಪೂಜಾರಿಗಳ ಕಾಮತೃಷೆಗೆ ಬಲಿಯಾಗಿ ನಡತೆಗೆಟ್ಟು ವೇಶ್ಯೆಯರಾಗುತ್ತಿದ್ದರು.

6 ಮಹಿಳಾ ಚಳುವಳಿ ಹಾಲತಿ ಸೋಮಶೇಖರ್ ಪು.ಸಂ – 167

ಈಗಲೂ ಮಲ್ಲಮ್ಮ, ಹನುಮಾನ್, ಖಂಡೋಬ ದೇವಸ್ಥಾನಗಳಿಗೆ, ಬೆಳಗಾಂನ ಸವದತ್ತಿ ಯಲ್ಲಮ್ಮನಿಗೆ ಲಕ್ಷಮಂದಿ ದೇವದಾಸಿಯರಿದ್ದಾರೆ. ಪ್ರತಿ ತಿಂಗಳೂ 15 ರಿಂದ 20 ಮಂದಿ ಬಾಲಕಿಯರನ್ನು ದೇವರಿಗೆ ಅರ್ಪಿಸುವ ಈ ಅನಿಷ್ಟ ಪದ್ಧತಿ ಕಾನೂನು ಕಣ್ಣು ತಪ್ಪಿಸಿ ಆಚರಿಸಿ ಹೆಣ್ಣಿನ ಜೀವನವನ್ನು ದುರಂತವಾಗಿಸುತ್ತಿದೆ. ವೇಶ್ಯಾವಾಟಿಕೆ ಕೇಂದ್ರವಾಗಿ ಬಾಂಬೆ ಕೆಂಪುದೀಪ ಪ್ರಸಿದ್ಧಿಯಾಗಿದೆ. ಧಾರ್ಮಿಕ ನಂಬಿಕೆ ಮತ್ತು ವೇಶ್ಯಾ ವೃತ್ತಿಗೆಳೆಯುವ ವ್ಯಾಪಾರಿ ಮನೋಭಾವ, ಬಡತನ, ಕುಟುಂಬಗಳ ವಂಶಪಾರಂಪರ್ಯ ಪದ್ಧತಿಯಾಗಿ, ಕುಷ್ಟ ರೋಗಗಳು ಉಲ್ಬಣವಾದಾಗ 'ದೇವದಾಸಿಯ' ಪದ್ಧತಿಗೆ ತಮ್ಮ ಹೆಣ್ಣು ಮಕ್ಕಳನ್ನು ತಳ್ಳಿ ಆ ಮೂಲಕ ಲೈಂಗಿಕ ಆಕಾಂಕ್ಷೆ ಮತ್ತು ಶೋಷಣೆಯು ನಡೆಯುತ್ತಿದೆ.

'ಬೆತ್ತಲೆಸೇವೆ'ನೂ ಸಹ ಪ್ರಸ್ತುತದಲ್ಲಿ ಬಳಕೆಯಲಿದ್ದು, ದೇವದಾಸಿಯರೆಲ್ಲಾ ವೇಶ್ಯೆಯರಾಗದಿದ್ದರೂ, ಅವರನ್ನು ವೇಶ್ಯೆಯರನ್ನಾಗಿ ಮಾಡುವುದು ನಮ್ಮ ಸುತ್ತಲಿನ ವ್ಯವಸ್ಥೆ.

ಹೆಣ್ಣು ವ್ಯಭಿಚಾರಿಣಿಯಾದರೆ ಆಕೆಗೆ ಬದುಕುವ ಹಕ್ಕೇ ಇರಲಿಲ್ಲ. ಆದರೆ ಗಂಡು ವ್ಯಭಿಚಾರನಾದರೆ ಆತನನ್ನು ಸಹಿಸಿಕೊಳ್ಳುವುದಷ್ಟೇ ಅಲ್ಲ ಅವನ ಆಶೋತ್ತರದಂತಿರಬೇಕು ಎಂಬುದಾಗಿತ್ತು. ಇದು ಪ್ರಾಚೀನ ಕಾಲದಿಂದಲೂ ಇಂದಿನ ತನಕವೂ ಈ ತಾರತಮ್ಯ, ಒಬ್ಬೊಬ್ಬರಿಗೆ ಒಂದೊಂದು ನೀತಿ ನಿಯಮಗಳು ಸೃಷ್ಟಿಯಾಗಿವೆ. ಹೆಣ್ಣು ಮಕ್ಕಳು ಜೀವನೋಪಾಯಕ್ಕಾಗಿ ಪಟ್ಟಣಗಳಿಗೆ ತೆರಳಿ ಈ ವೃತ್ತಿಗೆ ಅವಲಂಬಿಸಿರುವುದು, ಹೆಣ್ಣುಮಕ್ಕಳನ್ನು ಮಾರಾಟ ಮಾಡುವುದೂ ಇದೆ. ಅನ್ನ, ಅರಿವೆ, ಆಶ್ರಯಗಳಿಲ್ಲದ ಹೆಣ್ಣುಮಕ್ಕಳನ್ನು ವೇಶ್ಯೆಯರನ್ನಾಗಿಸಿ ಕಾಮಾಂಧರಾದ ಪುರುಷರ ನಿರಂತರ ಅತ್ಯಾಚಾರಕ್ಕೆ ಒಳಗಾಗುವ ಅಮಾನವೀಯ ಶೋಷಣೆ ಇದೆ. ಪುರುಷ ಸಮಾಜ ತನ್ನ ಅನಿರ್ಬಂಧಿತ ಕಾಮುಕತನಕ್ಕೆ ಸ್ವೇಚ್ಛಾಚಾರಿಯಾಗಿ ಹೆಣ್ಣನ್ನು ವೇಶ್ಯಾ ಸಮೂಹಕ್ಕೆ ತಳ್ಳಿ ಸಂತೋಷಪಟ್ಟಿರುವುದನ್ನು ಕಾಣುತ್ತೇವೆ.

ಹೆಣ್ಣು ಪ್ರಾಚೀನ ಕಾಲದಿಂದ ಇಂದಿನ ತನಕವೂ ಪುರುಷನ ಅಧೀನಕ್ಕೆ ಒಳಗಾಗಿ ನಾನಾ ರೀತಿಯ ಸಮಸ್ಯೆಗಳಿಗೆ ಒಳಗಾಗಿ ಆಕೆಯ ಬದುಕು ತುಂಬ ಕ್ಲಿಷ್ಟಕರವಾಗಿಸಿದೆ. ಅವುಗಳಲ್ಲಿ ಪುರುಷನ ಲೈಂಗಿಕಾಸಕ್ತಿಗಳನ್ನು ತಣಿಸುವ ಸಾಧನಗಳಾಗಿ ವೇಶ್ಯಾ ಪದ್ಧತಿ ರೂಪುಗೊಂಡಿದೆ. ಇದಕ್ಕೆ ಕೆಲವು ಸ್ತ್ರೀಯರನ್ನು ಬಳಸಿಕೊಳ್ಳುತ್ತಲೇ ಆಕೆಯನ್ನು ಸಮಾಜಬಾಹಿರವಾಗಿ ಪರಿಗಣಿಸಲಾಗಿದೆ. ಸಮಾಜದ ಒಂದೆಡೆ ಸ್ತ್ರೀಗೆ ಪಾವಿತ್ರ್ಯದ

ಸ್ಥಾನಮಾನಗಳನ್ನು ನೀಡಿ ನಿರ್ಬಂಧಿಸಿದರೆ ಮತ್ತೊಂದೆಡೆ ಆಕೆಯ ಮೇಲೆ ಲೈಂಗಿಕ ಅತಿಕ್ರಮಣವನ್ನು ನಡೆಸಲಾಗುತ್ತಿದೆ.

ಆಧುನಿಕ ಸಮಾಜದಲ್ಲಿ ಭೀಕರ ಪಿಡುಗಾಗಿ ವ್ಯಾಪಿಸುತ್ತಿರುವ ಈ ವೇಶ್ಯಾವೃತ್ತಿಯು ಯಾವಾಗ ಆರಂಭಗೊಂಡಿತೆಂಬುದು ನಿರ್ದಿಷ್ಟಗೊಳ್ಳುವುದಿಲ್ಲ. ಜಗತ್ತಿನ ಅತ್ಯಂತ ಹಳೆಯ ವೃತ್ತಿಗಳಲ್ಲಿ ಒಂದಾಗಿ ಇದನ್ನು ಪರಿಗಣಿಸಲಾಗಿದೆ. ವೇಶ್ಯಾವೃತ್ತಿಯು ಸ್ತ್ರೀಯನ್ನು ಅಪರಾಧ ಸ್ಥಾನದಲ್ಲಿ ನಿಲ್ಲಿಸಿತು, ಸಾಮಾಜಿಕ ಅವಹೇಳನಕ್ಕೆ ಒಳಗಾಗುತ್ತಲೇ ಬಂದಿದೆ.

ಭಾರತೀಯ ಇತಿಹಾಸವನ್ನು ನೋಡಿದರೆ ವೇಶ್ಯಾವೃತ್ತಿ ಯುಗಯುಗಾಂತರಗಳಿಂದಲೂ ತುಂಬಾ ಪ್ರಾಚೀನ ಪದ್ಧತಿಯಾಗಿರುವುದು ಕಂಡುಬರುತ್ತದೆ. ಅರಸರ ಆಳ್ವಿಕೆಯಿಂದಲೇ ಈ ವೃತ್ತಿಯು ಶ್ರೀಮಂತರ, ಅರಸರ ಶ್ರೇಷ್ಠತೆ, ಘನತೆಗಾಗಿ ಮಹಿಳೆಯನ್ನು ಭೋಗದ ವಸ್ತುವನ್ನಾಗಿ ಮಾಡಿಕೊಂಡಿದ್ದರು. ಅಲ್ಲದೆ ಶತ್ರುಗಳ ವಿರುದ್ಧ ಜಯಪಡೆದು ಬರುವಾಗ ತಮ್ಮ ಸೆರೆಯಾಳಾದ ಪುರುಷರ ಜೊತೆಗೆ ಮಹಿಳೆಯರನ್ನು ಕರೆತಂದು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದರು.

ಪುರಾಣ ಪುಣ್ಯಕಥೆಗಳು, ಧರ್ಮಸೂತ್ರಗಳು ಹಾಗೂ ಸಾಹಿತ್ಯ ಕೃತಿಗಳಲ್ಲಿ ವೇಶ್ಯಾವೃತ್ತಿ ಆಚರಣೆಯಲ್ಲಿದ್ದ ಮತ್ತು ಅದರ ನಿಷೇಧದ ಬಗ್ಗೆ ಉಲ್ಲೇಖಗಳಿವೆ. ಮನು 'ಧರ್ಮಶಾಸ್ತ್ರ, ಕೌಟಿಲ್ಯನ ಅರ್ಥಶಾಸ್ತ್ರ, ಮತ್ತು ವಾತ್ಸ್ಯಾಯನನ' 'ಕಾಮಸೂತ್ರ' – ಮುಂತಾದ ಮೇರುಕೃತಿಗಳಲ್ಲಿ ವೇಶ್ಯಾವೃತ್ತಿಯ ಬಗ್ಗೆ ಯಥೇಚ್ಚವಾದ ಉಲ್ಲೇಖಗಳಿವೆ. ಮುಸ್ಲಿಮರ ಆಳ್ವಿಕೆಯು ವೇಶ್ಯಾವೃತ್ತಿಯನ್ನು ಪ್ರೋತ್ಸಾಹಿಸಿ ತೀವ್ರಗೊಳಿಸಿದರೆ, ಬ್ರಟೀಷ್ ಆಡಳಿತದ ತಾತ್ಸಾರದಿಂದ ಹಾಗೂ ಶ್ರೀಮಂತರ ಮತ್ತು ಜಮೀನ್ದಾರರ ಗುತ್ತಿಗೆಯಿಂದ ವೇಶ್ಯಾವೃತ್ತಿಯು ವೃದ್ಧಿಸಿತು ರಾಜರಿಂದ ಮನ್ನಣೆ ಪಡೆದ ಇದು ಅನಾದಿ ಕಾಲದಿಂದಲೂ ಉಳಿದುಕೊಂಡೇ ಇದೆ. ಇದು ಹೀಗೆ ಮುಂದುವರೆದು ಒಂದು ಧರ್ಮದ ಹೆಸರಿನಲ್ಲಿ ದೇವದಾಸಿಯಂತಹ ಆಚರಣೆಗೆ ಕಾರಣವಾಗಿದೆ.

ಇಂತಹ ವೇಶ್ಯಾ ಸಮಸ್ಯೆಯಂತಹ ಸಾಮಾಜಿಕ ಪಿಡುಗಿನ ಬಗ್ಗೆ ತಿಳಿಸಲು, ಅದರ ಹಿನ್ನೆಲೆ, ಪರಿಣಾಮ, ಸ್ವರೂಪ, ಆ ಹಿನ್ನೆಲೆಯಲ್ಲಿ ಹೆಣ್ಣಿನ ಸ್ಥಾನಮಾನಗಳನ್ನು ಆಕೆಯ ಮೇಲಿನ ಪುರುಷರ ದೌರ್ಜನ್ಯ, ಸಮಾಜದ ಪ್ರತಿಕ್ರಿಯೆಗಳನ್ನು ತಿಳಿಸುವಂತಹ ಹಲವಾರು ಕಾದಂಬರಿಗಳು ರಚನೆಯಾಗಿವೆ. ಅದರಲ್ಲೂ ಪ್ರಗತಿಶೀಲ ಸಾಹಿತ್ಯದಲ್ಲಿ ವಿಫುಲವಾಗಿ ಹೆಣ್ಣಿನ ಸುತ್ತಲಿನ ಸಮಸ್ಯೆಗಳನ್ನು ಬಿಂಬಿಸುವ ನಿಟ್ಟಿನಲ್ಲಿ ಕಾದಂಬರಿ ಕಥೆಗಳು ರಚನೆಯಾಗಿವೆ. ಅಂತಹ ಕೆಲವು ಆಯ್ದ ಕಾದಂಬರಿಗಳಲ್ಲಿ ಅಂದರೆ ತ.ರಾ.ಸು ರವರ

ಮಸಣದ ಹೂವು, ಎಂ.ಕೆ.ಇಂದಿರಾರವರ–ಗೆಜ್ಜೆಪೂಜೆ, ತ್ರಿವೇಣಿಯವರ ಹೂವು–ಹಣ್ಣು, ಅ.ನ.ಕೃಷ್ಣರಾಯರ ಶನಿಸಂತಾನ–ಕಾದಂಬರಿಗಳ ಹಿನ್ನೆಲೆಯಲ್ಲಿ ಹೆಣ್ಣಿನ ಸಮಸ್ಯೆಗಳನ್ನೂ, ಅದರಿಂದಾಗುವ ಪರಿಣಾಮಗಳನ್ನೂ ಕುರಿತು ವಿವೇಚಿಸುವ ಕಾರ್ಯ ಈ ನಿಟ್ಟಿನಲ್ಲಿ ನಡೆಯುತ್ತಿದೆ.

ಅಧ್ಯಾಯ–3

ಪ್ರಗತಿಶೀಲ ಸಾಹಿತ್ಯ ಪಂಥ ಮತ್ತು ಕಾದಂಬರಿಗಳು

1945ರ ಸುಮಾರಿಗೆ ಹೊಸದೊಂದು ಗಾಳಿ ಬೀಸಲಾರಂಭಿಸಿತು. ಅದು ಅಖಿಲ ಭಾರತದಲ್ಲಿ ಬೀಸಿದ ಗಾಳಿ. ಈ ಗಾಳಿಯಲ್ಲಿ ಉಸಿರಾಡಿ ಇದರಿಂದ ಚೇತನ ಪಡೆದವರು ತಮ್ಮನ್ನು ಪ್ರಗತಿಶೀಲರು ಎಂದು ಕರೆದುಕೊಂಡರು. ಅದು ಪ್ರಗತಿಶೀಲ ಚಳುವಳಿಯಾಯಿತು.

ಈ ಚಳುವಳಿಗೆ ಕನ್ನಡ ನಾಡಿನಲ್ಲಿ ನಾಯಕತ್ವ ವಹಿಸಿದವರು ಅ.ನ.ಕೃಷ್ಣರಾಯರು. ಈ ಚಳುವಳಿಯನ್ನು ಕುರಿತು ಅವರೇ 1946ರ ಅಕ್ಟೋಬರ್ 27 ರಂದು ಧಾರವಾಡ ಜಿಲ್ಲೆಯ ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪೀಠದಿಂದ ವ್ಯಕ್ತಪಡಿಸಿದ ಕೆಲವು ಅಭಿಪ್ರಾಯವನ್ನು ಅವರ ಮಾತುಗಳಲ್ಲಿಯೇ ಮೊದಲು ಗಮನಿಸಬಹುದು.

"ಜನತೆಯ ಮನೋವಿಕಾಸಕ್ಕೆ ಸಾಹಿತ್ಯ ಸಾಧನವೆಂಬ ಭಾವನೆ ಬೆಳೆಸಲು ಪ್ರಯತ್ನ ಸಾಕಷ್ಟು ಆಗಿಲ್ಲ. ಸಾಹಿತಿ ತನ್ನ ಸ್ವರ್ಣ ಮಂದಿರದಿಂದ ಹೊರಬೀಳಲೊಲ್ಲ; ಸಾಮಾನ್ಯ ತನ್ನ ಹೊಟ್ಟೆಯ ಹೋರಾಟದಲ್ಲಿ ಸಾಹಿತ್ಯಕ್ಕೆ ಗಮನಕೊಡಲೊಲ್ಲ, ಸಾಹಿತ್ಯವೆಂಬ ಮಡಿಕೋಟೆಯನ್ನು ಕಟ್ಟಿಕೊಂಡು ಸುತ್ತಮುತ್ತಲಿನ ಜಗತ್ತಿನ ಹಾಹಾಕಾರದ ಮೇಲೆ ಅವಕುಂಠನ ಹಾಕಿ ತನ್ನ ಭಾವ ಪ್ರಪಂಚದಲ್ಲಿ ಮೈ ಮರೆಯುವ ಸಾಹಿತಿ ತನ್ನ ಅಥವಾ ದೇಶದ ಹಿತವನ್ನು ಸಾಧಿಸಲಾರ. ಮಾಸ್ತಿ ಮತ್ತು ಅವರನ್ನನುಸರಿಸಿದ ಸಾಹಿತಿಗಳು ಒಂದು ವರ್ಗಕ್ಕೆ ಸೇರಿದವರು. ಅವರ ಸಾಹಿತ್ಯ ಸೃಷ್ಟಿ ಆ ವರ್ಗವನ್ನು ಬಿಟ್ಟು ಹೊರಬರಲಿಲ್ಲ. ದಿನದಿನದ ಜೀವನಕ್ಕೆ ಬೇಕಾಗುವುದಕ್ಕಿಂತ ಸ್ವಲ್ಪ ಹೆಚ್ಚು ಗಳಿಸುವವರನ್ನು ಮಧ್ಯಮವರ್ಗ ಎಂದು ಗಣಿಸುವುದಾದರೆ ಅವರ ಅಲ್ಪ ಆಸೆ, ತೃಪ್ತಿ ಕೋಪ ತಾಪಗಳನ್ನೇ ಮಾಸ್ತಿ ಸಾಹಿತ್ಯ ಚಿತ್ರಿಸಿತು. ಈ ವರ್ಗದ ಬಂಧವನ್ನು ಮುರಿದು ಸಾಹಿತ್ಯದ ಅನಂತ ಗುಣಗಳ ಕಡೆಗೆ ಲಕ್ಷ್ಯವಿಟ್ಟು, ಜೀವನದ ಸಿಂಹಪೀಠದ ಮೇಲೆ ನಿಂತವರು ಕೆ.ವಿ.ಪುಟ್ಟಪ್ಪನವರು ಮತ್ತು ದ.ರಾ.ಬೇಂದ್ರೇಯವರು. ತನಗೆ ಸಂಬಂಧವಿಲ್ಲವೆಂದು ಸಾಹಿತಿ ಯಾವುದನ್ನೂ ಹೊರದೂಡುವುದಿಲ್ಲ ಜಗತ್ತಿನ ಪ್ರತಿಯೊಂದು ವಿಷಯವು ಅವನ ಕುಲುಮೆಗೆ ಸೇರಿದೆ. ವರ್ಗ ವೈಷಮ್ಯವನ್ನು ಸಾಹಿತಿ ಕೆರಳಿಸುವುದಿಲ್ಲ ಆದರೆ ಅದರಿಂದ ಒಂದು ಪಕ್ಷಕ್ಕೆ ಅನ್ಯಾಯವಾಗುತ್ತಿದ್ದರೆ ಅವನು ಶಾಂತನಾಗಿರುವುದಿಲ್ಲ. ಅನ್ಯಾಯ, ಕ್ರೌರ್ಯ, ದಬ್ಬಾಳಿಕೆ ಯಾರಲ್ಲಿ ಕಂಡು ಬಂದರೂ ಅವನು ಸಿಡಿದೇಳುತ್ತಾನೆ. ಎಲ್ಲಾ ಸಾಹಿತ್ಯ ಕಲೆಗಳ ಉಗಮಕ್ಕೂ ಸಾಮಾನ್ಯ ಜನತೆಯೇ ಮೂಲ. ಉತ್ತಮ ಕಲೆಯ ತಾಯಿ ಬೇರು ಸಾಮಾನ್ಯ ಜೀವನದಲ್ಲಿದೆ.

ನವೋದಯ ಕಾಲದಲ್ಲಿ ಕನ್ನಡ ಸಾಹಿತಿಗಳು ಜನಪದವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಿಲ್ಲ.

ನವೋದಯ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಪದದೊಂದಿಗೆ ಪೂರ್ಣ ಬರೆಯುವ ಮನೋಭಾವನೆ ಇರಲಿಲ್ಲ. ಆದ್ದರಿಂದಲೇ ಅದರಿಂದ ಅತೃಪ್ತಿ ಹುಟ್ಟಿತು. ನವೋದಯ ಕಾಲದ ಕವಿಗಳು ನಿರ್ವಿಣ್ಣರಾಗಿ ಕುಳಿತಾಗ ಪ್ರಗತಿಶೀಲರು ಜನರಿಗೆ ಧೈರ್ಯ, ಸ್ಥೈರ್ಯಗಳನ್ನು ನೀಡಿದರು. ಕಥೆ, ಕವಿತೆ, ಕಾದಂಬರಿ, ಪ್ರಬಂಧ, ಭಾಷಣಗಳ ಮೂಲಕ ಜನತೆಗೆ ಅದರ ಅಮರತ್ವವನ್ನು ಕಣ್ಣು ಬಿಟ್ಟು ನೋಡುವ ನಿಷ್ಠೆಯೂ ಉದುರಿಸುವ ಕೆಚ್ಚೂ ಕಂಡುಬಂದವು. ಹಳೆಯ ತತ್ವಗಳು ಪುನರ್ ವಿಮರ್ಶೆಗೊಳಗಾದವು. ಪರಂಪರಾಗತವಾಗಿ ಮೌಢ್ಯವನ್ನು ರೂಢಿಸಿಕೊಂಡು ಬಂದಿದ್ದ ಸಾಹಿತ್ಯವನ್ನು ಪ್ರಗತಿಶೀಲರು ಖಂಡಿಸುತ್ತ ಬಂದರು. ಎಂದೋ ಆಗಿಹೋದ ಹರಿಶ್ಚಂದ್ರ, ರಾಮರ ಸತ್ಯಪ್ರಿಯತೆಯನ್ನು ನೆನೆಯುತ್ತ ಕುಳಿತಲ್ಲಿ ಬಂದ ಲಾಭವೇನು? ಪ್ರಜಾಸ್ವಾಮ್ಯ, ಬಂಡವಾಳ ಸ್ವಾಮ್ಯಗಳೆಂಬ ಎರಡೂ ಪಕ್ಷಗಳು ಜಗತ್ತಿನಲ್ಲೆಲ್ಲ ಉದಯಿಸುತ್ತಿವೆ. ಇವೇ ಎರಡು ಜಾತಿಗಳು. ಇವುಗಳ ಮುಂದೆ ಉಳಿದವು ಗೌಣ ಸಾಹಿತಿ ತಾನು ಯಾವ ಜಾತಿಯವನೆಂದು ನಿರ್ಧರಿಸಿಕೊಳ್ಳಬೇಕು. ಸಾಹಿತ್ಯ ವಿಲಾಸದ ಸಾಧನವಲ್ಲ. ದೇಶೋದ್ಧಾರಕ್ಕೆ, ಆತ್ಮೋದ್ಧಾರಕ್ಕೆ ಸಾಧನವಾಗುವ ಗಾಯತ್ರಿಯದು. ಸಾಹಿತಿ ತನ್ನ ಚೇತನದ ಅರಿವನ್ನುಂಟುಮಾಡಿಕೊಂಡು, ಅದರ ಪರಿಪೂರ್ಣ ಪ್ರಯೋಗವನ್ನು ತನ್ನ ನಾಡವರಿಗೆ ಮಾಡಿಕೊಡಬೇಕು. ಅವನ ಕ್ರಾಂತಿ ಖಡ್ಗಕ್ಕೆ ಲೋಕದ ತಾಮಸ ಕಳೆಗಳು ನಡುಗಬೇಕು. ಅದು ದುರ್ಬಲರ ದಲಿತರ, ಬಡವರ ರಕ್ಷಾಕವಚವಾಗಬೇಕು. ಆಗಲೇ ಸಾಹಿತ್ಯದ ಸಾರ್ಥಕ್ಯ ಸಾಹಿತಿಯ ಜನ್ಮಸಾಫಲ್ಯ. ನಾವು ರೋಲಾ ಮಾಯಾಕೋವಸ್ಕಿ, ಗಾರ್ಕಿ, ಸಿಂಕ್ಲೇರ್ ಅವರ ಕೃತಿಗಳನ್ನು ಓದುವಂತೆ ಹೊರಗಿನವರು ನಮ್ಮ ಕೃತಿಗಳನ್ನು ಓದಬೇಡವೇ?"[1]

ಅ.ನ.ಕೃಷ್ಣರಾಯರು ಕನ್ನಡ ನಾಡಿನಲ್ಲಿ ಪ್ರಗತಿಶೀಲ ಲೇಖಕರ ಸಂಘದ ಅಧ್ಯಕ್ಷರಾದರು. ಈ ಕಾಲದ ಸಾಹಿತಿಗಳು ಸಾಹಿತ್ಯದ ವಾಸ್ತವಿಕತೆಗೆ ಮುಸುಕನ್ನು ಹಾಕಿದರು. ಸಾಮಾಜಿಕ ಕ್ರಾಂತಿಯ ವಜ್ರಾಯುಧವಾಗಬೇಕು ಎಂಬ ತಮ್ಮ ದೃಷ್ಟಿಗೆ ಅನುಗುಣವಾಗಿ ಸಣ್ಣ ಕಥೆಗಳನ್ನು ಕಾದಂಬರಿಗಳನ್ನು ಬರೆದರು.

ನವೋದಯ ಲೇಖಕರಂತೆಯೇ ಪ್ರಗತಿಶೀಲರೂ ಬದುಕು ಸ್ವೀಕಾರಾರ್ಹ ಎಂಬ ನಂಬಿಕೆಯಿಂದಲೇ ಬರೆಯುತ್ತಾರೆ. ಕನ್ನಡ ಪ್ರಗತಿಶೀಲ ಸಾಹಿತ್ಯ ಸಾಕಷ್ಟು ಪ್ರಭಾವಶಾಲಿ ಕಾದಂಬರಿಕಾರರನ್ನು ಪ್ರತಿನಿಧಿಸಿದರು.

ಪ್ರಗತಿಶೀಲ ಸಾಹಿತ್ಯ ಮೊಟ್ಟ ಮೊದಲಿಗೆ ಜಗತ್ತಿನಲ್ಲಿ ರೂಪುಗೊಂಡಿದ್ದೇ ಫ್ಯಾಸಿಸ್ಟ್ ಶಕ್ತಿಗಳ ದಬ್ಬಾಳಿಕೆಯಿಂದಾಗಿ ಧೃತಿಗೆಟ್ಟಿದ ಯುರೋಪಿನಲ್ಲಿ. ಭಾರತದಲ್ಲಿ ನಲವತ್ತರ ದಶಕದಲ್ಲಿ

1 ಹೊಸಗನ್ನಡ ಸಾಹಿತ್ಯ ಚರಿತ್ರೆ ಎಸ್.ಎಲ್.ಶೇಷಗಿರಿರಾವ್ ಪು.ಸಂ : 79

ಊಳಿಗಮಾನ್ಯ ಪದ್ಧತಿ, ಬಂಡವಾಳಶಾಹಿ ಮತ್ತು ವಸಾಹತುಶಾಹಿಯನ್ನು ವಿರೋಧಿಸಲೆಂದೇ 'ಪ್ರಗತಿಶೀಲ ಸಾಹಿತ್ಯ' ತನ್ನ ಅಸ್ತಿತ್ವವನ್ನು ಪಡೆದುಕೊಂಡಿತು. ಕರ್ನಾಟಕದಲ್ಲಿ ಅ.ನ.ಕೃ. ನಿರಂಜನ, ತ.ರಾ.ಸು, ಬಸವರಾಜ ಕಟ್ಟೀಮನಿ ಕುಮಾರ ವೆಂಕಣ್ಣ, ಶ್ರೀರಂಗ-ಮುಂತಾದ ಲೇಖಕರು ರಷ್ಯಾದಲ್ಲಿ ಪ್ರಚಲಿತವಾಗಿದ್ದ ಸಮಾಜವಾದೀ ಸಿದ್ಧಾಂತಗಳಿಂದ ಪ್ರಭಾವಿತಗೊಂಡಿದ್ದರು. ಜೊತೆಗೆ ಗಾಂಧೀಜಿಯವರು ಕೈಗೊಂಡಿದ್ದ ರಾಷ್ಟ್ರೀಯ ಚಳುವಳಿ ಹಾಗೂ ಪ್ರಾದೇಶಿಕ ನೆಲೆಯಲ್ಲಿ ಕ್ರಿಯಾತ್ಮಕವಾಗಿದ್ದ ರೈತ ಹಾಗೂ ಕಾರ್ಮಿಕಪರ ಹೋರಾಟಗಳು ಈ ಚಳುವಳಿಯ ಮೇಲೆ ಸಾಕಷ್ಟು ಪ್ರಭಾವ ಬೀರಿತು.

ಸುತ್ತಲಿನ ಸಮಾಜದ ಕೊಳೆಯನ್ನು ತೊಡೆದುಹಾಕುವ ಛಲದಿಂದ ಬರೆದ ಪ್ರಗತಿಶೀಲರು 'ಗೌರವಸ್ಥರು' ಬಚ್ಚಿಡುವ ವಿಷಯವನ್ನು ಆರಿಸಿ ಬರೆದು ಆಷಾಢಭೂತಿತನವನ್ನು ಬಯಲಿಗೆಳೆಯಲು ಪ್ರಯತ್ನಿಸಿದರು. ಮಠಗಳಲ್ಲಿ, ದೇವಾಲಯಗಳಲ್ಲಿ, ಮನೆಗಳಲ್ಲಿ ನಡೆಯುವ ಮೋಸ-ದುಷ್ಟಾಚಾರಗಳನ್ನು ಬಯಲಿಗೆಳೆವುದು ಹಾಗೂ ಲೈಂಗಿಕ ಜೀವನದಲ್ಲಿ ಮೋಸ, ಕಾರ್ಖಾನೆಗಳಲ್ಲಿ ನಡೆಯುವ ಶೋಷಣೆ ಹಲವು ಕೃತಿಗಳ ವಸ್ತುವಾಯಿತು. ಪ್ರಗತಿಶೀಲರು ಬಡತನ, ಜಾತಿ ವ್ಯವಸ್ಥೆ, ವೇಶ್ಯಾ ಸಮಸ್ಯೆ ಮುಂತಾದ ಸಮಕಾಲೀನ ಸಮಸ್ಯೆಗಳನ್ನು ಚಿತ್ರಿಸುವಾಗ ಅವರಿಗೆ ಮುಖ್ಯವಾದುದು ಕೇವಲ ಮೇಲುನೋಟದ ವರ್ತಮಾನ ಮಾತ್ರ.

"ಅ.ನ.ಕೃ. ಅವರ ಮೊದಲ ಕಾದಂಬರಿ'ಜೀವನಯಾತ್ರೆ' ಯಲ್ಲಿಯೆ ಪ್ರತಿಭಟನೆಯ ಅಂಕುರವಿದೆ. "ವ್ಯಭಿಚಾರ, ರೋಗ, ದಾಸ್ಯಗಳೆಲ್ಲದರ ಹಿಂದೆ ಹಸಿವು ಹೆಬ್ಬಾವಿನಂತೆ ಬಾಯ್ತೆರೆದು ಕುಳಿತಿದೆಯೆಂಬುದನ್ನು ತೋರಿಸಿಕೊಡಲು 'ಜೀವನಯಾತ್ರೆ' ಉದ್ದೇಶಿಸಿದೆ" ಎಂದು ಅವರ ಮುನ್ನುಡಿಯಲ್ಲಿ ಅ.ನ.ಕೃ".[2] ಹೇಳಿದರು.

ಪ್ರಗತಿಶೀಲ ಸಾಹಿತ್ಯವು ನವೋದಯಕ್ಕಿಂತ ಭಿನ್ನ. ನವೋದಯ ಸಾಹಿತಿಗಳು ಅಂದಿನ ಸ್ವಾತಂತ್ರ್ಯ ಚಳುವಳಿಗೆಯ ಬಗೆಗೆ ರಾಷ್ಟ್ರಪ್ರೇಮ, ಸ್ವಾಭಿಮಾನ, ನಾಡುನುಡಿ ಬಗ್ಗೆ ಪ್ರೀತಿ, ಐಕ್ಯತೆ, ಸಮಾನತೆ-ಮುಂತಾದ ವಿಚಾರಗಳನ್ನು ಕುರಿತಾದ ಕವಿತೆಗಳು ರಚನೆಯಾದವು. ಅಲ್ಲದೆ ರಾಮಾಯಣ, ಮಹಾಭಾರತದ ಪಾತ್ರ, ವಸ್ತುಗಳನ್ನು ಆಧರಿಸಿ ಕಾವ್ಯಗಳು ರಚನೆಯಾದವು. ಆದರೆ ಸಮಕಾಲೀನ ಸಮಸ್ಯೆ, ಗೊಂದಲಗಳ ಬಗ್ಗೆ ಹೆಚ್ಚಾಗಿ ಚಿತ್ರಿಸುವ ಸಾಹಿತ್ಯವು ಕಡಿಮೆಯಾಗಿದ್ದವು. ಅಲ್ಲದೆ ಈ ಅವಧಿಯಲ್ಲಿ ಭಾವಗೀತೆ, ದೇಶಭಕ್ತಿಗಳು ಹೆಚ್ಚು ರಚನೆಯಾಗಿ ಇತರ ಸಾಹಿತ್ಯ ಪ್ರಕಾರಗಳಲ್ಲಿ ಸಾಹಿತ್ಯ ರಚನೆಯೂ ಅಲ್ಪಮಟ್ಟಿಗಾಗಿದೆ. ಆದರೆ ಪ್ರಗತಿಶೀಲ ಸಾಹಿತ್ಯವು ನವೋದಯ ಸಾಹಿತ್ಯದ ಪ್ರಭಾವಕ್ಕೆ ಒಳಗಾದರೂ ಭಿನ್ನವಾದ ಆಶಯ, ಉದ್ದೇಶಗಳ ಹಿನ್ನೆಲೆಯಲ್ಲಿ ಬೆಳೆದು ಬಂದಿತು. ಜನತೆಯ ಮನೋವಿಕಾಸಕ್ಕೆ

2 ಹೊಸಗನ್ನಡ ಸಾಹಿತ್ಯ ಎಸ್.ಎಲ್. ಶೇಷಗಿರಿರಾವ್ ಪು.ಸಂ. 63

ಸಾಹಿತ್ಯ ಸಾಧನವೆಂಬ ಭಾವನೆ ಬೆಳೆಸುವ ಪ್ರಯತ್ನ ನಡೆಯಿತು. ಈ ಅವಧಿಯಲ್ಲೇ ಹೆಚ್ಚಾಗಿ ಕಾದಂಬರಿ, ಕತೆ, ಪ್ರಬಂಧ–ಸಾಹಿತ್ಯಗಳು ಗಣನೀಯ ಪ್ರಮಾಣದಲ್ಲಿ ರಚನೆಯಾದವು. ಇವರ ಕಾದಂಬರಿಗಳು ಸಮಾಜವನ್ನು, ಅದರಲ್ಲಿನ ಉತ್ಪಾದನೆಯನ್ನು ನಂಬಿ ಬದುಕುವ ಜನರ ಬದುಕಿನ ಚಿತ್ರವನ್ನು ಸಾಹಿತ್ಯದಲ್ಲಿ ಬಿಂಬಿಸಲಾಯಿತು. ಪರಂಪರಾಗತವಾಗಿ ಮೌಢ್ಯವನ್ನು ರೂಢಿಸಿಕೊಂಡು ಬಂದಿದ್ದ ಸಾಹಿತ್ಯವನ್ನು ಪ್ರಗತಿಶೀಲರು ಖಂಡಿಸುತ್ತಾ ಬಂದರು.

ಪ್ರಗತಿಶೀಲ ಕಾದಂಬರಿಗಳು ವಾಸ್ತವದ ಘಟನೆಗಳ ಹಿನ್ನೆಲೆಯನ್ನು ಹೊಂದಿದ್ದವು. "ಜೀವನದ ನಾನಾ ಸಮಸ್ಯೆಗಳ ಮೂಲೆ ಮೂಲೆಗಳನ್ನು ಹುಡುಕಿ ನೋಡುವೆನೆಂಬ ಎಚ್ಚರ, ಸತ್ಯದ ಹಂಬಲ ಉದ್ದಕ್ಕೂ ನನಗೆ ಕಂಡುಬಂದಿದೆ. ಯಾವ ತತ್ವಕ್ಕೇ ಆಗಲೀ, ವಾದಕ್ಕೇ ಆಗಲೀ, ಸಿದ್ಧಾಂತಕ್ಕೇ ಆಗಲೀ ಕಟ್ಟುಬೀಳದೆ ತನ್ನ ಅನುಭವಕ್ಕೆ ಬಂದುದನ್ನು, ತನಗೆ ಸತ್ಯವೆಂದು ಕಂಡುದನ್ನು ಹೇಳುವ ಎದೆಗಾರಿಕೆ ಮತ್ತು ಸತ್ಯವನ್ನು ಹುಡುಕುವುದಕ್ಕೆ ಅತ್ಯಾವಶ್ಯವಾದ ತಾಳ್ಮೆ ಈ ಎರಡು ಉತ್ತಮ ಗುಣಗಳು ಕಾದಂಬರಿಯಲ್ಲಿವೆ."[3] ಎಂಬ ಮಾತುಗಳು ಕಟ್ಟೀಮನಿಯವರ ಕಾದಂಬರಿಗಳಲ್ಲಿ ಆ ಗುಣಗಳು ನಿಜವೆನಿಸಿವೆ.

ಪ್ರಗತಿಶೀಲ ಕಾದಂಬರಿಗಳು ಸಮಕಾಲೀನ ಸಮಸ್ಯೆಗಳ ಕಡೆಗೆ ಬೆಳಕು ಚೆಲ್ಲಿವೆ. ನಿರುದ್ಯೋಗ, ಬಡತನ, ಕಾರ್ಮಿಕರ ಸಮಸ್ಯೆ, ಹೆಣ್ಣಿನ ಮೇಲೆ ಗಂಡಿನ ನಾನಾ ರೀತಿಗಳಲ್ಲಿನ ದೌರ್ಜನ್ಯ– ಹೀಗೆ ಹತ್ತು ಹಲವು ದಿಕ್ಕುಗಳನ್ನು ಚಿತ್ರಿಸಿದ್ದಾರೆ. 'ಪ್ರಗತಿಶೀಲ' ಎಂಬ ಪದದ ಅರ್ಥ ಮುಂದೆ ಹೋಗು, ಪ್ರಗತಿ ಹೊಂದು. ಆದರೆ ಇವರ ಕಾದಂಬರಿಗಳಲ್ಲಿ ಅಂತಹ ಸಮಸ್ಯೆಗಳಿಂದ ಮುಕ್ತಿ ಹೊಂದಿ ಮುಂದೆ ಸಾಗುವ, ಪರಿವರ್ತನೆಗೆ ಪ್ರಚೋಧನೆ ನೀಡುವಂತಹ ಯಾವ ಅಂಶಗಳು ಹಚ್ಚಾಗಿಲ್ಲ. ಜಾತೀಯತೆಯಲ್ಲಿ ಪರಿವರ್ತನೆಯ ಪ್ರಯತ್ನ ನಡೆದಿರಬಹುದು. ಆದರೆ ಮೂಲತಃ ಇಲ್ಲಿನ ಸಮಸ್ಯೆಗಳಿಗೆ ಪರಿಹಾರ, ಬದಲಾವಣೆ ಇಲ್ಲದೆ ಸಮಾಜದ ಯತಾವತ್ತಾದ ಚಿತ್ರಣ ಇಲ್ಲಿದೆ.

ಹಲವಾರು ಸಾಮಾಜಿಕ ಸಮಸ್ಯೆಗಳನ್ನು ಆಧರಿಸಿ ಪ್ರಗತಿಶೀಲರು ಕಾದಂಬರಿ, ಸಣ್ಣ ಕಥೆಗಳಲ್ಲಿ ಅದರ ಸ್ವರೂಪ, ಲಕ್ಷಣಗಳು, ಸಮಾಜದ ಮೇಲೆ ಅದರ ಪರಿಣಾಮಗಳನ್ನು ಚಿತ್ರಿಸಿದ್ದಾರೆ. ಅಂತಹ ವೇಶ್ಯೆಯ ಸಮಸ್ಯೆಯನ್ನು ಆದರಿಸಿ ಅದರ ಬಗ್ಗೆ ಅನೇಕರು ಕಾದಂಬರಿ, ಕಥೆಗಳನ್ನು ರಚಿಸಿದ್ದಾರೆ. ನಿರಂಜನರ ಸಣ್ಣಕಥೆ 'ಕೊನೆಗಿರಾಕಿ' ಒಂದು ಅಮಾಯಕ, ಮೂಕ ಹೆಣ್ಣಿನ ಮೇಲೆ ಎಂತಹ ಕ್ರೂರ ಅತ್ಯಾಚಾರ ಎಂಬುದನ್ನು ಹೇಳಿ ಆ ಹಿಂಸೆಗೆ ಒಳಗಾಗಿ ಸತ್ತ ಮೇಲೂ ಕೊನೆಯ ಗಿರಾಕಿಯಾಗಿ ಹದ್ದಿನ ದಾಳಿಯನ್ನು ಕುರಿತು ರಚಿಸಿದ್ದಾರೆ.

3 ಪ್ರಗತಿಶೀಲತೆ ಹೆಚ್.ಎಸ್.ರಾಘವೇಂದ್ರರಾವ್ ಪು.ಸಂ.79

ಇನ್ನೂ ಕಾದಂಬರಿಗಳು ಸಾಕಷ್ಟು ರಚನೆಯಾಗಿದ್ದು, ಈ ಸಮಸ್ಯೆಯನ್ನು ಇಲ್ಲಿನ ಬದುಕಿನ ಕ್ರೂರ ವರ್ತನೆ, ತಿರಸ್ಕಾರ, ನಿಂದನೆ,ರೋಗ-ರುಜಿನಗಳು ಬಿಂಭಿತವಾಗಿವೆ. ಅ.ನ.ಕೃಷ್ಣರಾಯರ 'ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು, ಕಬ್ಬಿಣದ ಕಾಗೆ ಮುಂತಾದ ಕಾದಂಬರಿಗಳು, ತ್ರಿವೇಣಿಯವರ ಹೂವು-ಹಣ್ಣು, ಎಂ.ಕೆ.ಇಂದಿರಾರವರ ಗೆಜ್ಜೆಪೂಜೆ, ತ.ರಾ.ಸು ಅವರ ಮಸಣದ ಹೂವು, ಮುಂಜಾವಿನಿಂದ ಮುಂಜಾವು ಕಾದಂಬರಿಗಳು, ಬಸವರಾಜ ಕಟ್ಟೀಮನಿಯವರ ಮೋಹದ ಬಲೆಯಲ್ಲಿ, ಜರತಾರಿ ಜಗದ್ಗುರು, ಜ್ವಾಲಾಮುಖಿಯ ಮೇಲೆ, ಬೀದಿಯಲ್ಲಿ ಬಿದ್ದವಳು ಮುಂತಾದ ಕಾದಂಬರಿಗಳು, ಅರ್ಚಕ ವೆಂಕಟೇಶರ ಅಸ್ತಿಪಂಜರ, ವಿ.ಎಂ.ಇನಾಂದಾರರ ಶಾಪ, ಮಂಜು ಮುಸುಕಿದ ದಾರಿ, ಇನ್ನು ಮುಂತಾದ ಕಾದಂಬರಿಗಳು ವೇಶ್ಯಾ ಸಮಸ್ಯೆಯನ್ನು ಕಥಾ ವಸ್ತುವನ್ನಾಗಿ ಒಳಗೊಂಡಿವೆ. ಇದೇ ಅವಧಿಯಲ್ಲಿ ಬಂದಂತಹ 'ಅಗ್ನಿ ಕನ್ಯೆ' ಕಥಾ ಸಂಕಲನವು ಈ ಸಮಸ್ಯೆಯತ್ತ ಬೆಳಕು ಚೆಲ್ಲಿದೆ.

ಇದರ ಜೊತೆಗೆ ನವೋದಯ ಕಾಲದ ಪ್ರಮುಖ ಲೇಖಕರಾದ ಶಿವರಾಮ ಕಾರಂತರ 'ಮೈಮನಗಳ ಸುಳಿಯಲ್ಲಿ' ಕಾದಂಬರಿಯು ವೇಶ್ಯೆಯರ ಜೀವನ, ಅಂತರಂಗಗಳನ್ನು ಕುರಿತು ಚಿತ್ರಸಿದ್ದಾರೆ.

ಹೀಗೆ ಇನ್ನೂ ಹಲವು ಕವಿಗಳು ಎಲ್ಲಾ ಸಾಹಿತ್ಯ ಪಂಥಗಳಲ್ಲೂ ಸಾಮಾಜಿಕ ಸಮಸ್ಯೆಯನ್ನು ಪ್ರತಿಬಿಂಬಿಸುವ ಸಾಹಿತ್ಯವನ್ನು ರಚಿಸಿದ್ದಾರೆ. ಪ್ರಮುಖವಾಗಿ ಪ್ರಗತಿಶೀಲ ಚಳುವಳಿಗಾರರು ಇಂತಹ ಸಮಸ್ಯೆಯನ್ನು ಆಧರಿಸಿ ಕಾದಂಬರಿಗಳನ್ನು ಹೆಚ್ಚಾಗಿ ರಚಿಸಿದ್ದಾರೆ. ಆದರೆ ಸಮಸ್ಯೆ ಒಂದೇ ಆದರೂ ಅವರು ಬಳಸುವ ಭಾಷೆ, ಕಥಾ ಸಂವಿದಾನ, ಪಾತ್ರಗಳ ಮೂಲಕ ಕವಿಯ ಆಶಯ, ಸಾಮಾಜಿಕ ಪ್ರತಿಕ್ರಿಯೆ, ಹೆಣ್ಣಿನ ಬಗ್ಗೆ ಗಂಡಿನ ಮನೋಭಾವ, ಹೆಣ್ಣಿನ ಅಂತರಂಗ ಇವುಗಳ ರಚನೆಯಲ್ಲಿ ಭಿನ್ನತೆಗಳಿರುವುದನ್ನು ಕಾಣಬಹುದು.

ಅಧ್ಯಾಯ-4
ಪ್ರಗತಿಶೀಲ ಕಾದಂಬರಿಗಳ ಕಥಾ ನಿರೂಪಣೆ

ಹೂವು-ಹಣ್ಣು : ತ್ರಿವೇಣಿ

ತ್ರಿವೇಣಿಯವರ 'ಹೂವು-ಹಣ್ಣು' ಕಾದಂಬರಿಯು ಪ್ರಾರಂಭವಾಗುವುದು ರಮಾ ತನ್ನ ಗಂಡನನ್ನು ಕಳೆದುಕೊಂಡು ಮಕ್ಕಳಿಗೆ ಮಿಠಾಯಿ ಹಂಚುವ ಕಾರ್ಯದಿಂದ.

ವಾಸು ಚಿಕ್ಕಂದಿನಲ್ಲೇ ತಂದೆ ತಾಯಿಯನ್ನು ಕಳೆದುಕೊಂಡು, ಅಣ್ಣ ಅತ್ತಿಗೆಯ ಆಶ್ರಯದಲ್ಲಿ ಬೆಳೆದನು. ಈತ ಇಷ್ಟಪಟ್ಟ ರಮಾಳನ್ನು ಮದುವೆಯಾದ ದಿನದಿಂದ ಕುಟುಂಬದಲ್ಲಿ ಜಗಳ ಪ್ರಾರಂಭವಾಗಿ, ವಜ್ರದ ಮೂಗುತಿ ಕಳೆದುಹೋದುದರ ಕದನದಿಂದ ಮನೆ ಬಿಟ್ಟು ವಾಸು ಮತ್ತು ರಮಾ ಬೇರೆ ಬರುತ್ತಾರೆ.

ವಾಸು ಕೆಲಸಕ್ಕಾಗಿ ಅಲೆದು ಕೊನೆಗೆ ಚಿನ್ನದ ಅಂಗಡಿಯಲ್ಲಿ ಶೆಟ್ಟಿಯ ಬಳಿ ಕೆಲಸಕ್ಕೆ ಸೇರಿ ತನ್ನ ಸಂಸಾರವನ್ನು ದೂಗಿಸುತ್ತಾನೆ. ಇವರ ಪ್ರೀತಿಯ ದಾಂಪತ್ಯದಲ್ಲಿ 'ಶೀಲಾ' ಎಂಬ ಹೆಣ್ಣು ಮಗು ಹುಟ್ಟುತ್ತದೆ. ಈ ನಡುವೆ ವಾಸು ಅಕಾಲ ಮರಣಕ್ಕೆ ಬಲಿಯಾಗುತ್ತಾನೆ.

ಗಂಡನನ್ನು ಕಳೆದುಕೊಂಡ 'ರಮಾ'ಳ ಮೇಲೆ ಬೀದಿ ನಾಯಿಗಳಂತೆ ಗಂಡಿನ ಹದ್ದಿನ ಕಣ್ಣುಗಳು ಪ್ರಾರಂಭವಾಗುತ್ತವೆ. ವಾಸು ಕೆಲಸ ಮಾಡುತ್ತಿದ್ದ ಅಂಗಡಿಯ ಶೆಟ್ಟಿ, ತನ್ನ ಕೆಲಸಗಾರ ಮರಣಕ್ಕೆ ಒಳಗಾದುದ್ದನ್ನು ಕುರಿತು ದುಃಖ, ಸಂತಾಪ ಸೂಚಿಸಿ ಸಹಾಯ ಮಾಡಲು ಬರುತ್ತಾನೆ. ಆದರೆ ಈ ಸಂದರ್ಭವೇ ಶೆಟ್ಟಿಗೆ ರಮಾಳ ಸೌಂದರ್ಯ ಕಣ್ಣು ಕುಕ್ಕಿ, ಅವಳಿಗೆ ಸಹಾಯದ ನೆಪದಲ್ಲಿ ಆಂತರ್ಯದ ಕಾಮಾಸಕ್ತಿಯಲ್ಲಿ ಪದೇ ಪದೇ ಮನೆಗೆ ಬರುವುದು, ಅದನ್ನ ಕಂಡ ಅಕ್ಕ ಪಕ್ಕದ ಜನರು ಆಕೆಯ ಬಗೆಗಿನ ತಾತ್ಸಾರ, ಅಕ್ರಮ ಸಂಬಂಧದ ಕಲ್ಪನೆ ಕಟ್ಟಿ ಬಣ್ಣ ಬಳಿಯುತ್ತಾರೆ. ಕೊನೆಗೆ ರಮಾ ಶೆಟ್ಟಿಯನ್ನು ಬಯ್ದು ಮನೆಗೆ ಬಾರದೆ ಇರುವ ಹಾಗೆ ತಡೆಯುತ್ತಾಳೆ.

ನಂತರ ಆ ಮನೆಯ ಯಜಮಾನ ರಂಗಯ್ಯ ಆಕೆಯಲ್ಲಿ ಬಾಡಿಗೆಯನ್ನು ಕೇಳಲು ಬರುತ್ತಾನೆ. ಆಕೆಗೆ ಸಂಬಂಧಿಕರಿಲ್ಲವೆಂದು ತಿಳಿದು, ಗಂಡ ಸತ್ತಿದ್ದಾನೆ, ಬಡತನ, ಹೆಣ್ಣು ಮಗುವಿದೆ, ಎಂಬ ಕಾರಣಕ್ಕೆ ನಾನು ಹೇಳಿದಂತೆ ಕೇಳುತ್ತಾಳೆಂದುಕೊಂಡ ರಂಗಯ್ಯನ ಕಲ್ಪನೆ ಹುಸಿಯಾಗುತ್ತದೆ.

ಹೆಜ್ಜೆ-ಹೆಜ್ಜೆಗೂ ತಾನು ಮಾನವಾಗಿ ಬದುಕಲು ಹೋರಾಡುತ್ತಿದ್ದರೆ ಜನರು ತಮ್ಮ

ಮಾತಿನ ತುಳಿತಕ್ಕೆ ತನ್ನ ಬದುಕನ್ನು ಸಿಕ್ಕಿಸಿ ಹೊಸಕಿ ಹಾಕುತ್ತಿರುವುದನ್ನು ನೋಡಿ ರಮಾ ದಾರಿ ಕಾಣದಾಗುತ್ತಾಳೆ. ರಮಾ ತನ್ನ ಮಗಳ ಜೊತೆ ಅಂಗಡಿ ಸಾಮಾನು ತರಲು ಹೋದ ಸಂದರ್ಭದಲ್ಲಿ ಅಂಗಡಿಯಾತ ಬಸವಯ್ಯ ಆಕೆಯನ್ನು ನೋಡುತ್ತ ಅಂಗಡಿಯ ಕೆಲಸವನ್ನು ಏರುಪೇರುಗೊಳಿಸುತ್ತಾನೆ. ಅಷ್ಟು ಗಂಡಸರ ನಡುವೆ ಒಂದು ಹೆಣ್ಣು ರಮಾ ನಿಂತಿದ್ದರೂ ಆಕೆಯನ್ನು ಕಾಮದ ದೃಷ್ಟಿಯಿಂದಲೇ ನೋಡುತ್ತಾ ಆಕೆಗೆ ಸಾಮಾನುಗಳನ್ನು ಕೊಡುವುದರಲ್ಲಿ ನಿರ್ಲಕ್ಷ್ಯ ತೋರುತ್ತಾನೆ.

ರಮಾ ಸಾಮಾನುಗಳ ಪೊಟ್ಟಣ ಕಟ್ಟಿ, ತಗೊಳ್ಳಿ ಎಂದಾಗ ರಮಾಳ ಕೈಗೆ ತನ್ನ ಒರಟಾದ ಕಪ್ಪು ಬೆರಳುಗಳು ಆಕೆಯ ಕೋಮಲವಾದ ಬಿಳಿಯ ಕೈ ಬೆರಳುಗಳನ್ನು ಸವರಿದ ನಂತರ ಆಕೆಯನ್ನು ಕುರಿತು ತನ್ನ ಅಂಗಡಿ ಕೆಲಸಗಾರನಿಗೆ ಕಣ್ಣು ಸನ್ನೆ ಮಾಡಿ ತೋರಿಸುತ್ತಾನೆ.

ಅನಂತರ ರಮಾ ಕೆಲಸವನ್ನು ಕೇಳಿಕೊಂಡು ಕಾರ್ಖಾನೆಯೊಂದಕ್ಕೆ ಹೋದ ಸಂದರ್ಭದಲ್ಲಿ ಅವರು ಆಕೆಯನ್ನು ಕಾಮದ ದೃಷ್ಟಿಯಿಂದಲೇ ನೋಡುತ್ತಾರೆ. ಅಲ್ಲದೆ ಅವರು ಸಂಬಳ ಕೊಡುವಾಗ ಅಧಿಕ ಹಣವನ್ನು ನೀಡಿ ತಮ್ಮ ಆಸೆಗಾಗಿ ಆಹ್ವಾನಿಸುತ್ತಾರೆ. ಆಗ ಅದನ್ನು ನಿರಾಕರಿಸಿ ಅವರ ವರ್ತನೆಯನ್ನು ಅದನ್ನು ಸಹಿಸದೆ ಆ ಕೆಲಸ ತ್ಯಜಿಸಿ ಸರ್ಕಾರಿ ಆಫೀಸರೊಬ್ಬರ ಮನೆಯಲ್ಲಿ ಅಡಿಗೆಯ ಕೆಲಸಕ್ಕೆ ಸೇರುತ್ತಾಳೆ ಅಲ್ಲಿನ ತಂದೆ ತಾಯಿಗಳು ತುಂಬಾ ಪ್ರೀತಿ, ವಿಶ್ವಾದಿಂದ ನಡೆದುಕೊಂಡರೂ, ಅವರ ಮಗ ರಾಜನ ಕಣ್ಣುಗಳು ಆಕೆಯ ಮೇಲೆ ಬೀಳುತ್ತವೆ. ಒಂದು ದಿನ ರಾತ್ರಿ ವೇಳೆ ತಡವಾಗಿ ಬಂದ ರಾಜನಿಗೆ ಊಟ ಬಡಿಸುವಾಗ ತಾಯಿಯ ಸ್ಥಾನದಲ್ಲಿರುವಂತಹ ರಮಾಳ ಮೇಲೆ ಬಲತ್ಕಾರ ಮಾಡುತ್ತಾನೆ. ಇದರಿಂದಲೂ ತಪ್ಪಿಸಿಕೊಂಡು ಆ ಮನೆಯವರಿಗೆ ಕಾರಣ ತಿಳಿಸದೆ ಬಿಟ್ಟು ಬರುತ್ತಾಳೆ.

ಅನಂತರ ಶ್ರೀನಿವಾಸ ನರ್ಸಿಂಗ್ ಹೋಂನಲ್ಲಿ ಕೆಲಸಕ್ಕೆ ಸೇರುತ್ತಾಳೆ. ಅಲ್ಲಿನ ಡಾಕ್ಟರ್ ಶ್ರೀಧರನ್ ಒಳ್ಳೆಯ ವ್ಯಕ್ತಿಯಾದರೂ ಸಹ ಆತನ ಅಸಿಸ್ಟೆಂಟ್ ಆದ ಮುರುಗಪ್ಪ ಬಹಳ ಕಾಮದ ವ್ಯಕ್ತಿ, ಒಂದು ದಿನ ರೋಗಿಗೆ ಉಪಚರಿಸುವಾಗ ಆತನೂ ಸಾವಿನ ಸ್ಥಿತಿಯನ್ನು ಅರಿಯದಂತೆ ರಮಾಳನ್ನು ಮೋಹಿಸುತ್ತಾನೆ. ನಂತರ ಮುರುಗಪ್ಪನು ಡಾಕ್ಟರ್ ಇಲ್ಲದ ವೇಳೆಯಲ್ಲಿ ಆಕೆಯ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಆತನ ಕೈಗಳನ್ನು ಕಚ್ಚಿ ಅಲ್ಲಿಂದಲೂ ತಪ್ಪಿಸಿಕೊಂಡು ಬರುತ್ತಾಳೆ.

ಹೀಗೆ ರಮಾ ಯಾರನ್ನೇ ನೋಡಲಿ, ಎಲ್ಲೇ ಹೋಗಲಿ ತನ್ನ ದೇಹವನ್ನು

ಬಯಸುತ್ತಿದ್ದ ಕಾಮುಕ ಪಶುಗಳೇ ಸಿಗುತ್ತಿದ್ದರು. ಅಂತಹ ಗಂಡು ಜಾತಿಯ ಬಗ್ಗೆ ತಿರಸ್ಕಾರ, ದ್ವೇಷ, ಜುಗುಪ್ಸೆ ತಾಳುತ್ತಾಳೆ. ಈ ವೇಳೆಗಾಗಲೇ ಅಕ್ಕಪಕ್ಕದ ಜನರು ಈಕೆಯ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದರು. ಇದರಿಂದ ಮಾನಸಿಕವಾಗಿ ಕುಗ್ಗಿಹೋದ ರಮಾ ಜನರ ಮಾತನ್ನು ನಿಜಮಾಡಬಾರದೇಕೆ? ಎಂದು ಚಿಂತಿಸುತ್ತಾಳೆ. ಆಗ ತಾನು, ತನ್ನ ಮಗಳು ಶೀಲಾ ಸುಖವಾಗಿರಬಹುದು ಎಂದು ಭಾವಿಸಿ ತನ್ನ ಮಗಳಿಗಾಗಿ, ತನ್ನ ಬದುಕಿನ ನಿರ್ವಹಣೆಗಾಗಿ ಶೆಟ್ಟಿಯ ಬಳಿಗೆ ಹೋಗಿ ಮನಸ್ಸಿಚ್ಚೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾಳೆ. ಇಲ್ಲಿಂದ ರಮಾಳ ಮತ್ತೊಂದು ಬದುಕಿನ ಪ್ರಪಂಚ ಪ್ರಾರಂಭವಾಗುತ್ತದೆ. ಶೆಟ್ಟಿಯ ಆಸೆಯಂತೆ ನಡೆದುಕೊಂಡಿದ್ದರಿಂದ ತನ್ನ ಮನೆಯ ಬದಲಾವಣೆ, ಒಳ್ಳೆಯ ಉಡುಪುಗಳು, ಹೊಟ್ಟೆ ತುಂಬಾ ಊಟ, ತನ್ನ ಮಗಳ ವಿದ್ಯಾಭ್ಯಾಸ ದೊರಕುತ್ತದೆ.

ಶೆಟ್ಟಿಯ ಹೆಂಡತಿ ತವರಿನಿಂದ ಬಂದ ನಂತರ ರಮಾ ಮತ್ತು ಶೆಟ್ಟಿಯ ಸಂಬಂಧ ನಿಲ್ಲುತ್ತದೆ. ಶೆಟ್ಟರು ಬರುವುದನ್ನು ನಿಲ್ಲಿಸಿದ ಮೇಲೆ ಇತರ ಜನರಿಗೆ ಅವಳ ಮೇಲೆ ದೃಷ್ಟಿ ಬೀಳುತ್ತದೆ. ಶೆಟ್ಟರ ನಂತರ ಕಾಲೇಜು ವಿದ್ಯಾರ್ಥಿ ಪ್ರಯತ್ನಿಸಿ ಸೋಲುತ್ತಾನೆ. ಚಿಲ್ಲರೆ ಅಂಗಡಿಯ ಕರಿಯಪ್ಪ, ಸರ್ಕಾರಿ ಹುದ್ದೆಯಲ್ಲಿದ್ದ ಆಫೀಸರ್ ಸುಬ್ಬಯ್ಯ– ಹೀಗೆ ಒಬ್ಬರಾದ ಮೇಲೆ ಒಬ್ಬರು ರಮಾಳ ಸ್ನೇಹ ಸುಖವನ್ನು ಸಂಪರ್ಕಿಸುತ್ತಾರೆ. ಈ ವೇಳೆಗಾಗಲೇ ರಮಾ ತನ್ನ ಮಗಳು ಈ ವೃತ್ತಿಗೆ ಸಿಲುಕದಂತೆ ಕ್ರೈಸ್ತ ಶಾಲೆಯ ಮದರ್‌ಗೆ ತನ್ನ ಸ್ಥಿತಿಯನ್ನು ವಿವರಿಸಿ ಆ ಮೂಲಕ ತನ್ನಿಂದ ಶೀಲಾಳನ್ನು ದೂರ ಮಾಡಿಕೊಳ್ಳುಸತ್ತಾಳೆ.

ರಮಾಳ ಬದುಕು ಹಣಕಾಸಿನ ತೊಂದರೆಗಳಿಲ್ಲದಂತೆ ಸಾಗುತ್ತದೆ. ಇತ್ತ ಆಕೆಯ ಮಗಳು ಶೀಲ ಸೀನಿಯರ್ ಇಂಟರ್‌ನಲ್ಲಿ ಓದುತ್ತಿದ್ದು, ತನ್ನ ಗುರುಗಳಾದ ಜಯಂತ ಮತ್ತು ಶೀಲಾಳ ನಡುವೆ ಪ್ರೀತಿ ಉಂಟಾಗಿ 'ಮದರ್'ರವರ ಒಪ್ಪಿಗೆಯಿಂದ ವಿವಾಹ ಏರ್ಪಡುತ್ತದೆ.

ರಮಾ ತನ್ನ ಮಗಳ ವಿವಾಹವನ್ನು ಕಂಡು, ಕೇಳಿ ತುಂಬಾ ಸಂತೋಷಪಟ್ಟ ತನ್ನ ಜನ್ಮ ಸಾರ್ಥಕತೆಯ ತೃಪ್ತಿ ಪಡೆಯುತ್ತಾಳೆ. ಈ ವೇಳೆಗೆ ರಮಾ ಎಲ್ಲಾ ರೀತಿಯ ಕೆಟ್ಟ ದುಶ್ಚಟಗಳಿಗೆ ಬಲಿಯಾಗಿ ಆಕೆಯ ವಯಸ್ಸು ಹೆಚ್ಚಿದಂತೆ ಅವಳ ಮೇಲಿನ ಮೋಹ, ಬೇಡಿಕೆ ಕುಸಿಯುತ್ತದೆ. ಆಗ ರಮಾ ತನ್ನ ಹಸಿವನ್ನು ನೀಗಿಸಿಕೊಳ್ಳಲು ಸಿನೆಮಾ, ಪಾರ್ಕುಗಳಲ್ಲಿ ಮೋಹಕ ನಗೆಯಿಂದ ಇತರರನ್ನು ಆಕರ್ಷಿಸುವ ಪ್ರಯತ್ನವು ವಿಫಲವಾಗಿ ಬರುವ ಆದಾಯ ನಿಲ್ಲುತ್ತದೆ. ಇದರಿಂದ ಮನೆ ಬಾಡಿಗೆ ನೀಡಲು ಸಾಧ್ಯವಾಗದೆ ರಾತ್ರೋರಾತ್ರಿ ತಾನು ಆಸರೆ ನೀಡಿದ ಬಾಲುವಿನ ಜೊತೆ ಪುಟ್ಟ ಗುಡಿಸಲಿಗೆ ಬಂದು ಸೇರುತ್ತಾಳೆ.

ಸದಾಕಾಲ ಆಕೆಯ ಬಳಿ ಸಾಲಾಗಿ ನಿಲ್ಲುತ್ತಿದ್ದ ಜನರಿಗಾಗಿ ಇಂದು ಆಕೆ ತನ್ನ ಕೃತಕ ಅಲಂಕಾರದಿಂದ ಪ್ರದರ್ಶಿಸಿಕೊಳ್ಳುತ್ತಾಳೆ. ತನ್ನ ಹೊಟ್ಟೆ ಹೊರೆಯುವುದಕ್ಕಾಗಿ ಬೀದಿಯಲ್ಲಿ ಕುಳಿತು ಕೃತಕ ರೂಪ ಸೌಂದರ್ಯವನ್ನು ಸಿದ್ಧ ಮಾಡಿ ಇತರರನ್ನು ಆಕರ್ಷಿಸುತ್ತಾಳೆ. ಈ ವೇಳೆಗಾಗಲೆ ಎಲ್ಲಾ ರೀತಿಯ ರೋಗಗಳು ರಮಾಳನ್ನು ಆವರಿಸಿ ಡಾಕ್ಟರ್ ಹತ್ತಿರ ತೋರಿಸಲು ಹೋದಾಗ ಡಾಕ್ಟರ್‌ನ ಅಸಿಸ್ಟೆಂಟಾಗಿದ್ದ ಮುರುಗಪ್ಪ ಈಕೆಯನ್ನು ನೋಡಿ ಅವನು ತಾತ್ಸಾರ, ತುಚ್ಛೆಯಿಂದ ಕಾಣುತ್ತಾನೆ. ಅಲ್ಲದೆ ಆಕೆಯನ್ನು ಮುಟ್ಟಿದ್ದಕ್ಕೆ ಡೆಟಾಲ್ ಹಾಕಿ ತೊಳೆಯಬೇಕೆಂದು ನುಡಿಯುತ್ತಾನೆ.

ರಮಾ ವಾಸಿಸುವ ಮನೆಯ ಎದುರುಗಡೆಯ ಮನೆಗೆ ಶೀಲಾ ಮತ್ತು ಜಯಂತರ ಸಂಸಾರ ಬಾಡಿಗೆಗೆ ಬರುತ್ತದೆ. ಅವರಿಗೆ ಶಶಿ ಎಂಬ ಮಗಳು ಕೂಡ ಇರುತ್ತಾಳೆ. ರಮಾ ತನ್ನ ಮೊಮ್ಮಗಳೆಂದು ತಿಳಿದು ಶಶಿಯ ಜೊತೆ ಪ್ರೀತಿ ಸ್ನೇಹವನ್ನು ಹೊಂದುತ್ತಾಳೆ. ಶೀಲಾಗೆ ರಮಾಳ ಸ್ವಭಾವ ತಿಳಿದು, ಶಶಿ ಆಕೆಯ ಮನೆಗೆ ಹೋಗದಂತೆ ತಡೆಯುತ್ತಾಳೆ. ರಮಾಳನ್ನು ನೋಡದೆ ಶಶಿ ಇರುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನು ತಪ್ಪಿಸಲು ಶೀಲಾ, ಜಯಂತ್ ಪ್ರಯತಿಸಿ ವಿಫಲರಾಗಿ ಕೊನೆಗೆ ಮನೆ ಬದಲಾವಣೆಯ ಯೋಚನೆ ಮಾಡುತ್ತಾರೆ. ಆಗ ಇದನ್ನು ತಿಳಿದ ರಮಾ ತಾನೇ ಆ ಮನೆಯನ್ನು ಬಿಟ್ಟು ಹೋಗುತ್ತಾಳೆ. ರಮಾ ಹೋದದ್ದನ್ನು ಕೇಳಿ ಶೀಲ, ಜಯಂತ ಸಮಾಧಾನ ಪಟ್ಟುಕೊಳ್ಳುವ ಮೂಲಕ ಕಾದಂಬರಿ ಮುಗಿಯುತ್ತದೆ. ಇಲ್ಲಿ ರಮಾಗೆ ತನ್ನ ಮಗಳು, ಅಳಿಯ, ಮೊಮ್ಮಗಳು ಯಾರೆಂಬುದು ಗೊತ್ತು, ಆದರೆ ಶೀಲಾಳಿಗೆ ಈಕೆ ತನ್ನ ತಾಯಿ ಎಂಬುದು ಕೊನೆಯವರೆಗೂ ತಿಳಿಯದೆ ರಹಸ್ಯವಾಗಿಯೇ ಉಳಿಯುತ್ತದೆ.

ಅ.ನ.ಕೃಷ್ಣರಾಯರ ಕಾದಂಬರಿ : ಶನಿಸಂತಾನ

ಈ ಕಾದಂಬರಿ ಮುತ್ತಮ್ಮ ಎಂಬ ಮಹಿಳೆಯ ಸಹಸ್ರ ನಾಮದಂತೆ ಬರುವ ಬಯ್ಗುಳದಿಂದ ಆರಂಭವಾಗುತ್ತವೆ. ಈ ಕಾದಂಬರಿಯ ಕೇಂದ್ರ ವ್ಯಕ್ತಿ ಸರಸ್ವತಿ. ಈಕೆಯ ಗಂಡ ಸುಬ್ಬಣ್ಣ, ಲಾಯರ್‌ನ ಗುಮಾಸ್ತನಾಗಿದ್ದ. ಲಾಯರ್ ಶ್ರೀನಿವಾಸರಾಯರು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅವನಿಗೂ ಶುಕ್ರದೆಶೆ ನಡೆದಿರುತ್ತೆದೆ. ಯಾವುದಕ್ಕೂ ಕೊರತೆ ಇಲ್ಲದೆ ಸಾಕಷ್ಟು ತಿಂದು ಬದುಕುತ್ತಿದ್ದು, ತನ್ನ ಆಫೀಸಿನ ಹಿಂದಿನ ಬೀದಿಯಲ್ಲಿ ಒಬ್ಬ ಕುಲಟಿಯ ಮನೆಯಲ್ಲಿ ದ್ವಿತೀಯ ಸಂಸಾರವನ್ನು ಆರಂಭಿಸಿದ್ದನು.

ಸುಬ್ಬಣ್ಣ ಸರಸ್ವತಿಯನ್ನು ತಾನಾಗಿ ಒಲಿದು ವಿವಾಹವಾಗಿದ್ದ. ಆದರೆ ಅವರ ಮನೆಯವರಿಗೆ ಇಷ್ಟವಿರಲಿಲ್ಲ. ಇದಕ್ಕೆ ಕಾರಣವೇನು ಎಂಬುದು, ಸುಬ್ಬಣ್ಣನಿಗೆ ಬಹಳ ದಿನಗಳವರೆಗೆ ರಹಸ್ಯವಾಗಿ ಉಳಿಯಲಿಲ್ಲ. ಸರಸ್ವತಿಗೂ, ಆಕೆಯ ಬಾಲ್ಯ ಸ್ನೇಹಿತನಿಗೂ ಅಕ್ರಮ ಸಂಬಂಧದ ವಿಚಾರ ತಿಳಿಯಿತು. ಇದರಿಂದ ಸುಬ್ಬಣ್ಣ ಕಂಠಪೂರ್ತಿ ಕುಡಿದು ಕುಡಿದು ಸಾಯುತ್ತಾನೆ. ಹಾಗಾಗಿ ಸರಸ್ವತಿಯ ಪಾಡು ನಾವಿಕರಿಲ್ಲದ ಹಡಗಿನಂತೆ ಏಕಾಂಗಿಯಾಗುತ್ತದೆ. ಆಕೆಗೆ ಇಬ್ಬರು ಹೆಣ್ಣು ಮಕ್ಕಳು – ಸುಧಾ ಮತ್ತು ಮಂಜುಳ. ತನ್ನ ಗಂಡ ಸತ್ತ ಮೇಲೆ ಸುಬ್ಬಣ್ಣನಿಗೆ ಸಾಲಕೊಟ್ಟಿದ್ದವರು ದಿನಕ್ಕೆ ಒಬ್ಬೊಬ್ಬರಂತೆ ಬಂದು ಸುಬ್ಬಣ್ಣನ 'ಆನ್ ಡಿಮ್ಯಾಂಡ್' ಕಾಗದಗಳನ್ನು ತೋರಿಸಿ ಹಣಕ್ಕೆ ಒತ್ತಾಯ ಮಾಡುತ್ತಿದ್ದರು. ಒಮ್ಮೆಲೇ ತನ್ನ ಮೇಲೆ ಕವಿದ ಕಷ್ಟದ ರಾಶಿಯನ್ನು ನಿವಾರಿಸಿಕೊಳ್ಳಲು, ಕೊಟ್ಟ ಸಾಲ ಕೇಳಲು ಬಂದ ಮಂಜಯ್ಯನೊಡನೆ ತನ್ನ ಕಷ್ಟಗಳನ್ನು ಹೇಳಿಕೊಳ್ಳುತ್ತಾಳೆ. ಆಗ ಆತ ಹೇಳಿದಂತೆ ಸರಸ್ವತಿ ನಡೆದುಕೊಳ್ಳುತ್ತಾರೆ.

ನಂಜಯ್ಯ ಎಂಬಾತ ಕುಮಾರಯ್ಯನ ಜೊತೆ ಸೇರಿಕೊಂಡು ನೃತ್ಯ ಕಲಿಯಲು ಬರುತ್ತಿದ್ದು, ಅಲ್ಲಿನ ಹುಡುಗಿಯರ ಬಗ್ಗೆ ತಿಳೀಯುವ ವರ್ತನೆ ಆತನಿಗಿರುತ್ತದೆ. ಒಂದು ದಿನ ಆಕಸ್ಮಿಕವಾಗಿ ಸರಸ್ವತಿಯನ್ನು ನೋಡಿ ಆಕೆಯ ಜೊತೆ ಮೋಹಗೊಂಡು ಸಂಪರ್ಕ ಬೆಳೆಸುತ್ತಾನೆ. ಇದಕ್ಕೆ ಕುಮಾರಯ್ಯ ಮಧ್ಯವರ್ತಿಯಾಗಿ ಬರುತ್ತಾನೆ. ನಂಜಯ್ಯನಿಗೆ ಕುಂತಳ ಎಂಬ ಬಡಹುಡುಗಿಯ ಜೊತೆ ಸಂಸಾರವು ಏರ್ಪಡುತ್ತದೆ. ಕುಂತಳ ತಂದೆಯಿಲ್ಲದೆ ತಾಯಿಯೊಡನೆ ಬಡತನದಲ್ಲಿ ಬೆಳೆಯುತ್ತಿದ್ದು, ಅವಳ ನೃತ್ಯದ ಆಸಕ್ತಿಯನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಆ ಮೂಲಕ ಅವರಿಗೆ ಹಣದ ಸಹಾಯ ಮಾಡಿ ತನ್ನ ಕಾರ್ಯ ಸಾಧಿಸುತ್ತಾನೆ. ಇವರಿಬ್ಬರ ನಡುವೆ ಸಂಪರ್ಕ ಸೇತುವೆಯಾಗಿ ಕುಮಾರಯ್ಯ ಇರುತ್ತಾನೆ.

ಸರಸ್ವತಿ ತನ್ನ ಮಕ್ಕಳಿಗೆ ನೃತ್ಯ ಹೇಳಿಕೊಡಲು ಬಂದ ಕುಮಾರಯ್ಯನನ್ನು ಮಳೆ

ಬರುತ್ತಿದ್ದ ಕಾರಣಕ್ಕೆ ಅಲ್ಲೇ ಉಳಿಸಿಕೊಂಡಾಗ ತನ್ನ ಕಾಮಾಸಕ್ತಿಯನ್ನು ಕುಮಾರಯ್ಯನ ಮೇಲೆ ಪ್ರಯೋಗಿಸಿ ಆತ ಗಂಡಸಲ್ಲ ಎಂಬ ವಿಚಾರ ತಿಳಿದು ಆ ಕ್ಷಣದಲ್ಲಿ ದುಃಖ, ತಿರಸ್ಕಾರವನ್ನು ವ್ಯಕ್ತಪಡಿಸುತ್ತಾಳೆ. ಅನಂತರ ಮುತ್ತಮ್ಮ ಭಾಗ್ಯಮ್ಮರ ಮನೆಯಲ್ಲಿ, ಸರಸ್ವತಿ ನಂಜಯ್ಯ ಮತ್ತು ಮಂಜಯ್ಯನೊಡನೆ ತನ್ನ ಕಾಮಾಶಕ್ತಿಯ, ಸ್ವಾರ್ಥದ ಸಂಪರ್ಕ ಹೊಂದಿರುತ್ತಾಳೆ. ಜೊತೆಗೆ ಸರಸ್ವತಿಯು, ನಂಜಯ್ಯ ಮತ್ತು ಮಂಜಯ್ಯನಿಗೆ ತಿಳಿಯದಂತೆ ಮುತ್ತಮ್ಮನ ಮನೆಯಲ್ಲಿ ರಾಮರಾಜಪ್ಪನ ಜೊತೆ ಹಣಕ್ಕಾಗಿ ಕೂಡುತ್ತಾಳೆ. ಅಲ್ಲದೆ ಮಂಜಯ್ಯನಿಗೆ ತಿಳಿಯದಂತೆ ತನ್ನ ಅಣ್ಣನ ಮನೆಗೆ ಹೋಗುತ್ತಿದ್ದೇನೆಂದು ಸುಳ್ಳು ಹೇಳಿ ನಂಜಯ್ಯನ ಜೊತೆ ಆಕೆ ಮದರಾಸಿಗೆ ಬಂದು ತನಗೆ ಮತ್ತು ಮಕ್ಕಳಿಗೆ ಬೇಕಾದ ವಸ್ತುಗಳನ್ನು ಖರೀದಿಸಿ ಸಂತೋಷವಾಗಿ ಬರುತ್ತಾಳೆ. ಹೀಗೆ ದಿನಕಳೆದಂತೆ ಸರಸ್ವತಿ ಒಬ್ಬರಿಗೊಬ್ಬರು ತಿಳಿಯದಂತೆ ಮೂರೂ ಜನರೊಡನೆ ತನ್ನ ಸಂಪರ್ಕ ಹೊಂದುತ್ತಾಳೆ. ಅದು ಹೇಗೋ ಮಂಜಯ್ಯನಿಗೆ ಅವರಿಬ್ಬರ ಅಕ್ರಮ ಸಂಬಂಧ ತಿಳಿದು ಶಿಕ್ಷಿಸಿ, ಆಕೆಯನ್ನು ನಿಂದಿಸಿ ಪರಿತ್ಯಜಿಸುತ್ತಾನೆ. ಇದಕ್ಕೆ ಸರಸ್ವತಿ ನಂಜಯ್ಯನೊಡನೆ ಆತನ ವಿರುದ್ಧ ಚಾಡಿ ಹೇಳಿ ಗಲಾಟೆ ಮಾಡಿಸುತ್ತಾಳೆ. ಇದರ ಮರ್ಮವನ್ನು ಅರಿಯುತ್ತಾನೆ, ಅಂದರೆ ನಂಜಯ್ಯನು, ಸರಸ್ವತಿ ಮತ್ತು ರಾಮರಾಜಪ್ಪನ ಸಂಬಂಧ ತಿಳಿದು, ಆಕೆಯನ್ನು ಚೆನ್ನಾಗಿ ಬಯ್ದು ಹೋಗುತ್ತಾನೆ.

ಸರಸ್ವತಿ ತನ್ನ ಮಗಳು ಮಂಜುಳ ಪಿತಾಂಬರಯ್ಯನನ್ನು ಪ್ರೀತಿಸುತ್ತಿರುವುದನ್ನು ತಿಳಿದು, ಆತ ತನ್ನ ಮನೆಗೆ ಬಂದಾಗ ಆತನೊಡನೆಯೂ ದೇಹಸಂಪರ್ಕ ಹೊಂದುತ್ತಾಳೆ. ಈ ಸ್ನೇಹ ಸಂಬಂಧ ತಿಳಿದು ಮಂಜುಳ ವಿಷಕುಡಿಯುತ್ತಾಳೆ. ಈ ವೇಳೆಗಾಗಲೇ ಎಲ್ಲರ ನಿಂದನೆ, ಕೋಪಕ್ಕೆ ಗುರಿಯಾಗಿದ್ದು, ಸರಸ್ವತಿ ನಂಜಯ್ಯ ಮತ್ತು ಮಂಜಯ್ಯನ ಸಹಾಯವನ್ನು ಯಾಚಿಸುತ್ತಾಳೆ. ಆದರೆ ಅವರಾರೂ ಸಹಾಯ ಮಾಡದೆ ಆಕೆಯನ್ನು ತುಚ್ಛವಾಗಿ ಬಯ್ಯುತ್ತಾರೆ. ಈ ವಿಚಾರ ತಿಳಿದ ಸರಸ್ವತಿಯ ಅಣ್ಣ ಅಲ್ಲಿಗೆ ಬಂದು ತಂಗಿಗೆ ಚೆನ್ನಾಗಿ ಬೈದು ಮಂಜುಳೆಯನ್ನು ಉಳಿಸಿಕೊಂಡು ತಮ್ಮ ಊರಿಗೆ ಕರೆದೊಯ್ಯುತ್ತಾನೆ.

ಅನಂತರ ಸರಸ್ವತಿ ತನ್ನ ಜೀವನ ನಡೆಸುವುದಕ್ಕೆ ಕಷ್ಟವೆನಿಸಿ ಸಂಗೀತ ಆಚಾರ್ಯರ ಸಹಾಯದಿಂದ ಸರ್ಕಾರದಲ್ಲಿ ದೊಡ್ಡ ಅಧಿಕಾರಿಗಳಾಗಿದ್ದ ಶ್ರೀರಂಗರಾಯರ ಜೊತೆ ಸೇರುತ್ತಾಳೆ. ಆದರೆ ಸರಸ್ವತಿಗೆ ಒದಗಿದ ಕಷ್ಟದಂತೆ ಶ್ರೀರಂಗರಾಯರ ವಿಚಾರ ತಿಳಿದ ಆತನ ಅಕ್ಕ ಅಂಬಕ್ಕ, ಮಗಳು ಗಾಯತ್ರಿ ಸರಸ್ವತಿಯಿಂದ ಬಿಡಿಸಿ ಮತ್ತೆ ಮದುವೆ ಮಾಡುತ್ತಾರೆ. ಇದರಿಂದ ಬರುವ ಆದಾಯವು ಈಕೆಗೆ ನಿಲ್ಲುತ್ತದೆ. ಈ ವೇಳೆಯಲ್ಲಿ ಮುತ್ತಮ್ಮನ ಮನೆಯೇ

ಆಕೆಗೆ ಆಧಾರವಾಗುತ್ತದೆ. ಈ ನಡುವೆ ಮನೆಯನ್ನು ಬಿಟ್ಟು ಛತ್ರದಲ್ಲಿಯ ಬಾಡಿಗೆ ಮನೆ ಸೇರುತ್ತಾಳೆ. ತಮ್ಮ ಬದುಕಿನ ನಿರ್ವಹಣೆಗೆ ಸುಧಾ ಶಾಲೆಯ ಮಕ್ಕಳಿಗೆ ಪಾಠ ಹೇಳಿ ಸ್ವಲ್ಪ ಹಣ ಸಂಪಾದಿಸುವ ಪ್ರಯತ್ನದಲ್ಲಿ ಒಂದೆರಡು ಟ್ಯೂಷನ್‌ಗಳನ್ನು ನಡೆಸುತ್ತಾಳೆ. ಟ್ಯೂಷನ್ ಕೇಳುತ್ತಿದ್ದ ಆ ಮನೆಯವರಿಗೆ ಸರಸ್ವತಿಯ ಚರಿತ್ರೆ ಹೇಗೋ ತಿಳಿಯುತ್ತದೆ. ಇದರಿಂದ ಕೆಲಸ ಕಳೆದುಕೊಂಡು ಮನೆಗೆ ಬಂದು ಕೂರುತ್ತಾಳೆ.

ಸರಸ್ವತಿ ಮತ್ತೆ ರಾಘವಾಚಾರ್ಯರನ್ನು ಭೇಟಿ ಮಾಡಿ ತನ್ನ ಕಷ್ಟವನ್ನು ಹೇಳಿಕೊಳ್ಳುತ್ತಾಳೆ. ಆಗ ಅವರು ಶ್ರೀಕಂಠಮೂರ್ತಿಗಳು ನಡೆಸುತ್ತಿದ್ದ, 'ಗೌರಿ ಮನೋಹರಿ ಪ್ರಸಾದಿಕ ನಾಟಕ ಮಂಡಳಿಯ' ಮಾಲೀಕರು, ಸುಪ್ರಸಿದ್ಧ ನಟರು. ಇಲ್ಲಿ ಹೆಣ್ಣು ಪಾರ್ಟು ಮಾಡುವವರನ್ನು ಹುಡುಕುತ್ತಿದ್ದಾರೆ. ನಿಮಗೆ ಸರಿತೋರಿದರೆ ಮಂಜುಳ, ಸುಧಾ ಇಬ್ಬರಿಗೂ ಒಂದು ದಾರಿ ಆಗುತ್ತದೆಂದು ಹೇಳುತ್ತಾರೆ. ಆಗ ಸರಸ್ವತಿ, ಸುಧಾ, ಮಂಜುಳ ಮೂವರು ತಮ್ಮ ಬದುಕಿನ ಆಸರೆಯಾಗಿ ನಾಟಕದಲ್ಲಿ ಅಭಿನಯ ಮಾಡಲು ತೀರ್ಮಾನಿಸುತ್ತಾರೆ. ಆಗ ಇವರ ಪಾತ್ರ ಚಿತ್ರಗಳು ಪತ್ರಿಕೆಗಳಲ್ಲಿ ಮೆರೆದಾಡಿದುದನ್ನು ನೋಡಿದ ನಂಜಪ್ಪ, 'ಸರಸ್ವತಿಯ ಜೀವನ ನಾಟಕದ ಮುಂದೆ ಇವೆಂಥ ನಾಟಕ' ಎಂದು ಹೇಳಿದರೆ, ಶ್ರೀರಂಗರಾಯರು–'ಪಾಯಸಕ್ಕೆ ಉಪ್ಪ ಹಾಕಿದಾಗೆ ಅಂಬಕ್ಕ ಎಲ್ಲಾ ಕೆಡಿಸಿಬಿಟ್ಟಳು' ಎಂದು ಗೊಣಗುತ್ತಾರೆ. ಚೆಲುವಯ್ಯನ ಕಣ್ಣ ಮುಂದೆ ಅವರ ಪಾತ್ರಗಳು ವಂಶದ ಗೌರವ ಬೀದಿಗೆ ಎಳೆದಳೆಂದು ಹಿಡಿಶಾಪ ಹಾಕುತ್ತಾರೆ. ಆದರೆ ಸರಸ್ವತಿ ಅಲ್ಲಿಂದ ಹೋದ ಮೇಲೆ ಭಾಗ್ಯಮ್ಮ

ಮುತ್ತಮ್ಮ, 'ಒಳ್ಳೆ ಹೆಂಗಸು, ದೇವರು ಕಣ್ಣು ಬಿಟ್ಟು ನೋಡಿದ ಎಲ್ಲಾದರೂ ಚಂದಾಗಿಲ್ರಿ, ಆದರೆ ಕೈಯಾಲಿ ನಾಟಕ ಕಂಪನೀಲಿ ಎಷ್ಟು ದಿನ ನಿಲ್ಲುತ್ತಾಳೋ ಏನೋ." ಎಂಬ ಸಂಶಯಾತ್ಮಕದಿಂದ ಕಾದಂಬರಿ ಮುಗಿಯುತ್ತದೆ.

ಬೀದಿಯಲ್ಲಿ ಬಿದ್ದವಳು : ಬಸವರಾಜ ಕಟ್ಟೀಮನಿ

ಬಸವರಾಜ ಕಟ್ಟೀಮನಿಯುವರ 'ಬೀದಿಂಯುಲ್ಲಿ ಬಿದ್ದವಳು' ಕಾದಂಬರಿ ಆರಂಭವಾಗುವುದು-ಶಂಕರ ಎಂಬಾತ ತನ್ನ ಗೆಳೆಯನೊಡನೆ ತಾವು ಬಿಡಾರ ಹೂಡಿದ್ದ ಕೊಠಡಿಯ ಹತ್ತಿರ ಬಂದಾಗ ಯಾರೋ ನರಳಿದಂತಾದ ಸ್ವರವನ್ನು ಕೇಳಿ, ಕೈದೀಪದ ಮೂಲಕ ಆಕೆಯನ್ನು ನೋಡಿ 'ಯಮುನಾ' ಎಂಬುದನ್ನು ಗುರ್ತಿಸಿದ. ಅನಂತರ ಅವಳ ಆ ಸ್ಥಿತಿಗೆ ಕಾರಣವನ್ನು ಹೇಳುತ್ತಾ ಹೋಗುತ್ತಾನೆ.

ಒಮ್ಮೆ ಯಮುನಾ ರೈಲು ಹಳಿಗಳ ಮೇಲೆ ದೇಹವನ್ನೊರಗಿಸಿ ಸಾಯಲು ಸಿದ್ಧವಾಗಿರುತ್ತಾಳೆ. ಇದನ್ನು ನೋಡಿದ ಮುಸ್ಲಿಂ ಬಾಬಾ ಆಕೆಯನ್ನು ಅಲ್ಲಿಂದ ಕರೆದುಕೊಂಡು ಬರುತ್ತಾನೆ. ಇದನ್ನು ನೋಡಿದ ಅಕ್ಕಪಕ್ಕದ ಓಣಿಯವರು ಹೊಸದೊಂದು ಗಿರಾಕಿ ಬಂದುದನ್ನು ಕುತೂಹಲದಿಂದ ನೋಡಿ ಆಕೆಯ ಸಾವಿನ ಹಿನ್ನೆಲೆಯನ್ನು ಕೇಳುತ್ತಾರೆ. ಯಮುನಾ ತನ್ನ ಬದುಕಿನ ಕಹಿ ಘಟನೆಯ ನೆನಪನ್ನು ಬಿಚ್ಚುತ್ತಾಳೆ.

ಯಮುನ ಚಿಕ್ಕವಳಿದ್ದಾಗಲೇ ಮದುವೆಯಾಟ ಆಡುತ್ತಿದ್ದು, ಅದರ ಮಧುಮಗ ರಾಮನೇ ನನ್ನ ನಿಜವಾದ ಗಂಡನೆಂದು ಭಾವಿಸಿದ್ದಳು. ಆಕೆಯ ತಾಯಿ-ಗಂಗವ್ವ, ತಂದೆ ಹೊಳೆಪ್ಪನು-ಚಿಕ್ಕಳ್ಳಿಯ ಭೀಮಣ್ಣನ ಜೊತೆಗೆ ವಿವಾಹ ಮಾಡುತ್ತಾರೆ. ಆದರೆ ಆತ 'ತೆರ'ದ ಹಣವನ್ನು, ತನಗೆ ಸೀರೆಯನ್ನು, ಕೊಡಲಿಲ್ಲವೆಂದು ಗಂಗವ್ವ ಅಳಿಯನ ಜೊತೆ ಜಗಳ ಮಾಡಿದ್ದರ ಪರಿಣಾಮವಾಗಿ ಆತ ಯಮುನಾಳನ್ನು ಬಿಟ್ಟು ತನ್ನದೇ ಊರಿನ ವಿಧವೆ ನಿಂಗಿಯನ್ನು ವಿವಾಹವಾಗುತ್ತಾನೆ.

ಇದರಿಂದ ನೊಂದ ಹೊಳೆಪ್ಪ ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಆತನನ್ನು ವೈದ್ಯರಿಗೆ ತೋರಿಸಲು ಆ ಊರಿನ ಶ್ರೀಮಂತ ರುದ್ರೇಗೌಡನಿಂದ 200ರೂ ಸಾಲ ಪಡೆಯುತ್ತಾರೆ. ಹೊಳೆಪ್ಪನಿಗೆ ಎಷ್ಟೇ ಉಪಚಾರ ಮಾಡಿ ಪ್ರಯತ್ನಿಸಿದರೂ ರೋಗ ವಾಸಿಯಾಗದೆ ವಿಫಲವಾಗುತ್ತಾನೆ. ಗೌಡ ಗಂಗವ್ವನ ಮಗಳನ್ನು ನೋಡಿ ಆಕೆಗೆ ಚೆನ್ನಾಗಿ ಸಾರಾಯಿ ಕುಡಿಸಿ ಯಮುನಾಳನ್ನು ತನ್ನ ವೇಶ್ಯೆಯನ್ನಾಗಿ ಇರಿಸುವಂತೆ ಕೇಳುತ್ತಾನೆ ಇದರಿಂದ ರೊಚ್ಚಿಗೆದ್ದ ಗಂಗವ್ವ ಗೌಡ ಎಂಬುದಕ್ಕೆ ಯಾವುದೇ ಭಯಭೀತಿ ಇಲ್ಲದೆ ಚೆನ್ನಾಗಿ ಬಯ್ದು ಬಂದು ಈ ವಿಚಾರವನ್ನು ತನ್ನ ಗಂಡ ಮತ್ತು ಮಗಳಿಗೆ ತಿಳಿಸುತ್ತಾಳೆ. ಮುಂದೆ ಭೀಮಣ್ಣನಿಂದ ಸೋಡ ಚೀಟಿ ಕೊಡಿಸಿ ಬೇರೆ ಮದುವೆ ಮಾಡುವುದು, ಇಲ್ಲವೇ, ಭೀಮಣ್ಣನಿಗೆ ತನ್ನ ಯಮುನಾಳನ್ನು ಒಪ್ಪಿಸುವುದು, ಇಲ್ಲವೇ ಗೌಡನಿಗೆ ಸೂಳೆಯಾಗಿಸುವುದು

ಈ ಮೂರು ವಿಚಾರಗಳಲ್ಲಿ ಯಾವುದು ಸರಿ ಎಂದು ಯೋಚಿಸಿದಾಗ, ಕಷ್ಟಾನೋ,

ಸುಖಾನೋ ಗಂಡನ ಮನೆಯಲ್ಲೇ ಇರಲೆಂದು ಗಂಗವ್ವ ಬಲವಂತವಾಗಿ ಯಮುನಾಳನ್ನು ಚಿಕ್ಕಳ್ಳಿಗೆ ಬಿಟ್ಟು ಬರುತ್ತಾಳೆ.

ಚಿಕ್ಕಳ್ಳಿಯಲ್ಲಿ ಗಂಡನ ತಿರಸ್ಕಾರ, ಸವತಿಯ ನಿಂದನೆಯ ಮಾತು, ಆ ಊರಿನವರ ತಾತ್ಸಾರಗಳು ಯಮುನಾಳನ್ನು ಕುಗ್ಗಿಸಿದವು. ಬೇರೆಯವರ ಹೊಲಗಳಲ್ಲಿ ಅರೆಹೊಟ್ಟೆಯಲ್ಲಿ ದುಡಿದು ತನ್ನ ನೋವು ಸಂಕಟವನ್ನು ಮರೆಯಲು ಹೆಂಡವನ್ನು ಕುಡಿಯುವುದರ ಜೊತೆಗೆ, ಮಲ್ಲಪ್ಪನೊಂದಿಗೆ ದೈಹಿಕ ಸಂಪರ್ಕವನ್ನು ಇಟ್ಟುಕೊಳ್ಳುತ್ತಾಳೆ. ಮಲ್ಲಪ್ಪನಿಗೆ ಮದುವೆಯಾಗಿ ಮಕ್ಕಳಿವೆ ಎಂಬ ವಿಚಾರ ತಿಳಿಯದೊಡನೆ ಅವನಿಂದ ದೂರಾಗುವ ವೇಳೆಗೆ ಗರ್ಭಿಣಿಯಾದಾಗ, ಇದನ್ನು ತಿಳಿದ ಭೀಮಣ್ಣ, ನಿಂಗವ್ವ, ಇವರ ನಡುವೆ ಜಗಳ ನಡೆದು, ಕೊನೆಗೆ ಆಕೆಗೆ ಚೆನ್ನಾಗಿ ಒಡೆದುಬಡಿದು ಮನೆಯಿಂದ ಹೊರ ಹಾಕುತ್ತಾನೆ.

ಅಲ್ಲಿಂದ ಯಮುನಾ ತನ್ನ ಊರಿನ ಕಡೆಗೆ ಬರುವ ವೇಳೆಗೆ ಬಸವಲಿಂಗವ್ವನಿಂದ ತಂದೆ ತಾಯಿಗಳು ಗೌಡರ ಸಾಲಕ್ಕೆ ಜಮೀನು, ಮನೆ ಕಳೆದುಕೊಂಡು ಬೀದಿಪಾಲಾಗಿ ರಾಮಾಪುರದವರ ತೋಟದಲ್ಲಿರುವ ವಿಚಾರವನ್ನು ತಿಳಿಯುತ್ತಾಳೆ. ಅನಂತರ ತಂದೆ ತಾಯಿ ನೋಡಲು ಅಲ್ಲಿಗೆ ಬಂದು ತನ್ನ ವಿಚಾರಗಳನ್ನು ಹೇಳಿಕೊಂಡು ದುಃಖ ವ್ಯಕ್ತಪಡಿಸುತ್ತಾಳೆ.

ಈ ವೇಳೆಗೆ ಊರಿನ ರುದ್ರೇಗೌಡನಿಗೆ ಯಮುನಾ ಗಂಡನಿಂದ ದೂರ ಬಂದಿರುವ ವಿಚಾರ ತಿಳಿದು ಆಕೆಯನ್ನು ಹೊತ್ತುಕೊಂಡು ಬರುವಂತೆ ತನ್ನ ಬಲಗೈ ಭಂಟ ಕಾಡೇಶಿಗೆ ಹೇಳುತ್ತಾನೆ. ಮನಸ್ಸಿಲ್ಲದ ಮನಸ್ಸಿನಿಂದ ಕಾಡೇಶಿ ರಾಮನನ್ನು, ಇಬ್ಬರು ಆಳುಗಳನ್ನು ಕರೆದುಕೊಂಡು ಗುಡಿಸಲಿನ ಬಳಿಗೆ ಬರುತ್ತಾರೆ. ಇವರು ಬರುವ ವಿಚಾರವನ್ನು ತಿಳಿದು ಅಲ್ಲಿ ಕಾವಲಿದ್ದ ಲಕ್ಕಪ್ಪನ ಆಳುಗಳಿಂದ ತಿಳಿದು ತನ್ನ ಮಗಳ ರಕ್ಷಣೆಗೆ ಮಚ್ಚನ್ನು ಹಿಡಿದು ಬಾಗಿಲಲ್ಲಿ ಅಡ್ಡವಾಗಿ ನಿಲ್ಲುತ್ತಾಳೆ. ರುದ್ರೇಗೌಡನ ಆಳುಗಳು ಯಮುನಾಳನ್ನು ಹಿಡಿಯುವ ಪ್ರಯತ್ನದಲ್ಲಿ ಹೊಳೆಪ್ಪನಿಗೆ ಹೊಡೆಯುತ್ತಾರೆ. ಈ ಹೊಡೆತಕ್ಕೆ ಆತ ಅಲ್ಲೇ ಸಾಯುತ್ತಾನೆ. ಈ ವೇಳೆಗೆ ರಾಮಪುರದ ಲಕ್ಕಪ್ಪನ ಕಡೆಯವರು ಬಂದು ಇವರನ್ನು ರಕ್ಷಿಸುತ್ತಾರೆ. ಈ ಜಗಳದಲ್ಲಿ ಕಾಡೇಶಿ ಮತ್ತು ಹೊಳೆಪ್ಪ ಸಾಯುತ್ತಾರೆ. ಮರುದಿನ ರುದ್ರೇಗೌಡರು ಪೋಲೀಸಿನವರ ಬೆಂಬಲದಿಂದ ಗಂಗವ್ವನನ್ನು ಜೈಲಿಗೆ ಕಳುಹಿಸುತ್ತಾನೆ. ರಾಮ ಈ ವಿಚಾರಗಳ ಮರ್ಮವನ್ನರಿತು ಯಮುನಾಳನ್ನು ಕರೆದುಕೊಂಡು ಬಂದು, ಗೌಡರನ್ನು ಪ್ರತಿಭಟಿಸುವಾಗ ಆತನಿಗೆ ಬೆತ್ತದ ಸೇವೆಯಾಗುತ್ತದೆ. ಇಲ್ಲಿಂದ ತಪ್ಪಿಸಿಕೊಂಡು ಯಮುನಾ ಬಸವಲಿಂಗವ್ವನ ಮನೆಗೆ ಬಂದು, ಧಣಿವಾರಿಸಿಕೊಂಡು ಅವಳು ನೀಡಿದ ತಿಂಡಿ ತಿಂದು

ಮಲಗುತ್ತಾಳೆ. ಅರ್ಧರಾತ್ರಿಯಲ್ಲಿ ಗೌಡ ಆಕೆಯನ್ನು ತನ್ನ ಆಸರೆಯಲ್ಲಿ ಬಂಧಿಸಿಕೊಂಡ ಸ್ಥಿತಿಯ ಅರಿವಾಗಿ, ಅದನ್ನು ಪ್ರತಿರೋಧಿಸಿದರೂ ಪ್ರಯೋಜನವಾಗದೆ ಗೌಡನ ಕಾಮತೃಪ್ತಿಗೆ ಬಲಿಯಾಗುತ್ತಾಳೆ.

ಮರುದಿನ ಯಮುನಾ ಗೌಡ ಕೊಟ್ಟ ನೋಟನ್ನು ನೀಡಿ ಅಂಗಡಿಯಲ್ಲಿ ಚೆನ್ನಾಗಿ ತಿಂದು, ಹೆಂಡಕುಡಿದು, ಅಕ್ಕ ಪಕ್ಕದವರ, ಪುಂಡರ ಅವಹೇಳನದ ಮಾತುಗಳನ್ನು ಕೇಳಿ-ರೈಲಿನ ಕಂಬಿಯ ಹತ್ತಿರ ಸಾಯಲು ಬರುತ್ತಾಳೆ. ಈ ರೀತಿಯಾಗಿ ತನ್ನ ಜೀವನದ ದುರಂತವನ್ನು ಅಲ್ಲಿ ಸೇರಿದವರಿಗೆ ತಿಳಿಸುತ್ತಾಳೆ.

ದುರ್ಗವ್ವ ನೀನು ಧರಿಸಿರುವ ಗರ್ಭವನ್ನು ಕಳೆದುಕೊಳ್ಳೆಂದು ನಾಟಿ ಔಷಧಿ ನೀಡಿ ಅದನ್ನು ನಿವಾರಣೆ ಮಾಡುತ್ತಾಳೆ. ಆ 'ಸೂಳೇ'ರ ಬೀದಿಯಲ್ಲಿರುವ ಒಬ್ಬೊಬ್ಬರ ನೋವು, ಸಂಕಟಗಳಿಗೆ ಕಾರಣವೆಂದರೆ, ಈಕೆಯ ಹಾಗೆ ಅವರು ಸಹ ಇತರರ, ಧನಿಕರ ದಬ್ಬಾಳಿಕೆ, ದೌರ್ಜನ್ಯಕ್ಕೆ ಒಳಗಾದವರು.

ಯಮುನಾಳನ್ನು ಸಿದ್ದರಾಮಪ್ಪನೆಂಬ ಹಣವಂತನೊಂದಿಗೆ ಫಾತಿಮ ಸೇರಿಸಿದಾಗ ಆತ ಈಕೆಯೊಡನೆ ಬೇರೆ ಸಂಸಾರ ಹೂಡಿ ಎಲ್ಲಾ ರೀತಿಯ ವಸ್ತುಗಳನ್ನು ತಂದುಹಾಕುತ್ತಾನೆ. ಯಾವುದೇ ತೊಂದರೆ ಇಲ್ಲದಂತೆ ನೋಡಿಕೊಳ್ಳುತ್ತಾನೆ.

ಅತ್ತ ಗೌಡರಿಂದ ಏಟುತಿಂದ ರಾಮ ಹಳ್ಳಿ ಬಿಟ್ಟು ಪಟ್ಟಣಕ್ಕೆ ಬಂದು ಕೂಲಿ ಕೆಲಸ ಮಾಡಿ ಕಾಲಕಳೆಯುವಾಗ ಹನುಮಣ್ಣನ ಪರಿಚಯದಿಂದ ಸೂಳೆಯರ ಬೀದಿಗೆ ಬರುತ್ತಾನೆ. ಅಲ್ಲಿ ಯಮುನಾಳನ್ನು ಕಂಡು ಅವರಿಬ್ಬರ ನಡುವೆ ಮನಸ್ತಾಪವಾಗಿ, ರಾಮು ಯಶೋಧ ಎಂಬಾಕೆ ಜೊತೆ ಕೂಡಿ ಅನೇಕ ರೀತಿಯ ರೋಗ ರುಜಿನಗಳಿಗೆ ಬಲಿಯಾಗುತ್ತಾನೆ. ಆತನನ್ನು ಯಮುನಾ ವೈದ್ಯರಿಗೆ ತೋರಿಸಿ ಆರೈಕೆ ಮಾಡುತ್ತಾಳೆ. ಊರಿನ ರುದ್ರೇಗೌಡರು ಈ ಸೂಳೇರ ಬೀದಿಗೆ ಬಂದು ಯಮುನಾಳನ್ನು ನೋಡಿದಾಗ, ರಾಮ ಆಕ್ರೋಷದಿಂದ ಕೈ ಎತ್ತಿ ಹೊಡೆಯುತ್ತಾನೆ. ಆಗ ರುದ್ರೇಗೌಡ ಆತನನ್ನು ಚೆನ್ನಾಗಿ ಬಡಿದು ಬೀಳಿಸುತ್ತಾನೆ. ಇದನ್ನು ನೋಡಿ ಯಮುನಾ ರಾಮ ಸತ್ತದ್ದನ್ನು ಕಂಡು ಅಪ್ಪ-ಅವ್ವ-ರಾಮ ಎಂದು ಹುಚ್ಚಿಯಾಗಿ ಬೀದಿಗೆ ಬರುತ್ತಾಳೆ.

ಹೀಗೆ ಯಮುನಾ ಅನಾಥೆಯಾಗಿ ಎಲ್ಲರ ದಬ್ಬಾಳಿಕೆಗೆ ಬಲಿಯಾಗಿ, ಅರೆಹುಚ್ಚಿಯಾಗಿ ಬೀದಿಗೆ ಬೀಳುತ್ತಾಳೆ.

ತ.ರಾ.ಸುಬ್ಬರಾಯರ : ಮಸಣದ ಹೂವು

ತ.ರಾ.ಸುಬ್ಬರಾಯರ 'ಮಸಣದ ಹೂ' ಕಾದಂಬರಿ ಪ್ರಾರಂಭವಾಗುವುದು 'ಪಾರೋತಿ' ಎಂದು ಕೂಗುವ ಚಿನ್ನಮ್ಮನ ಮಾತಿನಿಂದ. ಪಾರೋತಿ ಚಿನ್ನಮ್ಮನ ವೇಶ್ಯೆ – ಬೆಳಿಗ್ಗೆಯಿಂದ ಬಳಲಿ ಮಲಗಿದ್ದ ಪಾರ್ವತಿಯನ್ನು ನಡುರಾತ್ರೀಲಿ ಬಂದ ಗಿರಾಕಿಗಾಗಿ ಎಬ್ಬಿಸುತ್ತಾಳೆ. ಹಣಕ್ಕಾಗಿ ಗಿರಾಕಿಯ ಜೊತೆ ಚೌಕಾಸಿ ಮಾಡಿ ಕೊನೆಗೆ 15 ರೂಗೆ ಸಮ್ಮತಿಸುತ್ತಾಳೆ.

ಈ ವೇಳೆಯಲ್ಲಿ ಚಿನ್ನಮ್ಮ ತನ್ನ ಪೂರ್ವದ ಈ ವೃತ್ತಿ ಬದುಕಿನ ಸ್ಥಿತಿಯನ್ನು ಮನಸ್ಸಿನಲ್ಲಿ ಮೆಲಕು ಹಾಕುತ್ತಾಳೆ. ಸೋಮಣ್ಣ ಚಿನ್ನಮ್ಮನಿಗೆ ಗಿರಾಕಿಗಳನ್ನು ಕರೆದುಕೊಂಡು ಬರುವ ಮಧ್ಯವರ್ತಿ.

ಚಿನ್ನಮ್ಮ, ಮೂಗೂರು ಕಡೆಯ ಸೂಳೆಯರ ಹುಡುಗಿ. ಈಕೆಯ ತಾಯಿ ಲಕ್ಷ್ಮಮ್ಮ. ಈಕೆ ಚಿನ್ನಮ್ಮನನ್ನು ಮೈಸೂರಿನಲ್ಲಿದ್ದ ಪುಟ್ಟರಂಗಮ್ಮನ ಮನೆಗೆ ತಂದುಬಿಡುತ್ತಾಳೆ. ಈ ಪುಟ್ಟರಂಗಮ್ಮನ ಮನೆಯಲ್ಲಿ ಹಲವಾರು ಮಹಿಳೆಯರು ಈ ವೃತ್ತಿಯಲ್ಲಿ ತೊಡಗಿರುತ್ತಾರೆ. ಅವರಲ್ಲಿ ವೆಂಕಟಮ್ಮನೂ ಒಬ್ಬಳು. ಈಕೆಯ ಮೈ ಮುಪ್ಪಡರಿದಂತೆ ಜಾಡ್ಯಬಲಿತಂತೆ ಈಕೆಯ ಬೆಲೆ ಇಳಿದು, ಅಗ್ಗವಾದ ಸರಕಾಗುತ್ತಾಳೆ. ಹಲವಾರು ರೋಗಗಳು ಸೇರಿಕೊಂಡು ಜೀವ ನಿರ್ವಹಣೆಗಾಗಿ ಗಿರಾಕಿಗಾಗಿ ಬಾಯ್ಬಿಡುತ್ತಾಳೆ. ತನ್ನ ನೋವನ್ನು ಮರೆಯುವ ಔಷಧ ಹೆಂಡ, ಇದಕ್ಕೆ ಹಣಬೇಕು. ಹಣಕ್ಕೆ ಗಿರಾಕಿ ಬೇಕಿತ್ತು. ಅಲ್ಲದೆ ಈಕೆಯನ್ನು ಪ್ರೀತಿಯಿಂದ ನೋಡುತ್ತಿದ್ದವಳು ನಾಗರತ್ನ. ಒಂದು ದಿನ ಒಬ್ಬ ವಯಸ್ಸಾದ ಕುಡುಕ ವ್ಯಕ್ತಿ ಬರುತ್ತಾನೆ. ಆತನನ್ನು ವೆಂಕಟಮ್ಮನ ಬಳಿ ಸೇರಿಸಲು ಹಣದ ನಿಗಧಿಯಾಗುತ್ತಿರುತ್ತದೆ. ಆಗ ಆತ ರತ್ನನನ್ನು ನೋಡಿ, ವೆಂಕಟಿಗಿಂತ ರತ್ನನೇ ಬೇಕೆಂದು ಹೇಳುತ್ತಾನೆ. ಈ ಕೋಪದಿಂದ ಬೆಂದ ವೆಂಕಟಗಿ ತನ್ನ ಕಾಮೋದ್ರಿಕ್ತ ಕೋಪದಿಂದ ನಾಗರತ್ನಳನ್ನು ಕೊಂದು ಕೊನೆಗೆ ತಾನೇ ನರಳೀ ನರಳಿ ನೇಣು ಬಿಗಿದುಕೊಂಡು ಸಾಯುತ್ತಾಳೆ.

ಮಂಡಿ ಚಿಕ್ಕಣ್ಣ ಪುಟ್ಟರಂಗಮ್ಮನ ಮನೆಯ ಮಾಮೂಲಿ ಗಿರಾಕಿಗಳಲ್ಲಿ ಒಬ್ಬ ಪುಟ್ಟಲಕ್ಷ್ಮಿಯೊಡನೆ ಚಿಕ್ಕಣ್ಣನ ಸಂಪರ್ಕ ಇರುತ್ತದೆ. ಅದೇ ಊರಿನಲ್ಲಿ ತಾಯವ್ವ ವೇಶ್ಯಾ ದಂಧೆಯ ಯಜಮಾನಿಯಾಗಿ ಈ ಕಾರ್ಯ ನಡೆಸುತ್ತಿದ್ದಾಗ 'ಜಾನಕಿ' ಎಂಬ ಮುದ್ದಾದ ಹೆಣ್ಣಿಗೆ ಚಿಕ್ಕಣ್ಣ ಮನಸೋತು ತಾಯವ್ವನ ಮನೆ ಸೇರುತ್ತನೆ. ಈ ವಿಚಾರವನ್ನು ಪುಟ್ಟರಂಗಮ್ಮನ ಮಧ್ಯವರ್ತಿಯಾದ ನಿಂಗಣ್ಣ ತಿಳಿಸಿದಾಗ ತಾಯವ್ವನ ಬಗ್ಗೆ ದ್ವೇಷ ಮೂಡಿ, ಜಾನಕಿಯನ್ನು ತನ್ನ ಮನೆಗೆ ಸಾಗಿಸಲು ಪೋಲೀಸ್ ಕಂದಸ್ವಾಮಿಯ ಸಹಾಯದಿಂದ ಕಾರ್ಯಸಾಧಿಸುತ್ತಾಳೆ.

ಇದರಿಂದ ತಾಯವ್ವ ಪುಟ್ಟರಂಗಿ ಮೇಲೆ, ಅದೇ ಮನೆಯ ಪುಟ್ಟಲಕ್ಷ್ಮಿಗೆ ಜಾನಕಿಯ ಮೇಲೆ ದ್ವೇಷ ಬೆಳೆಯುತ್ತದೆ. ತಾಯವ್ವನ ಬೆಂಬಲದಿಂದ ಪುಟ್ಟಲಕ್ಷ್ಮಿ ತನ್ನ ದ್ವೇಷಕ್ಕಾಗಿ ಜಾನಕಿಯನ್ನು ಕೊಲ್ಲುತ್ತಾಳೆ. ಕೊನೆಗೆ ವಾಸಿಯಾಗದ ಖಾಯಿಲೆಯಿಂದ ಪುಟ್ಟಲಕ್ಷ್ಮಿ ಸಾಯುತ್ತಾಳೆ.

ಪುಟ್ಟರಂಗಮ್ಮನ ಮತ್ತೊಂದು ಹುಡುಗಿ ಸರಸ್ವತಿ. ಈಕೆಯ ಗಂಡ ಹೆಂಚಿನ ಕಾರ್ಖಾನೆಯಲ್ಲಿ ದುಡಿಯುತ್ತಿದ್ದು, ಆತ ಕೆಲಸ ಕಳೆದುಕೊಂಡು ಬೀದಿಗೆ ಬರುತ್ತಾನೆ. ಆ ಕಾರ್ಖಾನೆಯ ಮಾಲಿಕನ ಸಹಾಯ ಬೇಡಿದ ಸರಸ್ವತಿಯನ್ನು ಹೆಂಡತಿಯಾಗಿರಬೇಕೆಂದು ಕೇಳಿದಾಗ, ಗಂಡನಿಗೆ ಕೋಪಬರುವುದರ ಬದಲು ಅದಕ್ಕೆ ಒಪ್ಪುತ್ತಾನೆ. ಒಂದು ದಿನದ ಮಟ್ಟಿಗೆ ಅಲ್ವೇ, ಹೆಂಡತಿಯಾದರೆ ಏನೂ ಕಳೆದುಕೊಳ್ಳುವುದಿಲ್ಲ ಎನ್ನುತ್ತಾನೆ. ರಾತ್ರೋರಾತ್ರಿ ಆಕೆಯನ್ನು ಬಿಟ್ಟು ಪಲಾಯನ ಮಾಡುತ್ತಾನೆ. ಈಕೆಗೆ ಒಬ್ಬ ಗಂಡು ಮಗನಿದ್ದು ಅವನ ಭವಿಷ್ಯದ ದೃಷ್ಟಿಯಿಂದ ಈ ವೃತ್ತಿಗೆ ಬರುತ್ತಾಳೆ. ಇದರಿಂದಾಗಿ ರಾಧಾಬಾಯಿಯ ಮೂಲಕ ದಸರಾಕ್ಕೆ ಎಂದು ಈ ಪುಟ್ಟರಂಗಮ್ಮನ ಮನೆ ಸೇರುತ್ತಾಳೆ. ಈಕೆ ಪೋಲಿಸಿನವನ ಮೋಹಕ್ಕೆ ಬಲಿಯಾಗಿ ಹಣವನ್ನು ಕಳಕೊಂಡು ಯಾತನೆಗೆ ಒಳಗಾಗುತ್ತಾಳೆ.

ಜನಾರ್ಧನನಾಯ್ಡುನ ನಾಲ್ಕು ಮಕ್ಕಳಲ್ಲಿ ಶಾಂತಿಯೇ ದೊಡ್ಡವಳು. ವಯೋಮಾನಕ್ಕೆ ಸಹಜವಾದ ಅಲಂಕಾರಿಕ ವಸ್ತುಗಳಿಗೆ ಹೆಚ್ಚು ಆಸಕ್ತಿ. ಆದರೆ ಅದನ್ನು ಕೊಳ್ಳಲು ಬಡತನ. ಇದನ್ನು ತಿಳಿದ ಅಂಗಡಿಯಾತ ಸಂಪತ್ಕುಮಾರ ತನ್ನ ಕಾಮಕ್ಕೆ ಬಳಸಿಕೊಂಡು ಪುಟ್ಟರಂಗಮ್ಮನ ಮನೆಗೆ ತಂದು ಬಿಡುತ್ತಾನೆ. ಅಲ್ಲಿ ಶಾಂತ ಗರ್ಭಿಣಿಯಾದಾಗ ಭಯಭೀತಿಯಿಂದ ಮುನಿಮಾಣಿಕ್ಯಂನಿಂದ ನಾಟಿ ಔಷಧಿ ಪಡೆದು, ಗರ್ಭಪಾತಕ್ಕೆ ಯತ್ನಿಸಿದಾಗ ಅನಾರೋಗ್ಯದ ದುರಸ್ಥಿಗೆ ಬಲಿಯಾಗಿ ಸಾವನ್ನು ಹೊಂದಿದಳು.

ಚಿನ್ನಮ್ಮನು ಲಕ್ಷ್ಮಿ ಎಂಬ ಮಗಳನ್ನು ಪಡೆಯುತ್ತಾಳೆ. ಪುಟ್ಟರಂಗಮ್ಮ ಸತ್ತ ನಂತರ ಆ ವೇಶ್ಯಾ ಸಮೂಹಕ್ಕೆ ಚಿನ್ನಮ್ಮ ಯಜಮಾನಿಯಾಗುತ್ತಾಳೆ. ತನ್ನ ನಂತರ ವಾರಸುದಾರಳಾಗಿ ಮಗಳಿರಬೇಕೆಂಬುದು ಆಕೆಯ ಆಸೆ. ಈಕೆಯ ಮನೆಯಲ್ಲಿದ್ದ ಚೆಲುವಿ ಚಿನ್ನಮ್ಮನಿಗೆ ತಿಳೀಯದಂತೆ ಮತ್ತೊಂದು ಮನೆಗೆ ಗೌಪ್ಯವಾಗಿ ಹೋಗಿ ಹಣ ಸಂಗ್ರಹಿಸುವ ಕಾರ್ಯ ನಡೆಸುತ್ತಾಳೆ. ಈ ವಿಚಾರ ತಿಳಿದು ಆಕೆಗೆ ಶಿಕ್ಷೆ ನೀಡುತ್ತಾಳೆ.

ಪಾರ್ವತಿ ದೇವಾಂಗದ ರಾಮಯ್ಯನ ಪ್ರೀತಿಯ ಮಗಳು. ಇವರು ಬಡಕುಟುಂಬದವರಾಗಿದ್ದೂ ಈಕೆಯ ಮೇಲೆ ಬಸವನಗಿರಿಯ ಧಣಿಗಳಾದ ನರಸಿಂಹಾರೆಡ್ಡಿ ಮತ್ತು ಆತನ ಬಂಟ ಸೋಮಣ್ಣನ ಕಾಮದ ಕಣ್ಣುಗಳು ಬೀಳುತ್ತವೆ. ಇವರಿಂದ ತಪ್ಪಿಸಿಕೊಳ್ಳಲು

ರಾತ್ರೋರಾತ್ರಿ ನಾಗ ಎಂಬ ಪ್ರಿಯಕರನ ಜೊತೆ ತಪ್ಪಿಸಿಕೊಂಡು ಹೋಗುತ್ತಾರೆ. ಈ ವಿಚಾರ ಹೇಗೋ ಸೋಮಣ್ಣನಿಗೆ ತಿಳಿದು ಹಿಂಬಾಲಿಸಿಕೊಂಡು ಬಂದು ನಾಗನನ್ನು ಕೊಲ್ಲುತ್ತಾನೆ. ಆಗ ಪಾರ್ವತಿಯ ಮೇಲೆ ಒಬ್ಬರ ಮೇಲೊಬ್ಬರಂತೆ ಕ್ರೂರವಾಗಿ ಅತ್ಯಾಚಾರ ಮಾಡುತ್ತಾರೆ. ನಂತರ ನರಸಿಂಹರೆಡ್ಡಿ ತನ್ನ ಕಾಮದಾಹಕ್ಕೆ ಬಳಸಿಕೊಂಡು, ಆಕೆಯನ್ನು ಸೋಮಣ್ಣ ಚಿನ್ನಮ್ಮನ ಮನೆಗೆ ತಂದು ಬಿಡುತ್ತಾನೆ. ರಾಮಯ್ಯ ತನ್ನ ಮಗಳು ಇವರಿಂದ ದೂರಾಗಿ ಚೆನ್ನಾಗಿದ್ದಾಳೆ, ಎಂದೇ ಭಾವಿಸಿರುತ್ತಾನೆ.

ಸಿಂಗಾರು ಕಾರ್ಖಾನೆಯಲ್ಲಿ ದುಡಿಯುತ್ತಿದ್ದು ಎಲ್ಲರಿಗೂ ಅಚ್ಚುಮೆಚ್ಚಿನವನಾಗಿದ್ದನು. ಆತನಿಗೆ ಆಕಸ್ಮಿಕವಾಗಿ ಕೈಕಳೆದುಕೊಂಡಿದ್ದರ ಪರಿಣಾಮವಾಗಿ ಕೆಲಸವನ್ನು ಕಳೆದುಕೊಳ್ಳುತ್ತಾನೆ. ಇವನೊಬ್ಬ ಅನಾಥನಾಗಿದ್ದು, ದುಡಿದು ತಿನ್ನಲು ಸಾಧ್ಯವಾಗಲಿಲ್ಲ. ಕೆಲವುದಿನಗಳ ಕಾಲ ಸ್ನೇಹಿತನ ಮನೆಯಲ್ಲಿ ತಿಂದು ಜೀವಿಸುತ್ತಾನೆ. ಆದರೆ ಹೆಚ್ಚು ದಿನ ಅವರ ಮನೆಯಲ್ಲಿ ಇರಲು ಇಷ್ಟವಿಲ್ಲದೆ ಬದುಕಬೇಕೆಂಬ ಆಸೆಗಳು, ಈ ವೃತ್ತಿಗೆ ಹಣವಂತ ಗಿರಾಕಿಗಳನ್ನು ಕರೆದುಕೊಂಡು ಬರುವ ಮಧ್ಯವರ್ತಿಯಾಗಿ ದುಡಿಯುತ್ತಾನೆ. ಈ ರೀತಿಯ ಬದುಕಿನ ಬಗ್ಗೆ ತಿರಸ್ಕಾರಗಳಿದ್ದರೂ ಸಹ ಆತನ ಹಸಿವು, ಈ ಕೆಲಸ ಮಾಡಿದ್ದರೆ ತಪ್ಪೇನು ಇಲ್ಲ! ಎಂಬ ಭಾವನೆ ಬೆಳೆಯುತ್ತದೆ.

ಸಿಂಗಾರುವಿಗೆ ಪಾರ್ವತಿಯ ಬಗೆಗೆ ಅಪಾರಪ್ರೀತಿ ಮತ್ತು ಸ್ನೇಹ ಇರುತ್ತದೆ. ಏಕೆಂದರೆ ಈಕೆ ಅಲ್ಲಿನ ಹೆಣ್ಣುಮಕ್ಕಳಿಗಿಂತ ವರ್ತನೆ, ಸ್ವಭಾವದಲ್ಲಿ ಭಿನ್ನವಾದವಳು. ಈಕೆಯಲ್ಲಿ ಯಾವುದೇ ದುಶ್ಚಟಗಳ ಕೆಟ್ಟ ಚಾಳಿ ಇಲ್ಲ. ಕಳೆದುಕೊಂಡ ಬದುಕಿನ ಬಗ್ಗೆ ವ್ಯಥೆ ಪಡುತ್ತಾಳೆ. ಪಾರ್ವತಿಯ ಮೇಲಿನ ಪ್ರೀತಿಯಿಂದಾಗಿ ಆಕೆಗೆ ಹಣ ಸಂಪಾದನೆಯ ದೃಷ್ಟಿಯಿಂದ ಗಿರಾಕಿಗಳನ್ನು ಕರೆದು ತರುವುದು ಚಿನ್ನಮ್ಮನಿಗೆ ಇಷ್ಟವಿರಲಿಲ್ಲ. ಇವರಿಬ್ಬರ ಸ್ನೇಹ ಚಿನ್ನಮ್ಮನಿಗೆ ಸಿಟ್ಟು ತರುತ್ತದೆ. ಬಾಂಬೆಯಲ್ಲಿರುವ ಶಾರದಾ ವೇಶ್ಯೆಯರಿಗಾಗಿ ಚಿನ್ನಮ್ಮನಿಗೆ ಕಾಗದ ಬರೆದು ಬರುತ್ತಾಳೆ. ಆಗ ಚಿನ್ನಮ್ಮ ಆಕೆಯ ಜೊತೆ ಪಾರ್ವತಿ, ಭಾಗೀರಥಿ, ಚಿಕ್ಕವೀರಿಯನ್ನು ಕಳುಹಿಸಿ 500ರೂ ಹಣಕ್ಕೆ ವಸ್ತುವಿನ ಮಾರಾಟದಂತೆ ಮಾರುತ್ತಾಳೆ.

ಶ್ರೀಕಂಠಯ್ಯ ಈ ವ್ಯವಸ್ಥೆಯ ಬಗ್ಗೆ ಮತ್ತು ಮಗನ ಬಗ್ಗೆ ರುದ್ರಾವತಾರ ತಾಳುತ್ತಾನೆ. ಇದಕ್ಕೆ ಕಾರಣವೂ ಇತ್ತು. ಈತನ ಒಬ್ಬನೇ ಮಗ ಸುಂದರರಾಜು. ಇವನ ಹೆಂಡತಿ ರಾಜಲಕ್ಷ್ಮಿ ಗಂಡು ಮಗುವಿನ ಗರ್ಭಿಣಿಯಾಗಿದ್ದು ವಾಸಿಯಾಗದ ಕಾಯಿಲೆಗೆ ತುತ್ತಾಗಿ ಮಗು ಮತ್ತು ತಾಯಿ ಇಬ್ಬರೂ ಸಾಯುತ್ತಾರೆ. ಈ ಸಾವು ಮನೆಗೆ ತುಂಬಲಾರದ ನಷ್ಟವಾಗಿತ್ತು.

ಸುಂದರರಾಜನು ಕಾಲೇಜಿನಲ್ಲಿ ಓದುವಾಗ ಚಂದ್ರವದನೆ ಎಂಬಾಕೆಯ ಸೌಂದರ್ಯಕ್ಕೆ ಮರುಳಾಗಿ ಆಕೆಯ ಮೇಲಿನ ವ್ಯಾಮೋಹದಿಂದ ಮತ್ತು ಆಕೆಯ ನನ್ನೊಡನೆ ಸಹಕರಿಸಲಿಲ್ಲ ಎಂಬ ಕಾರಣದಿಂದಾಗಿ ತನ್ನ ಸ್ನೇಹಿತನ ಸಹವಾಸದಿಂದ ಭಾಗ್ಯ ಎಂಬಾಕೆಯ ಜೊತೆ ಕೂಡಲು ಸಾಧ್ಯವಾಗುತ್ತದೆ. ಸುಂದರಮ್ಮ ಎಂಬಾಕೆ ಅತಿಕಾಮುಕದ ಹೆಣ್ಣು ಈಕೆಯ ಗಂಡ ನರಸಪ್ಪನಿಂದ ಅನುಭವಿಸುವ ಸುಖ ಸಾಲದೆ ಸಬ್ ಓವರ್ಸಿಯರನೊಡನೆ ಕೂಡುತ್ತಾಳೆ. ಸಾಲದೆಂಬಂತೆ ಸುಂದರರಾಜುವಿನ ಜೊತೆಗೆ ಸುಂದರಮ್ಮ ಸೇರುತ್ತಾಳೆ. ಇವನ ಇಂತಹ ಸಹವಾಸದಿಂದ ಗಳಿಸಿದ ರೋಗವು ಅಮಾಯಕ, ಮುಗ್ಧ ಜೀವಗಳಾದ ತಾಯಿ ಮಗುವಿನ ಜೀವವನ್ನು ಬಲಿತೆಗೆದುಕೊಳ್ಳುತ್ತದೆ.

ಶ್ರೀಕಂಠಯ್ಯನ ನೆಂಟನಾದ ಗೋವಿಂದರಾಜ, ದೇಶಿಕಾಚಾರಿ ಇವರುಗಳ ಜೊತೆ ಸೇರಿ 'ವೇಶ್ಯಾವೃತ್ತಿ ವಿರೋಧ ಸಂಘ'ವನ್ನು ನಿರ್ಮಿಸಿ ಆ ಮೂಲಕ ಅದರ ಪ್ರತಿಭಟನೆಯನ್ನು ನಡೆಸುತ್ತಾನೆ. ಇದನ್ನು ತಿಳಿದ ಚಿನ್ನಮ್ಮ ನಮ್ಮಿಂದಲೇ ಸುಖ ಪಡೆದು, ನಮ್ಮ ವಿರುದ್ಧ ಮಾತನಾಡುತ್ತಾರೆಂದು ದೇಶಿಕಾಚಾರಿಯ ಬಗ್ಗೆ ನೆನೆದು ಬಯ್ಯುತ್ತಾಳೆ. ಏಕೆಂದರೆ ತನ್ನ ಕಾಮದಾಹವನ್ನು ತೀರಿಸಿಕೊಳ್ಳಲು ಈ ವೇಶ್ಯೆಯರು ಬೇಕು, ಬಹಿರಂಗವಾಗಿ ಅವರನ್ನು ಈ ರೀತಿ ದೂಷಿಸುವುದನ್ನು ಆಕೆ ಆತನ ಬಗ್ಗೆ ಇವನೂ ಸಾಚಾ! ಎನ್ನುತ್ತಾಳೆ. ಪುರುಷ ಸ್ತ್ರೀಯ ಸಂಪರ್ಕದಿಂದ ಸುಖ ಪಡೆದು ಕೊನೆಗೆ ಈ ಸಮಸ್ಯೆಗೆ ಕಾರಣವನ್ನು ತೋರಿಸುತ್ತಾರೆ.

ಆದರೆ ಅದೇ ಸಭೆಗೆ ಶಂಕರ್ ಎಂಬಾತ ಈ ವ್ಯವಸ್ಥೆಗೆ ಮೂಲ ಯಾವುದು ಎಂಬ ವಿಚಾರವನ್ನು ತಿಳಿಸುತ್ತಾನೆ. ಈತನ ಮಾತಿನ ಬಗ್ಗೆ ನಂಬಿಕೆ ಇಲ್ಲದ ಜನ ಆತನನ್ನು ದೂರುತ್ತಾರೆ. ಶಂಕರನ ಮಾತುಗಳಿಂದ ಉತ್ತೇಜಿತನಾದ ಸಿಂಗಾರು ಆತನ ಪರಿಚಯ ಮಾಡಿಕೊಂಡು ಈ ವ್ಯವಸ್ಥೆಯಲ್ಲಿ ಪುರುಷ ಕ್ರೌರ್ಯವನ್ನು ತಿಳಿಸುತ್ತಾನೆ. ಆ ರೀತಿಯಾಗಿ ಶಂಕರ್ ಮತ್ತು ಸಿಂಗಾರು ಇದರ ಬದಲಾವಣೆಗಾಗಿ ಕಾಯುತ್ತಾರೆ. ಅಲ್ಲಿಗೆ ಈ ಕಾದಂಬರಿಯ ಕಥೆ ಮುಗಿಯುತ್ತದೆ.

ಎಂ.ಕೆ.ಇಂದಿರಾ : ಗೆಜ್ಜೆಪೂಜೆ

ಎಂ.ಕೆ.ಇಂದಿರಾರವರ 'ಗೆಜ್ಜೆಪೂಜೆ' ಕಾದಂಬರಿ ಪ್ರಾರಂಭವಾಗುವುದು, ಬೇಸಿಗೆ ರಜೆಗಾಗಿ ಹೊನ್ನಾವರದ ಅಜ್ಜಿಯ ಮನೆಗೆ ಬಂದಿದ್ದ ಸೋಮು ಅಲ್ಲಿನ ಕೆರೆಯನ್ನು ನೋಡಿ ಅದರ ನೂರಾರು ಕೆಂದಾವರೆಗಳಲ್ಲಿ ಒಂದನ್ನು ಬೇಡುತ್ತಾನೆ. ತೌರಿಗೆ ಬಂದಿದ್ದ ತಂಗಮ್ಮ ತನ್ನ ಓರೆಗೆಯವರ ಜೊತೆ ಮಾತುಕತೆಗಳನ್ನು ಆಡಿ ಮನೆಗೆ ಬರುತ್ತಾಳೆ. ಬೇಸಿಗೆ ದಿನಗಳನ್ನು ಮಾವನ ಮಕ್ಕಳೊಡನೆ, ಅಜ್ಜನ ಕತೆಕೇಳಿ ಸಂತೋಷದಿಂದ ಇದ್ದ ತಂಗಮ್ಮನ ಮಕ್ಕಳು, ಅನಂತರ ತಮ್ಮ ಊರು ಮೈಸೂರಿಗೆ ಬರುತ್ತಾರೆ.

ಮೈಸೂರಿನ ಆ ಬೀದಿ ಬ್ರಾಹ್ಮಣರ ಅಗ್ರಹಾರವಾಗಿತ್ತು. ರಾಮಾವಧಾನಿಗಳ ಹೆಂಡತಿ ತಂಗಮ್ಮ, ಮಕ್ಕಳು ಲಲಿತ ಮತ್ತು ಸೋಮ. ಅವರ ತಾಯಿ ಗುಂಡಮ್ಮ. ಬೆಳಗಿನ ಜಾವ ರಂಗವಲ್ಲಿ ಹಾಕುವ ಸಂದರ್ಭದಲ್ಲಿ ವೆಂಕಟಾದ್ರಿ ಜೋಯಿಸರ ಮನೆಗೆ ಯಾರೋ ಬಾಡಿಗೆಗೆ ಬಂದ ವಿಚಾರ ತಿಳಿದಾಗ, ಅವರು ಯಾರೆಂಬುದನ್ನು ವಿಚಾರಿಸುತ್ತಾರೆ. ವೆಂಕಟಾದ್ರಿ ಜೋಯಿಸರು ಮೈತುಂಬಾ ಸಾಲ ಮಾಡಿಕೊಂಡು ಅದನ್ನು ತಿರುಮಕೂಡ್ಲು ಸಾಹುಕಾರನಿಗೆ ಮಾರಿ ಹೋದ ಸಂಗತಿ ತಿಳಿಯುತ್ತಾಳೆ. ಆ ಸಾಹುಕಾರ ಪುಟ್ಟಣ್ಣಶೆಟ್ಟಿ ಮನೆ ಕೊಂಡು ಅಲ್ಲಿಗೆ ಎರಡನೇ ಸಂಸಾರ ಅಪರ್ಣಾಳನ್ನು ತಂದು ಇರಿಸುತ್ತಾನೆ. ಇವರನ್ನು ಆ ಅಗ್ರಹಾರದ ಜನ 'ಮೂಗೂರು ಸೂಳೇರು' ಎಂದು ತಿಳಿಯುತ್ತಾರೆ.

ಆ ಮನೆಯಲ್ಲಿದ್ದವರು ಅಪರ್ಣಾ, ಆಕೆಯ ತಾಯಿ ಸಂಗವ್ವ, ಮಗಳು ಚಂದ್ರ. ಸಂಪ್ರದಾಯ ಬೀದಿಯಲ್ಲಿ ಇಂತಹ ಜನ ಬಂದು ಸೇರಿರುವುದರ ಬಗ್ಗೆ ಬೇಸರ ಮತ್ತು ಇದನ್ನು ತಂಗಮ್ಮ ರಾಮಾವದಾನಿಗಳಿಗೆ ತಿಳಿಸುತ್ತಾಳೆ. ಆದರೆ ಅವರು ಸೂಳೇರ ಮುಖ ನೋಡಿದರೆ ಒಳ್ಳೆಯದೆಂದು ಹೇಳುತ್ತಿದ್ದ ತನ್ನ ಅಜ್ಜಿಯ ಮಾತನ್ನು ನೆನೆದುಕೊಳ್ಳುತ್ತಾರೆ. ಈಗಾಗಿ ಪ್ರಾರಂಭದಲ್ಲಿ ಈ ಕುಟುಂಬದವರನ್ನು ಕಂಡರೆ ಅಗ್ರಹಾರದ ಜನಕ್ಕೆಲ್ಲ ಬೇಸರವೂ, ಕೆಟ್ಟ ಭಾವನೆಯೂ ಬರುತ್ತದೆ.

ಸಂಗವ್ವ ತನ್ನ ಮೊಮ್ಮಗಳು ಚಂದ್ರಾಳನ್ನು ಶಾಲೆಗೆ ಸೇರಿಸಲು ಕರೆದುಕೊಂಡು ಹೋಗುತ್ತಾಳೆ. ಅಲ್ಲಿ ಅವರು ತಂದೆಯ ಹೆಸರೇನು? ಎಂದಾಗ ತಬ್ಬಿಬ್ಬಾಗಿ ಶಿವರುದ್ರಪ್ಪ ಎಂದು ಬಾಯಿಗೆ ಬಂದ ಹೆಸರು ಹೇಳುತ್ತಾಳೆ. ಆದರೆ ಚಂದ್ರಾಳ ತಂದೆ ಯಾರು ಎಂಬುದು ಅಪರ್ಣಾಳಿಗೆ ಗೊತ್ತು. ಅಲ್ಲದೆ ನೀವು ಯಾವ ಪಂಥದವರು ಎಂದು ಚಂದ್ರಾಳನ್ನು ಕೇಳಿದ ಶಿಕ್ಷಕಿ ನಾವು ಶಿವಭಕ್ತ ಪಂಥದವರು ಎಂದಾಗ, ಅಲ್ಲಿನ ವಿದ್ಯಾರ್ಥಿಯೊಬ್ಬಳು ಅವರು ಶಿವಭಕ್ತರಲ್ಲ ಸೂಳೇರು ಎಂದು ಹೇಳುತ್ತಾಳೆ. ಚಂದ್ರಾಳ ರೂಪ ಲಾವಣ್ಯವನ್ನು

ನೋಡಿ ಅದು ವೇಶ್ಯಾ ಲಕ್ಷಣವೆಂದು ವಿಜಯಾ ಮೇಡಂ ಭಾವಿಸುತ್ತಾರೆ.

ಚಂದ್ರ, ಸೋಮು ಮತ್ತು ಲಲಿತಾಳ ಜೊತೆಯಲ್ಲಿ ಶಾಲೆಗೆ ಹೋಗುವುದು ಪ್ರಾರಂಭವಾದಾಗ ತಂಗಮ್ಮ, ಗುಂಡಮ್ಮನವರು ಆಕೆಯ ಜೊತೆ ಸೇರದಂತೆ ತಡೆಯುವ ಪ್ರಯತ್ನ ಮಾಡುತ್ತಾರೆ. ಆದರೆ ಅದು ವಿಫಲವಾಗಿ ಚಂದ್ರಾಳ ಬಗ್ಗೆ ಪ್ರೀತಿ, ಅನುಕಂಪ ಮೂಡುತ್ತದೆ. ಇವರ ಕುಟುಂಬದಿಂದ ನಮಗೆ ಯಾವ ತೊಂದರೆಯೂ ಆಗುವುದಿಲ್ಲ ಎಂಬ ವಿಚಾರ ಮನದಟ್ಟಾದ ಮೇಲೆ ನಿಧಾನವಾಗಿ ನೆರೆಹೊರೆಯವರೂ ಮಾತನಾಡಲು ಪ್ರಾರಂಭಿಸುತ್ತಾರೆ. ಅಪರ್ಣಾ ಸೂಳೆಯೊಳಗಿನ ಗರತಿ. ಈಕೆ ತಾನು ಮನಮೆಚ್ಚಿಕೊಂಡ ಬ್ರಾಹ್ಮಣರ ಯುವಕನಿಂದ ಚಂದ್ರಾಳನ್ನು ಪಡೆದಳು. ಆತ ಸಂಸಾರಿಯಾದ, ಚಂದ್ರಾಳ ತಂದೆಯ ಬಳಿ ಸಂಗವ್ವನ ಭಂಡಾರ ತುಂಬುವಷ್ಟು ಹಣ ಇರಲಿಲ್ಲ. ಇದಕ್ಕಾಗಿ ಆ ಊರು ಬಿಟ್ಟು ಬರುತ್ತಾರೆ. ಪುಟ್ಟಣ ಶೆಟ್ಟರು ಆಕೆಯ ಹಣದ ದಾಹವನ್ನು ತೀರಿಸುತ್ತಾರೆ.

ಅಪರ್ಣಾ ತನ್ನ ಮಗಳ ಬದುಕನ್ನು ಹಸನು ಮಾಡುವ ಆಸೆಯ ಗೋಪುರ ಕಟ್ಟಿಕೊಂಡು ಪುಟ್ಟಣ್ಣಶೆಟ್ಟರ ವಿನಃ ಮತ್ತೊಬ್ಬ ಪುರುಷರನ್ನೂ ಮನೆಯ ಹತ್ತಿರ ಸೇರಿಸುವುದಿಲ್ಲ. ಆತನ ಜೊತೆ ನಿಷ್ಠೆಯಿಂದ ನಡೆದುಕೊಳ್ಳುತ್ತಾಳೆ. ಅಪರ್ಣಾ ಇತರ ಮಹಿಳೆಯರ ಹಾಗೆ ಹಣಕ್ಕಾಗಿ ತನ್ನ ದೇಹವನ್ನು ಮಾರಿಕೊಂಡವಳಲ್ಲ.

ಕುಟುಂಬದವರ ಜೀವನಕ್ರಮಗಳು ಮಕ್ಕಳ ಮನಸ್ಸಿನ ಮೇಲೆ ಸಾಕಷ್ಟು ಪ್ರಭಾವ ಬೀರುತ್ತವೆ. ಚಂದ್ರ ಸ್ನೇಹಿತಳ ಮದುವೆಗೆ ಹೋಗಿ ಅದನ್ನು ನೋಡಿ ಅದೇ ರೀತಿ ನಾನೂ ಮದುವೆಯಾಗಬೇಕೆಂದಾಗ ಇತರರು ನಗುತ್ತಾರೆ. ಅಲ್ಲದೆ 'ನಿನ್ನನ್ನು ಯಾರು ಮದುವೆಯಾಗುತ್ತಾರೆ, ನೀವು ಸೂಳೇರು' ಎಂದು ಹೇಳುವ ಮಾತುಗಳು ಚಂದ್ರಳ ಮನಸ್ಸಿನ ಮೇಲೆ ಪ್ರಭಾವ ಬೀರಿ, ತನ್ನ ತಾಯಿಯನ್ನು ಸೂಳೆ ಅಂದರೇನು? ಎಂಬ ಪ್ರಶ್ನೆ ಕೇಳುತ್ತಾಳೆ. ಆಗ ಅಪರ್ಣಾಳಿಗೆ ನೋವಾಗಿ ಆ ಮಾತು ಮರೆಸಲು ಸಮಾಧಾನದ ಮಾತುಗಳನ್ನು ಹೇಳುತ್ತಾಳೆ.

ಚಂದ್ರ ವಯೋಮಾನಕ್ಕೆ ಬಂದ ಹಾಗೆ ಆಕೆಗೂ ಸಮಾಜದ ಅರಿವು ಉಂಟಾಗುತ್ತದೆ. ಆಕೆಯ ಮನಸ್ಸಿನಲ್ಲಿ ಸೋಮುವಿನ ಸ್ನೇಹ ಪ್ರೀತಿಯಾಗಿ ಮೂಡುತ್ತದೆ. ಗುಂಡಮ್ಮನವರು ಲಲಿತಾಳಿಗೆ ಮದುವೆ ಯೋಚನೆ ಮಾಡಿ ವರನನ್ನು ಹುಡುಕುತ್ತಾರೆ. ಈ ನಡುವೆ ಚಂದ್ರ ಸದಾ ಕಾಲ ಗುಂಡಮ್ಮನವರ ಮನೆಯಲ್ಲಿಯೇ ಇರುತ್ತಿರುತ್ತಾಳೆ, ಅನಂತರ ತನ್ನ ಸ್ನೇಹಿತೆ ಶಾಂತಿಯ ಮದುವೆಗೆ ಸ್ನೇಹಿತರ ಜೊತೆಗೂಡಿ ಹೋಗಿ ಬರುತ್ತಾಳೆ. ಚಂದ್ರ ಕಾಲೇಜಿಗೆ ಹೋಗಲು ಕೇಳಿದಾಗ, ಬೇಡವೆಂಬುದು ಸಂಗವ್ವನ ಚಂಡಿ. ಮಗಳು ಮತ್ತಷ್ಟು

ವಿದ್ಯಾವಂತೆಯಾಗಲಿ ಎಂಬುದು ಅಪರ್ಣಾಳ ಆಸೆ. ಅನಂತರ ತನ್ನ ಆಸೆಯಂತೆ ಚಂದ್ರ ಕಾಲೇಜು ಸೇರಿ ಈ ವೇಳೆಯಲ್ಲಿ ತಾನು ಧರಿಸಿದ ಎಲ್ಲಾ ಒಡವೆಗಳನ್ನು ತೆಗೆದಿಟ್ಟು ಸರಳವಾಗಿ ಇರಲು ಪ್ರಯತ್ನಿಸುತ್ತಾಳೆ.

ಚಂದ್ರಾಳ ಗೆಳತಿ ಮಾಲತಿ. ಈಕೆಯ ಜೊತೆ ಕಾಲೇಜಿಗೆ ಹೋಗುವಾಗ 'ಕಳ್ಳ ಸೂಳೆ ಮಗನೆ' ಎಂದು ಜಗಳದಲ್ಲಿ ಹೇಳುವ ಮಾತುಗಳು ಚಂದ್ರಾಳ ಮನಸ್ಸಿಗೆ ನೋವುಂಟುಮಾಡುತ್ತದೆ. ಅಲ್ಲದೆ ಎಷ್ಟೋ ಜನ ಮದುವೆಗೆ ಮುಂಚೆ ಕೆಟ್ಟುಹೋಗಿರುತ್ತಾರೆ, ಮದುವೆಯಾದ ಮೇಲೂ ಪರಪುರುಷನೊಂದಿಗೆ ಸ್ನೇಹ ಇರುತ್ತದೆ. ಇವರನ್ನು ಸೂಳೇರು ಎನ್ನದು ಈ ಸಮಾಜ. ಆದರೆ ನಿಷ್ಠೆಯಿಂದ ಗರತಿಯ ಹಾಗೆ ಒಬ್ಬನೊಡನೆ ಬದುಕಿದರೆ ಅವರನ್ನು ಸೂಳೆ ಎನ್ನುತ್ತದೆ, ಎಂದು ವಿರೋಧಿಸುತ್ತಾಳೆ. ಜೊತೆಗೆ ನನ್ನ ತಾಯಿ ಸೂಳೆಯಲ್ಲ ಎಂದು ತನ್ನ ಸ್ನೇಹಿತೆಗೆ ಮನದಟ್ಟುಮಾಡುವ ಯತ್ನ ಮಾಡುತ್ತಾಳೆ. ಚಂದ್ರ ಮನಸ್ಸಿಗೆ ಬೇಸರವಾದಾಗ ಸಿನಿಮಾಗೆ ಸ್ನೇಹಿತರ ಜೊತೆ ಹೋಗಿಬರುವುದು ಒಂದು ಹವ್ಯಾಸ ಒಂದು ದಿನ ಕಾಲೇಜಿಗೆ ಹೋದಾಗ ಈಕೆಯ ಸ್ನೇಹಿತೆ ಲಕ್ಷ್ಮಿ ಬೇರೊಂದು ವೇಶ್ಯೆಯ ಮನೆಗೆ ಹೋಗಿ ಅನೈತಿಕವಾಗಿ ಗರ್ಭಿಣಿಯಾಗಿ ಅದರ ಅವಮಾನವನ್ನು ತಡೆಯಲಾರದೆ ಸಾವನ್ನು ಹೊಂದಿದ ಘಟನೆಯನ್ನು ತಿಳಿಯುತ್ತಾಳೆ.

ಚಂದ್ರಾಳಿಗೆ ಅರಿವು ಬಂದ ಹಾಗೆ ಪುಟ್ಟಣ್ಣಶೆಟ್ಟರು ತಮ್ಮ ತಂದೆ ಅಲ್ಲ ಎಂಬ ವಿಚಾರ ತಿಳಿದು ಅವರನ್ನು 'ಅಪ್ಪ' ಎಂದು ಕರೆಯುವುದನ್ನು, ಅವರ ಮುಖದರ್ಶನವನ್ನು ಕಾಣುವುದನ್ನು ನಿಲ್ಲಿಸುತ್ತಾಳೆ. ಚಂದ್ರ ಸ್ನೇಹಿತೆ ಮಾಲತಿ ಮನೆಗೆ ಹೋಗಿ ಬರುವ ವೇಳೆಗೆ ಸಂಬಂಧಿಕಳಾದ ಸರ್ವಮಂಗಳ ಮತ್ತು ಬಸವ್ವ ಬಂದಿರುತ್ತಾರೆ. ಇವರು ತಮ್ಮನ್ನು ಗಿರಾಕಿಗೆ ಒಪ್ಪಿಸುವುದರ ಬಗ್ಗೆ ಸಂಗವ್ವನ ಬಳಿ ಬಂದ ವಿಚಾರ ತಿಳಿದು ಅವರಿಂದ ದೂರ ಉಳಿಯುತ್ತಾಳೆ. ಅನಂತರ ತಾಯಿ ಮಗಳಿಬ್ಬರೂ ತಮ್ಮ ಊರಿಗೆ ಹೊರಟು ಹೋಗುತ್ತಾರೆ.

ಪುಟ್ಟಣ್ಣಶೆಟ್ಟರ ನಿಧನವಾರ್ತೆ ಕೇಳಿ ಸಂಗವ್ವ ಎದೆ ಬಡಿದುಕೊಳ್ಳುತ್ತಾಳೆ. ಆದರೆ ಅಪರ್ಣಾಳಿಗೆ ಅತೀವ ವ್ಯಥೆಯಾಗಿದ್ದರೂ, ಅವಳು ಅಷ್ಟಾಗಿ ದುಃಖಿಸದೇ ತೀರಾ ಮೌನಿಯಾಗುತ್ತಾಳೆ. ಏಕೆಂದರೆ ಪುಟ್ಟಣ್ಣಶೆಟ್ಟರು ಯಾವುದೇ ಹಣಕಾಸಿನ ತೊಂದರೆ ನೀಡದೆ ಅಪರ್ಣಾಳನ್ನು ಎರಡನೆಯ ಹೆಂಡತಿ ಮತ್ತು ಆ ಮನೆಯನ್ನು ಎರಡನೆಯ ಸಂಸಾರ ಎಂಬಂತೆ ನೋಡಿಕೊಳ್ಳುತ್ತಿದ್ದರು. ಆದರೆ ಈ ಸಾವಿನ ಸುದ್ದಿ ತಿಳಿದ ಚಂದ್ರಾಳಿಗೆ ಆನಂದವಾಗಿ ಬಾದಾಮಿ ಹಾಲು ಕುಡಿಯುತ್ತಾಳೆ. ನೆರೆಮನೆಯವರಿಗೂ ಈ ವಿಚಾರ ತಿಳಿದು ಚಂದ್ರಳ ಸಂತೋಷ ನೋಡಿ ತಂಗಮ್ಮನವರು ವ್ಯಸನವಾಗಲಿಲ್ಲವೇ? ಎಂದು ಕೇಳಿದಾಗ, ಇವರು

ನನ್ನ ತಂದೆಯಲ್ಲ, ನನ್ನ ತಂದೆ ಬ್ರಾಹ್ಮಣರಂತೆ ಎಂಬುದನ್ನು ತಿಳಿಸುತ್ತಾಳೆ. ಚಂದ್ರ ಸಂತೋಷದಿಂದ ಹಕ್ಕಿಯಂತೆ ಹಾರಾಡಿಕೊಂಡಿದ್ದರೆ, ಅಪರ್ಣಾ ಮುಂದೇನು? ಎಂಬ ಸಮಸ್ಯಾತ್ಮಕ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಮೌನವಾಗಿದ್ದಳು.ಈ ವಯಸ್ಸಿನಲ್ಲೂ ಮಗಳು ಮತ್ತೆ ಯಾರನ್ನಾದರೂ ಹಿಡಿಯಲಿ ಎಂಬ ದುರಾಸೆ ಹೊತ್ತವಳು ಸಂಗವ್ವ

ಸಂಗವ್ವ ಚಂದ್ರಾಳ ಮುಂದಿನ ವಿದ್ಯಾಭ್ಯಾಸವನ್ನು ತಡೆಯುವ ಪ್ರಯತ್ನ ಮಾಡುತ್ತಾಳೆ. ಈಕೆ ಮೂಗೂರಿಗೆ ಹೋಗಿ ಬರುತ್ತೇನೆಂದು ಸುದ್ದಿ ತಿಳಿಸಿ ಹೋಗುತ್ತಾಳೆ. ಈ ನಡುವೆ ಚಂದ್ರಶೇಖರಯ್ಯ ಸಂಗವ್ವ ಇಲ್ಲದ ಸಮಯ ನೋಡಿಕೊಂಡು ಬರುತ್ತಾನೆ. ಈತನನ್ನು ನೋಡಿ ಚಂದ್ರಾಳಿಗೆ ಆಶ್ಚರ್ಯವಾದಾಗ, ಅಪರ್ಣಾ ಈತ ನಿನ್ನ ತಂದೆ ಎಂದು ಹೇಳುತ್ತಾಳೆ. ಆಗ ಚಂದ್ರಾಳಿಗೆ ಸಂತೋಷವಾಗಿ ಮಾತನಾಡಿಸಿ ಆತ ಹೊರಡುವಾಗ ಪ್ರೀತಿಯ ಕಾಣಿಕೆಯಾಗಿ ಏನನ್ನಾದರೂ ಕೊಡಿ ಅಪ್ಪ? ಎಂದು ಕೇಳಿದಾಗ ಆಗ ಆತ ತನ್ನ ಮಗಳಿಗೆ ವಜ್ರದ ಉಂಗುರ ನೀಡುತ್ತಾನೆ. ಅನಂತರ ಅಪರ್ಣಾ ತಂದೆ-ತಾಯಿ ಕಳೆದುಕೊಂಡ ಬ್ರಾಹ್ಮಣ ಕುಟುಂಬದ ಅನಾಥ ಹುಡುಗಿ. ಸಂಗವ್ವ ಇವಳನ್ನು ತಂದು ಸಾಕಿಕೊಂಡಿದ್ದಾಳೆ, ಎಂದು ಚಂದ್ರಾಳಿಗೆ ತಿಳಿಸುತ್ತಾನೆ. ತಂದೆ ಬಂದು ಹೋದ ನಂತರ ಚಂದ್ರಾಳ ವರ್ತನೆಯಲ್ಲಿ ಬದಲಾವಣೆ ಆಗಿ ಆಕೆ ಸಂಗವ್ವಳೊಡನೆ ಮೊದಲಿನ ಹಾಗೆ ಮಾತನಾಡುವುದನ್ನು ನಿಲ್ಲಿಸಿದಾಗ, ಸಂಗವ್ವ ಅಪರ್ಣಾ ಮತ್ತು ಚಂದ್ರಾಳ ಮೇಲೆ ಕೋಪದಿಂದ ಸಿಡಿಮಿಡಿಗೊಳ್ಳುತ್ತಾಳೆ.

ಒಂದು ದಿನ ಮಾಲತಿಯ ಮನೆಯಿಂದ ಮಳೆಯಲ್ಲಿ ನೆನೆದು ಬರುವಾಗ ಚಂದ್ರ ಮತ್ತು ಸೋಮು ಭೇಟಿಯಾಗುತ್ತಾರೆ. ಅವರಿಬ್ಬರಲ್ಲೂ ಬಯಕೆಯ ಹಕ್ಕಿ ರೆಕ್ಕೆಬಿಚ್ಚಿ ಹಾರುತ್ತದೆ. ಇಬ್ಬರೂ ಸಹ ಮಿಲನಕ್ಕಾಗಿ ಪರಿತಪಿಸುತ್ತಾರೆ. ಆಗ ಚಂದ್ರ ಶ್ರೀರಂಗಪಟ್ಟಣಕ್ಕೆ ಸೋಮುವಿನ ಜೊತೆ ಹೋಗಲು ತಾಯಿ ಅಜ್ಜಿಯರಿಗೆ ಸ್ನೇಹಿತರ ಜೊತೆಯಲ್ಲಿ ಹೋಗುತ್ತೇನೆ, ಎಂಬ ಮಾತು ಹೇಳಿ ಹೋಗುತ್ತಾರೆ. ಅಲ್ಲಿ ಇಬ್ಬರ ಮನಸ್ಸು ಬಿಚ್ಚಿ ಮಾತನಾಡುತ್ತಾರೆ. ಸೋಮು ನೀವು ಸೂಳೇರು ನಾವು ಸಂಪ್ರದಾಯದಂತೆ ಮದುವೆಯಾಗಬೇಕೆಂದು ಹೇಳಿ ತನ್ನ ದೇಹದ ಆಸೆಗೆ ಮನಸೋಲುತ್ತಾನೆ. ಚಂದ್ರ ಅವನ ಮಾತುಗಳನ್ನು ಕೇಳಿ ಇಲ್ಲಿಯತನಕ ಇದ್ದ ಪ್ರೀತಿ ಪ್ರೇಮದ ವಿಚಾರ ದೂರಾಗಿ ಮದುವೆ ಕನಸಾಗಿ ಉಳಿಯುತ್ತದೆ. ಆ ದಿನದಿಂದ ಚಂದ್ರಾಳ ಮನಸ್ಸು ತನ್ನ ಈ ಸ್ಥಿತಿಗೆ ಕಾರಣವಾದ ತನ್ನ ಅಜ್ಜಿ ಸಂಗವ್ವನ ಬಗ್ಗೆ ಕೋಪ ತೋರುತ್ತಾಳೆ. ಸೋಮುವಿಗೆ ತನ್ನ ತಾಯಿ ವೇಶ್ಯೆಯಲ್ಲ ತಾವು ಬ್ರಾಹ್ಮಣ ಕುಟುಂಬದವರು, ಸಂಗವ್ವ ನನ್ನ ತಾಯಿ ಅಪರ್ಣಾಳನ್ನು ತಂದು ಸಾಕಿರುವ ವಿಚಾರವನ್ನು ತಿಳಿಸುತ್ತಾಳೆ.

ಚಂದ್ರ ಪಟ್ಟಣಕ್ಕೆ ಹೋಗಿ ಬಂದ ದಿನದಿಂದಲೂ ಆಕೆಯ ಮನಸ್ಸು ಚಂಚಲವಾಗಿ,

ಓದುವಿನ ಬಗ್ಗೆ ಆಸಕ್ತಿ ಇಲ್ಲದೆ ನೀರಸವಾಗಿರುತ್ತಾಳೆ. ಈಕೆಯ ಈ ನಡವಳಿಕೆ ಸಹಜವಾಗಿ ತೋರದ ಅಪರ್ಣಾಳಿಗೆ ತನ್ನ ಮಗಳನ್ನು ನೋಡಿ ಮನ ನೋಯುತ್ತಾಳೆ. ಇದಕ್ಕೆ ಕಾರಣ ಚಂದ್ರಶೇಖರಯ್ಯನ ಆಗಮನದಿಂದ ಎಂಬ ವಿಚಾರ ಗೊತ್ತಿರುತ್ತದೆ.

ಬೇಸರವಾದಾಗ ಮಾಲತಿಯ ಮನೆಗೆ ಹೋಗಿ ಬರುತ್ತಿದ್ದಳು. ಮನಬಂದ ದಿನ ಕಾಲೇಜಿಗೆ ಹೋಗುವಳು, ಇಲ್ಲದಿದ್ದರೆ ಇಲ್ಲ. ತಾಯಿಯೊಡನೆಯೂ ದಿನಕ್ಕೆ ಒಂದೋ ಎರಡೋ ಮಾತನಾಡುವಳು, ಇಲ್ಲವಾದರೆ ಇಲ್ಲ. ಚಂದ್ರ ಲಲಿತಾಳ ಮಗನನ್ನು ನೋಡಲು ಹೋಗುತ್ತಿದ್ದುದು, ಆ ಮನೆಯವರಿಗೆ ಇರಿಸುಮುರಿಸು ತರುತ್ತಿತ್ತು. ಈ ಗೊಂದಲಗಳಲ್ಲಿ ಪರೀಕ್ಷೆಯನ್ನು ಸರಿಯಾಗಿ ಬರೆಯದೆ ಫೇಲಾದುದು ಸಂಗವ್ವನಿಗೆ ಸಮಾಧಾನವಾಯಿತು.

ಸೋಮುವಿನ ಮದುವೆಗೆ ಹುಡುಗಿಯನ್ನು ಹುಡುಕಿದಾಗ ರಾಮಾಪುರದ ಜಯಲಕ್ಷ್ಮಿಯ ಜೊತೆ ಮದುವೆ ನಿಶ್ಚಯವಾಗುತ್ತದೆ. ಕಡೆಯ ಭೇಟಿಯಾಗಿ ಸೋಮು ಮತ್ತು ಚಂದ್ರ ಸಂಧಿಸುತ್ತಾರೆ. ಮರುದಿನ ತಂದೆ ಚಂದ್ರಶೇಖರಯ್ಯನ ದರ್ಶನವಾಗಿ ಆಕೆಯ ಮಗಳು ಸೋಮುವಿನ ಹುಡುಗಿ ಎಂಬುದನ್ನು ತಿಳಿಯುತ್ತಾಳೆ. ತಂದೆ ಹೇಳುವಂತಹ ಅಂದರೆ 'ಅವರ ಸಂಬಂಧ ಬೆಳೆಸುತ್ತಿರುವುದರಿಂದ ನನ್ನ ಮಗಳೆಂದು ಅವರಿಗೆ ತಿಳೀಯದಂತೆ ಇರಬೇಕು. ಏಕೆಂದರೆ ಇದು ತನ್ನ ಮಗಳ ಭವಿಷ್ಯದ ಬದುಕು, ನನ್ನ ಮಾನಮರ್ಯಾದೆಯ ಪ್ರಶ್ನೆ' ಎಂದು ವಿನಂತಿಸಿಕೊಳ್ಳುವುದನ್ನು ಒಪ್ಪಿಕೊಳ್ಳುತ್ತಾಳೆ. ಅನಂತರ ಸೋಮು ಮತ್ತು ಜಯಲಕ್ಷ್ಮಿಯರ ವಿವಾಹವಾಗುತ್ತದೆ. ತಂದೆ ಎದುರುಗಡೆ ಇದ್ದರೂ ಸಹ 'ಅಪ್ಪಾ' ಎಂದು ಕರೆಯುವ ಅವಕಾಶಗಳು ಇರುವುದಿಲ್ಲ. ಆದರೆ ಆ ಕುಟುಂಬದವರು ಜಯಲಕ್ಷ್ಮಿ ಮತ್ತು ಚಂದ್ರಾಳ ರೂಪ ಹೋಲಿಕೆ ಇರುವುದನ್ನು ನೋಡಿ ಸುಮ್ಮನಾಗುತ್ತಾರೆ.

ಸಂಗವ್ವ ಮೂಗೂರಿಗೆ ಹೋಗಿ ಅತ್ತಿಗುಪ್ಪೆಯ ಶ್ರೀಮಂತ ವ್ಯಕ್ತಿಯನ್ನು ಚಂದ್ರಾಳಿಗೆ ಗೊತ್ತು ಮಾಡಿಕೊಂಡು ಬರುತ್ತಾಳೆ. ಈತನ ಹೆಂಡತಿ ಸತ್ತುಹೋಗಿ ಒಂದು ಗಂಡು ಮಗು ಇರುತ್ತದೆ. ಚಂದ್ರ ಇದನ್ನು ಕೇಳಿ ಸರಿ ಎಂದು ಸಮ್ಮತಿ ಸೂಚಿಸುತ್ತಾಳೆ. ಚಂದ್ರಾಳಾ ಗೆಜ್ಜೆಪೂಜೆಯ ಸಿದ್ಧತೆ ಆರಂಭವಾಗುತ್ತದೆ. ಸರ್ವಮಂಗಳ, ಬಸವ್ವ ಬಂದಿಳಿಯುತ್ತಾರೆ. ಈ ಸಂಭ್ರಮವನ್ನು ಗುಂಡಮ್ಮನವರ ಮನೆಯವರಿಗೆ ತಿಳಿಸುತ್ತಾಳೆ.

ಸಾಹುಕಾರ ರಂಗಯ್ಯ ತಮ್ಮ ಮಾತಿನಂತೆ ಚಂದ್ರಾಳ ಹೆಸರಿಗೆ ಆರುಸಾವಿರ ರೂ ಬ್ಯಾಂಕಿನಲ್ಲಿಡುತ್ತಾನೆ. ಅಪರ್ಣಾಳ ಕೈಗೆ ಹತ್ತು ಸಾವಿರ ರೂ ಬರುತ್ತದೆ. ಸಂಗವ್ವ ಮತ್ತು ಅಪರ್ಣಾಳಿಗೆ ಆಗ ಚಂದ್ರಾಳ ಬಗ್ಗೆ ನಂಬಿಕೆ ಮೂಡುತ್ತದೆ.

ಆದರೆ ನೆರೆಹೊರೆಯವರು ಇವಳ ವೈಭವವನ್ನು ನೋಡಿ ಅಸಹ್ಯದ ಭಾವನೆಯಿಂದ ನೋಡುತ್ತಾರೆ. ಗೆಜ್ಜೆಪೂಜೆಯ ಎಲ್ಲಾ ಸಂಪ್ರದಾಯಗಳನ್ನು ಮಾಡಿದ ನಂತರ, ಅವಧಾನಿಗಳ ಮನೆಗೆ ಹೋಗಿ ಅಲ್ಲಿ ಎಲ್ಲರ ಆಶೀರ್ವಾದ ಪಡೆದು ಬರುತ್ತಾಳೆ. ಆ ದಿನ ಹತ್ತಿರವಾದಂತೆ ಚಂದ್ರಾಳ ಮನಸ್ಸು ನೋವು, ವ್ಯಥೆಗಳಿಂದ ತುಂಬಿತ್ತು. ಎಲ್ಲಾ ಕಾರ್ಯಗಳು ಮುಗಿದನಂತರ ಶಯ್ಯಾಗ್ರಹಕ್ಕೆ ತೆರಳಿದಾಗ ತಲೆನೋವೆಂಬ ನೆಪದಿಂದ ಕೆಳಗೆ ಬಂದು ಆಸ್ಪಿರಿನ್ ಪುಡಿ ಎಂದು ನುಂಗುತ್ತಾಳೆ. ಅನಂತರ ಅಗಾಧವಾದ ಹೊಟ್ಟೆ ನೋವಿನಿಂದ ನರಳುತ್ತಾಳೆ. ನಂತರ ಚಂದ್ರ ಕೊನೆಯುಸಿರೆಳೆಯುತ್ತಾಳೆ. ಅವರದೇಹದ ಬಣ್ಣ ಬದಲಾದ್ದುದು ಕಂಡು ಅದರ ಕಾರಣ ಹುಡುಕಿದಾಗ ಆಕೆ ತಂದೆ ನೀಡಿದ ವಜ್ರದ ಉಂಗುರದ ಹರಳಿನ ಪುಡಿಯನ್ನು ನುಂಗಿರುವುದು ಸ್ಪಷ್ಟವಾಗುತ್ತದೆ. ಆಕೆಯ ಮನಸ್ಸು ಕೊನೆಯವರೆಗೂ ಸೋಮುವಿನ ಬಗ್ಗೆ, ಆತನ ಪ್ರೀತಿಯೇ ಉಳಿಯುತ್ತದೆ.

ಈ ರೀತಿಯಾಗಿ ಗೆಜ್ಜೆಪೂಜೆ ಕಾದಂಬರಿಯು ಚಂದ್ರಾಳ ಸಾವಿನಿಂದ ಮುಕ್ತಾಯ ಪಡೆಯುತ್ತದೆ.

ಶಿವರಾಮಕಾರಂತ : ಮೈಮನಗಳ ಸುಳಿಯಲ್ಲಿ

ಶಿವರಾಮಕಾರಂತರ 'ಮೈಮನಗಳ ಸುಳಿಯಲ್ಲಿ' ಎಂಬ ಕಾದಂಬರಿ ಪ್ರಾರಂಭವಾಗುವುದು 'ವಸುಪುರ' ಎನಿಸಿದ್ದ ನಗರ ಇಂದು ಜನರ ಮಾತಿನಲ್ಲಿ 'ಬಸರೂರು' ಆಗಿರುವುದರ ಹಿನ್ನೆಲೆಯಿಂದ ಅದರ ಪ್ರಕೃತಿದತ್ತವಾದ ಸೊಬಗು, ಸೌಂದರ್ಯ, ಸಂಪತ್ತನ್ನು, ಅಲ್ಲಿನ ಬದಲಾದ ಸಂಸ್ಕೃತಿಯನ್ನು ಕುರಿತು ಚರ್ಚಿಸುತ್ತಾರೆ. ಈ ಒಂದು ನಗರದಲ್ಲಿ ವೇಶ್ಯಾ ಲಲನೆಯರು ಹುಟ್ಟಿಕೊಳ್ಳುವುದಕ್ಕೆ ಕಾರಣ ಅಲ್ಲಿಗೆ ವ್ಯಾಪಾರ ವ್ಯವಹಾರಕ್ಕೆ ಬರುತ್ತಿದ್ದ ಪಾಶ್ಚಿಮಾತ್ಯರ ಕಾಮದದೃಷ್ಟಿ ಬಿದ್ದು, ಅದನ್ನು ಕಸುಬನ್ನಾಗಿ ರೂಪು ಪಡೆದಿರುವುದನ್ನು ಕಾಣಬಹುದು. ಅಲ್ಲದೆ ಅಲ್ಲಿನ ನಾವಿಕರ ಕಿಸೆ ತುಂಬಿಸಿ ತರುತ್ತಿದ್ದ ಚಿನ್ನ ಬೆಳ್ಳಿ ನಾಣ್ಯಗಳ ಬಗ್ಗೆ ಅಲ್ಲಿನ ಮಹಿಳೆಯರಲ್ಲಿ ವ್ಯಾಮೋಹವೂ ಇರುತ್ತಿತ್ತು.

ಊರಿನ ಅನಾದಿ ಕಾಲದ ವೇಶ್ಯಾವೃತ್ತಿ ಬೆಳೆದು ಅದರೊಂದಿಗೆ ಅವರಲ್ಲಿ ಸಂಗೀತ, ನೃತ್ಯಾದಿ ಕಲೆಗಳು ಬೆಳೆದಿದ್ದವು. ಇಂಥವರಿಗೆ ಪ್ರತಿಷ್ಠೆ, ಮನ್ನಣೆಗಳಿಗೆ ಸಮಾಜದಲ್ಲಿ ಯಾವ ಕೊರತೆಯೂ ಇರಲಿಲ್ಲ. ಅಂಥ ಒಂದು ಪ್ರಖ್ಯಾತ ಹೆಸರು ಮಂಜುಳೆಯದು. ಮಂಜುಳ ಜನರ ಬಾಯಿಯಲ್ಲಿ ಅಗ್ಗದ 'ಮಂಜಿ' ಆಗಿದ್ದಳು. ಇವಳ ಚೆಲುವನ್ನು, ಯೋಗ್ಯತೆಯನ್ನು, ಕೊರಳನ್ನು ಕುಣಿತವನ್ನು ಮೆಚ್ಚಿ, ಮರುಳಾಗದಿದ್ದವರು ಇಲ್ಲ. ಈಕೆಯ ಸಾಕು ಮಗಳು ಶಾಂತ ಮುದುಕಿಯಾಗಿದ್ದಾಳೆ. ಈಕೆಯ ಅದೃಷ್ಟದಿಂದ, ತೀರ ಕೊನೆಗಾಲದಲ್ಲಿ ಹುಟ್ಟಿದ 'ಚಂದ್ರಿ' ಪ್ರಾಯದ ಹುಡುಗಿ.

ಶಾಂತ ತನ್ನ ಜೀವನದಲ್ಲಿ ಅಂಥ ಪ್ರಸಿದ್ಧಿಯನ್ನಾಗಲೀ, ಸಂಪತ್ತನ್ನಾಗಲಿ, ವಿದ್ಯೆಯನ್ನಾಗಲೀ ಗಳಿಸದ ಒಬ್ಬ ಸಾಮಾನ್ಯ ಗಣೀಕೆ. ಈಕೆಯ ಹೊಟ್ಟೆಯಲ್ಲಿ ಹುಟ್ಟಿದ ಚಂದ್ರಿಗೆ ಈ ಊರೆ ನರಕವೆನಿಸುತ್ತದೆ.

ಗುಡಿಕಾರ ಚಂದಯ್ಯ ಇದ್ದಷ್ಟು ದಿನ ಮಂಜುಳೆಯನ್ನು ಸ್ಮರಿಸಿಕೊಂಡು ಅವಳ ಗತ ವೈಭವಗಳ ಯಾವುದೋ ವಿಚಿತ್ರ ಆರ್ದಾವ ಕಲ್ಪನೆಯನ್ನು ನೆನೆದು 'ಅವಳಂಥ ವ್ಯಕ್ತಿ ಶತಮಾನಕ್ಕೊಬ್ಬಳು' ಎನ್ನುತ್ತಿದ್ದುದುಂಟು. ಈತನನ್ನು ಆಕೆ ತನ್ನ ಕಛೇರಿಗೆ ಹೋಗುವಾಗ ಸಂಧಿಗಾಗಿ ಕರೆದುಕೊಂಡು ಹೋಗುತ್ತಿದ್ದಳು. ಹೀಗಾಗಿ ಚಂದಯ್ಯ ಮತ್ತು ಮಂಜುಳರ ನಡುವೆ ಅಪಾರ ಬಾಂದವ್ಯ ಬೆಳೆದು ಚಂದಯ್ಯನಿಗೆ ಆಕೆಯಲ್ಲಿ ಗೌರವ ಅಭಿಮಾನಗಳು ಹುಟ್ಟಿ ಕೊನೆಯವರೆಗೂ ಆಕೆಯ ಸ್ಮರಣೆಯಲ್ಲೆ ಉಳಿಯುತ್ತಾನೆ.

ಮಂಜುಳೆಯ ತಂಗಿ ಕಪಿಲೆ. ಈಕೆಗೆ ನಾಲ್ಕಾರು ಮಕ್ಕಳಾಗಿದ್ದವು. ಇದರ ಕೊನೆಯ ಮಗುವೇ ಶಾರಿ. ಕಪಿಲೆ ಇದೇ ವೃತ್ತಿಯನ್ನು ನಡೆಸುತ್ತಿದ್ದು, ಸಾವಿನ ತುದಿಯಲ್ಲಿರುವಾಗ

ಶಾರಿಯನ್ನು ಅಕ್ಕನ ಕೈಗೆ ಒಪ್ಪಿಸಿ ಕೊನೆಯುಸಿರೆಳೆದಳು. ಮಂಜುಳ ಸತ್ತ ನಂತರ ಅವರ ಸೈನಾತಿಯಗಿ ಬಾಳಿನ ಗಂಗಕ್ಕ ಶಾರಿಯನ್ನು ಚೆನ್ನಾಗಿ ನೋಡಿಕೊಂಡಳು. ಈಕೆಯ ಮೇಲೆ ತನ್ನ ತಾಯಿಯ ಪ್ರಭಾವ ಬೀರಿದ್ದರಿಂದ ಊರಿನ ಹೆಮ್ಮಾಡಿ ಪಟೇಲರ ಮಗ ಕಾಳಿಂಗರಾಯ ಶಾಂತಳ ಜೊತೆ ಸಂಬಂಧ ಬೆಳೆಸುತ್ತಾನೆ. ಈತನಿಗೆ ಮದುವೆಯಾಗಿದ್ದರೂ ಮೋಜಿನ ಬದುಕು ಇವನಿಗೆ ಆಕರ್ಷಕವಾಗಿತ್ತು. ಇವನ ರಸಿಕ ಮಾತುಗಳಿಗೆ ಮರುಳಾಗಿ ಪ್ರೇಮಪತ್ರವನ್ನು ಶಾರಿ ಕಳುಹಿಸುತ್ತಾಳೆ.

ಶಾರಿ ಮತ್ತು ಕಾಳಿಂಗಯ್ಯನ ಸ್ನೇಹ ಬೆಳೆದ ನೆರೆಊರುಗಳಿಗೆ ನಾಟಕ ನೋಡಲು ಹೋಗುತ್ತಿದ್ದರು. ಶಾರಿ ಅವುಗಳ ಪ್ರಭಾವ ಮತ್ತು ಮಂಜುಳೆಯ ಪ್ರಭಾವದಿಂದ ಹಾಡುಗಳನ್ನು ಹಾಡುವುದು, ನೃತ್ಯ ಮಾಡುವುದರ ತರಬೇತಿಯನ್ನು ಅದರ ಅಭಿಲಾಷೆಯನ್ನು ಪಡೆದಿದ್ದಳು. ವಸುಪುರಕ್ಕೆ ವೆಂಕೋಬರಾಯರ ಮಹಾಲಕ್ಷ್ಮಿ ಪ್ರಸಾದಿತ ನಾಟಕ ಮಂಡಳಿ ಬಂದಾಗ ಪೇಟೆವಾಲಾ ಗಿರಿಗೌಡ, ಕಲ್ಲಟ್ಗಿ ಶೀನಪ್ಪ –ಇವರ ಉತ್ತೇಜನದಿಂದ ಹಾಡುಗಳು ಹಾಡುತ್ತಾಳೆ. ಕಾಳಿಂಗಯ್ಯನ ಮೋಹಕ ಮಾತುಗಳಿಗೆ ಬಲಿಯಾಗಿ ನಾಟಕಕ್ಕಾಗಿ ತನ್ನ ಬಳಿ ಇದ್ದ ಮನೆ, ಹೊಲಗಳನ್ನು ಅಡವಿಟ್ಟು ಹಣ ನೀಡುತ್ತಾಳೆ. ಇದನ್ನು ಕಂಡ ಗಂಗಕ್ಕನಿಗೆ ಕಾಳಿಂಗಯ್ಯನ ಬಗ್ಗೆ ಕೋಪ ಬಂದು ಆತ ಜಾನಕಿಯೊಡನೆ ಅಕ್ರಮ ಸಂಬಂಧ ಹೊಂದಿ ಇಲ್ಲಿಂದ ಹಣವನ್ನು ಕೊಡುತ್ತಿದ್ದ ವಿಚಾರವನ್ನು ಶಾರಿಗೆ ತಿಳೀಸುತ್ತಾಳೆ. ಇದರಿಂದ ಕಾಳಿಂಗಯ್ಯ ಮನೆಗೆ ಬರುವುದನ್ನು ನಿಲ್ಲಿಸಿದಾಗ, ಕೃಷ್ಣಲೀಲೆ ನಾಟಕದ ಕೃಷ್ಣನ ಪಾತ್ರ ಮಾಡಿ ವಿಠಲ ಮತ್ತು ಶಾರಿಯ ಸ್ನೇಹ ಸಂಬಂಧ ಬೆಳೆಯುತ್ತದೆ. ಕಾಳಿಂಗಯ್ಯನಿಗೆ ಹುಟ್ಟಿದ ನಾಲ್ಕು ಮಕ್ಕಳು ರೋಗಗಳಿಂದ ಸಾವನ್ನು ಹೊಂದಿದ್ದರೆ ವಿಠಲನಿಂದ ಶಾರಿಗೆ 'ಚಂದ್ರ' ಎಂಬ ಮಗಳು ಹುಟ್ಟುತ್ತಾಳೆ.

ಶಾರಿ ಚಂದ್ರಾಳೊಡನೆ ಕೋಟೇಶ್ವರದ ವೈಕುಂಠ ನಾಯಕ ಮಾಡಿಕೊಟ್ಟು ಮನೆಗೆ ಸೂರು ಬಿಟ್ಟು ಹಣಕ್ಕಾಗಿ ಹೋಗಿದ್ದಳು. ಶಾರಿ ಮನುಷ್ಯ ಕುಲದ ಕೊಳಚೆಯಲ್ಲಿ ಸಾಕಷ್ಟು ಮಿಂದು ಮೂರುವರ್ಷಗಳ ನಂತರ ಬಂದಳು. ಅದೇ ಊರಿನ ರಾಮಪ್ಪ ಅಡಿಗಳ ಮೊಮ್ಮಗಳು ಶಾರದೆ ಚಂದ್ರಿಯ ಸಹಪಾಠಿಯಾಗಿ ವಿಧ್ಯಾಭ್ಯಾಸಕ್ಕೆ ಸೇರಿದರು. ಚಂದ್ರಳ ಸೌಂದರ್ಯವನ್ನು ಕಂಡು ತನ್ನವಳನ್ನಾಗಿ ಮಾಡಿಕೊಳ್ಳಲು ಸಾಕಷ್ಟು ಮಂದಿ ಬಂದವರು. ಪಠೇಲಿ ಸೋಮಯ್ಯ, ಕಂದಾವರದ ಶಾಮಣ್ಣ. ಶಾಮಣ್ಣ ತನ್ನ ಬಳಿ ಅಡವಿಟ್ಟು ಸಾಲ ಪಡೆದಿದ್ದನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡ ಚಂದ್ರಿ ಜೊತೆ ಸೇರಬೇಕು ಇಲ್ಲವಾದರೆ ಪಾಲಿತೀರಿಸಬೇಕು. ಅದೂ ಇಲ್ಲವಾದರೆ ಆಸ್ತಿತನ್ನ ಹೆಸರಿಗೆ ಬರಬೇಕೆಂದು ಹೇಳುತ್ತಾನೆ.

ತನ್ನ ಅಜ್ಜಿಯ ಆಸ್ತಿಯ ಉಳಿವಿಗಾಗಿ ಹಳೆಯ ಕಡತಗಳನ್ನು ತೆಗೆದು ಅವಳ ಆತ್ಮ ವೃತ್ತಾಂಶ ತಿಳೀಯುತ್ತಾಳೆ.

ಮಂಜುಳೆಯ ತಾಯಿ ಭವಾನಿ. ಈಕೆಗೆ ಗಂಗೊಳ್ಳಿಯ ವ್ಯಕ್ತಿಯೊಡನೆ ಸಂಪರ್ಕ ಪಡೆದು ಅವನಿಗೆ ಮಂಜುಳೆ ಹುಟ್ಟಿರುತ್ತಾಳೆ. ಹುಟ್ಟಿಸಿದ ಅಪ್ಪನನ್ನು 'ಪಾಳ' ಎಂದು ಇವರಲ್ಲಿ ಕರೆಯುತ್ತಿದ್ದಳು. ಈ ಪಾಳನಿಗೆ ಹೆಂಡತಿ ಮಕ್ಕಳು, ಅಣ್ಣ ತಂದಿರ ಮಕ್ಕಳು, ಬಹಳ ಜನ ತುಂಬಿದ ಕುಟುಂಬವಿತ್ತು. ಬಸರೂರಿಗೆ ಗಂಗೊಳ್ಳಿಯಿಂದ ರಾತ್ರಿವೇಳೆ ಹಡಗಿನಲ್ಲಿ ಬಂದು ಹೋಗುವುದನ್ನು ಮಾಡುತ್ತಿದ್ದರು. ಪಾಳನ ಮಗಳ ಮದುವೆಯ ಸಂಭ್ರಮಕ್ಕೆ ಹೋಗಿ ತಾಯಿ ಮಗಳಿಬ್ಬರು ಹಾಡಿನ ಮೂಲಕ ನೃತ್ಯ ಮಾಡಿದ್ದರು.

ಮಂಜುಳೆಯು ತನ್ನ ತಾಯಿಯಿಂದ ಸಂಗೀತ ವಿದ್ಯೆಯನ್ನು ಪಡೆದಿದ್ದಳು. ಇದರ ಹೆಚ್ಚಿನ ಅಧ್ಯಾಯನವನ್ನು ರಾಧಾಕೃಷ್ಣ ಬುಮ ಎಂಬ ಹಿಂದೂಸ್ಥಾನಿ ವಿದ್ವಾಂಸರಿಂದ ಗಳಿಸುತ್ತಾಳೆ. ಪದ್ಮನಾಭನೂ ಈಕೆಯ ಜೊತೆಯಲ್ಲಿ ಸಂಗೀತವನ್ನು ಕಲಿತು ತಂಬೂರಿಯನ್ನು ನುಡಿಸುತ್ತಾನೆ.

ಪಾಳನನ್ನು ಕಳೆದುಕೊಳ್ಳುವ ಮೊದಲು ಮಂಜುಳೆ ತನ್ನ ತಾಯಿಯನ್ನು ಕಳೆದುಕೊಳ್ಳುತ್ತಾಳೆ. ಆಕೆಗೆ 'ಅರಿಸಿನ ಮುಂಡಿಗೆ ರೋಗ' ಬಂದಿರುತ್ತದೆ. ಮಂಜುಳೆ ತನ್ನ ಪಾಳ, ತಾಯಿ, ರಾಧಾಕೃಷ್ಣ ಬುವಾರನ್ನು ಕಳೆದುಕೊಳ್ಳುತ್ತಾಳೆ. ಅನಂತರ ಬೈವಾರು ರಾಘವಆಯರ ಲಗ್ನದ ಮನೆಗೆ ಹೋಗುವ ಆಮಂತ್ರಣ ಬಂದು ಅಲ್ಲಿ ಪದ್ಮನಾಭ ಮತ್ತು ತಂಗಿ ಕಪಿಲೆಯ ಜೊತೆ ನರ್ತನ ಮಾಡುತ್ತಾಳೆ.

ಮಂಜುಳೆಗೆ ತನ್ನ ಮನಸ್ಸಿನ ಅಭಿಲಾಷೆಯನ್ನು ಕುರಿತು ಕಂಡವಾರು ವಾಸುದೇವ ಪೈಗಳು ಪತ್ರವನ್ನು ಬರೆಯುತ್ತಾರೆ. ಅಲ್ಲದೆ ಆಕೆಗೆ ಬೇಕಾದ ಎಲ್ಲಾ ವಸ್ತುಗಳನ್ನು ಕಳುಹಿಸಿ ಆಕೆಯ ಒಪ್ಪಿಗೆಯನ್ನು ಪಡೆಯಲು ತನ್ನ ಬಂಟ ಮಂಜನನ್ನು ಕಳುಹಿಸುತ್ತಾನೆ. ಅನಂತರ ಮಂಜುಳೆ ತನ್ನ ಸಮ್ಮತಿ ಸೂಚಿಸುತ್ತಾಳೆ. ಆದರೆ ಈತ ಮನಸ್ಸಿಲ್ಲ ಮೈಯೊಂದೆ ಎಂಬ ಭಾವನೆಯಿಂದ ವರ್ತಿಸಿದಾಗ ಈತನ ಈ ಸ್ವಭಾವ ಮಂಜುಳೆಗೆ ದುಃಖವನ್ನುಂಟುಮಾಡುತ್ತದೆ.

ಅನಂತರ ಮಂಜುಳೆಗೆ ಸುಬ್ರಾಯ ಉಳ್ಳಾರರು ಕಾಗದ ಬರೆದು ತನ್ನ ಮನ ಅಭಿಲಾಷೆಯನ್ನು ತಿಳಿಸುತ್ತಾರೆ. ಅನಂತರ ಮಂಜುಳೆ ಇವರ ಜೊತೆ ಸಂಬಂಧ ಹೊಂದಿರುವುದು. ಈಕೆಯ ಮನಸ್ಸಿಗೆ ನೋವಾಗುವುದನ್ನು ಪದ್ಮನಾಭನಲ್ಲಿ ಹೇಳಿಕೊಳ್ಳುತ್ತಾಳೆ. ಆತ ಕಪಿಲೆ ಬೇರೆ ಮನೆ ಮಾಡಿಕೊಂಡಿದ್ದಾಳೆ. ಅವಳ ಸಂಸಾರ ಅವಳಿಗೆ. ಅವಳೂ ಹೊಟ್ಟೆ ಹೊರೆದುಕೊಳ್ಳಬೇಕಲ್ಲ ತನ್ನ ಹೊಟ್ಟೆಯನ್ನು ? ಬಹಳ ಮಡಿ ಇಟ್ಟುಕೊಂಡರೆ

ಅವಳ ಬದುಕು ಸಾಗೀತೇ ? ಎಂದು ಹೇಳುತ್ತಾನೆ.

ಕಪಿಲೆಗೆ ಕಂಡಲಾರು ಪೈಗಳು ಚಿನ್ನ ಮಾಡಿ ಹಾಕಿರುವ ವಿಚಾರದಲ್ಲಿ ಸುಳ್ಳು ಹೇಳುತ್ತಾರೆ. ಏಕೆಂದರೆ ಅವರು ತಮ್ಮ ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಅನುಭವಿಸಿದರೂ, ತಮ್ಮ ಆಸೆಯ ಈಡೇರಿಕೆಗಾಗಿ ಸುಳ್ಳು ಹೇಳುವುದನ್ನು ತಿಳಿಯಬಹುದು. ಪದ್ಮನಾಭ ಮಂಜುಳೆಯನ್ನು ಮಂದರ್ತಿ ಮೇಳದ ಆಟಕ್ಕೆ ಕರೆದು ಕೊಂಡೋಡಿ ಅಲ್ಲಿನ ಕರ್ಣಾರ್ಜುನರ ಕಾಳಗವನ್ನು ನೋಡುತ್ತಾರೆ. ಸ್ತ್ರೀವೇಷ ಧರಿಸಿದ್ದ ಕೊಕ್ಕರಣೆ ಶೀನ ಮಂಜುಳೆಯ ಮನೆಗೆ ನಿದ್ರೆ ಕಳಿಯಲು ಬರುತ್ತಾನೆ. ಆದರೆ ಮಂಜುಳೆಗೆ ಆತನ ಬಗ್ಗೆ ಮನಸ್ಸು ನಾಟಿ ಅವನೊಡನೆ ಸೇರಲು ಹೋದಾಗ ಶೀನಪ್ಪ ಅಲ್ಲಿಂದ ದೂರಾಹುತ್ತಾನೆ. ಈ ದುಃಖದಿಂದ ತನ್ನ ತಂಬೂರಿಯನ್ನು ನುಡಿಸಲುತ್ತಾಳೆ. ಶೀನಪ್ಪ ಈ ಮನೆಗೆ ಮತ್ತೆ ಮತ್ತೆ ಬರುತ್ತಿದ್ದರೂ ಆತನಿಂದ ಸುಖ ಅನ್ನುವುದು ಮಂಜುಳೆಗೆ ದೊರೆಯದು.

ಧಾರೇಶ್ವರ ವೆಂಕಟವನ್ನು ಪದ್ಮನಾಭ ಮಂಜುಳೆ ಮನೆಗೆ ಕರೆದು ತರುತ್ತಾನೆ. ಈತನೂ ಸಹ ರಾಧಾಕೃಷ್ಣ ಬುವಾರ ಶಿಷ್ಯನಾಗಿದ್ದವನು. ವೆಂಕಟುವಿಗೆ 36 ವಯಸ್ಸಿರಬಹುದು. ಈ ವಯಸ್ಸಿನಲ್ಲಿ ಯೋಚನೆ ಹುಟ್ಟಿಕೊಂಡಿದೆ. ಊರಲ್ಲಿ ಸ್ವಲ್ಪ ಹೊಲಗದ್ದೆಗಳಿವೆಯಂತೆ. ಸಂಗೀತದಿಂದ ಹೊಟ್ಟೆ ತುಂಬುವುದಿಲ್ಲವೆಂದು ಧಾರೇಶ್ವರದಲ್ಲಿ ಒಂದು ಅಂಗಡಿಕೊಂಡಿದ್ದಾನೆ. ಈಗ ಅವನಿಗೆ ಮದುವೆಯಾಗುವ ಮನಸ್ಸು ಬಂದಿದೆ. ಅದಕ್ಕಾಗಿ 'ಹೆಣ್ಣು' ಹುಡುಕುವುದಕ್ಕೆ ಪದ್ಮನಾಭ ಮತ್ತು ಮಂಜುಳೆಯರ ಜೊತೆ ಊರೂರು ನೋಡಿ ಬರುತ್ತಾರೆ.

ಯಾರೋ ಇಬ್ಬರು ಕೂಸಾಳುಗಳು ಮಂಜುಳೆಯ ಮನೆಯ ಉದಯಗಡೆ ಬಂದು ನೀರನ್ನು ಕೇಳುತ್ತಾರೆ. ಅವರನ್ನು ನೋಡಿ ಮಂಜುಳೆ ಕುಡಿಯಲು ನೀರು, ತಿನ್ನಲು ಊಟವನ್ನು ನೀಡುತ್ತಾಳೆ. ವಯಸ್ಸಾದ ಪಮ್ಮ ಮತ್ತು ದುಗ್ಗಿ ಇವರ ದಾಂಪತ್ಯ ಪ್ರೀತಿ ಕಂಡು ಮಂಜುಳೆಯು ಸಂತೋಷ ಪಡುತ್ತಾಳೆ. ಆನಗಳ್ಳಿ ಬಯಲಿನ ಒಬ್ಬ ವ್ಯಕ್ತಿಯನ್ನು ವಿಚಾರಿಸಿದಾಗ ಆತ ದುಗ್ಗಿ ಸತ್ತ ನಂತರ ಪಮ್ಮನು ಹೋದ ವಿಚಾರ ತಿಳೀಸುತ್ತಾಳೆ. ದುಗ್ಗಿ, ಪಮ್ಮರಂಗೆ ಹಿರಿಯರಾದ ರಾಮಪ್ಪ ಅಡಗಳನ್ನು, ಅವರ ಮಡದಿ ಕಾವೇರಮ್ಮನವರನ್ನು ಮಂಜುಳೆ ಕಂಡಿದ್ದಾಳೆ. ಕಪಿಲೆಯ ಅದೃಷ್ಟ ಮಂಜುಳೆಗಿಂತಲೂ ಒಳ್ಳೆಯದು. ಅವಳಿಗೆ ಮೂರು ಮಕ್ಕಳಿದ್ದಾರೆ. ಪೈಗಳವರು ದಗಾ ಕೊಟ್ಟು ಹೋದರೂ ಆಕೆಯನ್ನು ಬಯಸುವವರಿಗೆ ಏನೂ ಕೊರತೆಯಿಲ್ಲ. ಆದರೆ ಇದನ್ನು ಕಂಡು ಮಂಜುಳೆಗೆ ಅಸೂಯೆನು ಉಂಟಾಗುತ್ತಿತ್ತು.

ಮಂಜುಳೆ ಸುಬ್ರಾಯ ಉಳ್ಳಾರರ ಸನ್ನಿಧಾನಕ್ಕೆ ಪತ್ರಬರೆಯುತ್ತಾಳೆ. ಆ ಪತ್ರವನ್ನು ಕಂಡು ಮತ್ತೆ ಅವಕಾಶ ಮಾಡಿಕೊಂಡು ಬರುವುದಾಗಿ ತಿಳಿಸಿದ ನಂತರ ಒಂದು ದಿನ

ಬರುತ್ತಾರೆ. ಕಣ್ಣ ವೈದ್ಯರಲ್ಲಿಗೆ ಹೋಗಿ ಮಂಜುಳೆಯ ಮನೆಗೆ ಬಂದಾಗ ಆಕೆಗೆ ಎಲ್ಲಿಲ್ಲದ ಸಂಭ್ರಮ ಉಂಟಾಗುತ್ತದೆ. ಪದ್ಮನಾಭ ಮತ್ತು ದಾಮೋದರ ಇಬ್ಬರನ್ನು ಕರೆಯಿಸಿಕೊಂಡು ಯಮನ್ ರಾಗದ ಹಾಡನ್ನು ಹಾಡುತ್ತಾಳೆ. ಉಳ್ಳೂರರ ಮನಸ್ಸು ತೃಪ್ತಿಯಾಗುತ್ತದೆ. ಅವರು ದಾಮೋದರ ಮತ್ತು ಪದ್ಮನಾನಿಗಿಬ್ಬರೂ ಹೂವನ್ನು ನೀಡಿ, ಮಂಜುಳೆ ಕೈಗೆ ತರ್ಜನಿ ಬೆರಳಿಗೆ ಒಪ್ಪುವ ಚಿನ್ನದ ಉಂಗುರವನ್ನು ನೀಡಿ ಹೋಗುತ್ತಾರೆ.

ಒಂದು ದಿನ ಅನಿರೀಕ್ಷಿತವಾಗಿ ಚೌತಿ ಹಬ್ಬದ ದಿನ ಕಣ್ಣ ವೈದ್ಯರನ್ನು ನೋಡಲು ಅಲ್ಲಿಗೆ ಬಂದು ಅದೇ ಹೆಜ್ಜೆಗಳನ್ನು ಮಂಜುಳೆಯ ಮನೆಯ ಕಡೆಗೆ ಇಟ್ಟಿರುತ್ತಾರೆ. ಆ ದಿನ ಪದ್ಮನಾಭ ಮತ್ತು ದಾಮೋದರನಿಗೆ ಹೇಳದೆ, ಮನತೃಪ್ತಿಯಾಗುವವರೆಗೆ ನೃತ್ಯ ಮಾಡುತ್ತಾಳೆ. ಅನಂತರ ಉಳ್ಳೂರರು ಇಲ್ಲಿ ಬಂದ ಕಾರಣವನ್ನು ತಿಳಿಸುತ್ತಾರೆ. ಊಳ್ಳೂರರ ಮನೆಯಲ್ಲಿ ವರ್ಷವೂ, ಬರುತ್ತಿತ್ತು. ದಿವಸ ನವರಾತ್ರಿ ನಡೆಯುತ್ತದೆ. ಅಲ್ಲಿಗೆ ನಿನ್ನ ಪಾಥಿಯವರನ್ನು ಮನೆಗೆ ಕರೆಯಿಸಿಕೊಂಡು ಸಂಗೀತ ಕೇಳುವ ಹಸಿವನ್ನೆಲ್ಲ ಹಿಂಗಿಸಿಕೊಳ್ಳಬೇಕೆಂದಿದ್ದೇನೆ. ಅಲ್ಲಿಗೆ ಪದ್ಮನಾಭ ಮತ್ತು ದಾಮೋದರರನ್ನು ಕರೆದುಕೊಂಡು ಬರುವುದಾಗಿ ಹೇಳುತ್ತಾರೆ. ಅದೇ ರೀತಿ ಅವರ ಮನೆಯಲ್ಲಿ ನೃತ್ಯವನ್ನು ಮಾಡುತ್ತಾಳೆ.

ಯುಗಾದಿ ಹಬ್ಬಕ್ಕಾಗಿ ಸುಬ್ಬರಾಯ ಉಳ್ಳೂರರು ಉಡುಗೊರೆಯಾಗಿ ಸೀರೆಗಳನ್ನು ತಿನಿಸುಗಳನ್ನು ಕಳಿಸುತ್ತಾರೆ. ಒಂದು ದಿನ ಅವರಿಗೆ ಪಾರ್ಶ್ವವಾರು ಹೊಡೆದಾಗ ಮಂಜುಳೆ ಕಣ್ಣ ವೈದ್ಯರನ್ನು ಕರೆತಂದು ಉಪಚರಿಸುತ್ತಾಳೆ. ಸುಬ್ಬರಾಯರ ಪತ್ನಿ ಲಕ್ಷ್ಮಿ ತನ್ನ ಗಂಡನನ್ನು ಸಕಾಲಕ್ಕೆ ವೈದ್ಯರಲ್ಲಿ ತೋರಿಸಿದ್ದಕ್ಕಾಗಿ ಪ್ರೀತಿ ತೋರಿಸುತ್ತಾಳೆ.

ಅನಂತರ ನಂಜಪ್ಪ ಎಂಬ ಸಾವುಕಾರ ಶೀನಪ್ಪನ ಮೂಲಕ ಪತ್ರ ಕಳುಹಿಸಿ ಮದುವೆಗಾಗಿ ಹಾಡುಗಾರಿಕೆಗೆ ಮಂಜುಳೆಯನ್ನು ಸ್ವಾಗತಿಸುತ್ತಾರೆ. ಮಂಜುಳೆ ಪದ್ಮನಾಭ ಮತ್ತು ದಾಮೋದರರ ಜೊತೆ ಹೋಗಿ ಬರುತ್ತಾಳೆ. ಆಗಾಗೆ ಮಂಜುಳೆಯ ಮನೆಗೆ ನಂಜಪ್ಪ ಬಂದು ಆಕೆಯ ನೃತ್ಯ ಸಂಗೀತವನ್ನು ಆಲಿಸುತ್ತಿರುತ್ತಾನೆ. ಈ ನಡುವೆ ಮಂಜುಳೆ ತಾಯಿಯಾಗುವ ಭಾಗ್ಯ ಪಡೆಯುತ್ತಾಳೆ. ಆದರೆ ಹುಟ್ಟಿದ ಮಗು ಬೇಗನೆ ಮರಣ ಹೊಂದುತ್ತದೆ. ಈ ಚಿಂತೆಯಿಂದ ಮಂಜುಳೆಯು ಸಾವನ್ನು ಹೊಂದುತ್ತಾಳೆ.

ಚಂದ್ರ ಮಂಜುಳೆಯ ಬದುಕಿನ ಒಂದೊಂದು ಘಟನೆಯನ್ನು ತಿಳಿದು ಅಜ್ಜಿಯ ಬಗ್ಗೆ ಬಹಳ ಗೌರವ ಅಭಿಮಾನ ಹೊಂದಿ ತನ್ನ ಜೀವನದ ಬಗ್ಗೆ ನಿಲುವು ತಳೆಯುತ್ತಾಳೆ.

ಅಧ್ಯಾಯ–5

ಪ್ರಗತಿ ಶೀಲ ಸಾಹಿತ್ಯದ ಕಾದಂಬರಿಗಳ ಜೀವಪರ ಕಾಳಜಿಗಳು ಮತ್ತು ವೇಶ್ಯಾ ಸಮಸ್ಯೆಗಳು

ಇಂದು ಶಿಕ್ಷಣ, ವೈಜ್ಞಾನಿಕತೆ, ಆಧುನೀಕರಣಗಳ ಪ್ರಭಾವದಿಂದಲೂ ಈ ಸಮಸ್ಯೆ ಇನ್ನೂ ಜಟಿಲವಾಗಿರುವುದು ಕಾದಂಬರಿಗಳಲ್ಲಿ ಗುರ್ತಿಸಬಹುದಾಗಿದೆ.

ವ್ಯವಸ್ಥೆಯ ಹಿಡಿತಗಳು ಪುರುಷನ ಕೈಯಲ್ಲಿವೆ. ಜೀವನದ ಪ್ರಮುಖ ಕೇಂದ್ರವಾದ ಆರ್ಥಿಕ ನಡೆಗಳು ಪುರುಷನಲ್ಲೇ ಕೇಂದ್ರೀಕೃತವಾಗಿವೆ. ಅವನೇ ಅವುಗಳನ್ನು ಸೆಳೆದುಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ. "ವ್ಯವಸ್ಥೆಯ ಮುಖ್ಯ ನಿಯಂತ್ರಣ ಪುರುಷನ ಕೈಯಲ್ಲಿದ್ದು ಅದನ್ನು ಅವರು ತಮ್ಮ ಹಿತಾಸಕ್ತಿಗೆ, ಅನುಕೂಲಕ್ಕೆ ತಕ್ಕಹಾಗೆ ಬಳಸಿಕೊಳ್ಳುತ್ತಾರೆ. ಮಹಿಳೆಯರ ವಿನಿಮಯದ ಬೆಲೆ ಕಟ್ಟುವವರು, ಅವುಗಳಿಗೆ ಅರ್ಥವನ್ನು ನೀಡುವವರು, ನಿರ್ಧರಿಸುವವರು ಪುರುಷರೆ"[1] ಎಂದು ವಾಸ್ತವ ಸತ್ಯ. 'ಹೂವು–ಹಣ್ಣು' ಕಾದಂಬರಿಯಲ್ಲಿ ಬರುವ ರಮಾಳ ಪಾತ್ರ ಆರ್ಥಿಕ ಸಮಸ್ಯಗೆ ಒಳಗಾಗಿ ತನ್ನ ಬದುಕಿನ ನಿರ್ವಹಣೆಗೆ ನಾನಾ ಕಡೆಗಳಲ್ಲಿ ಉದ್ಯೋಗವನ್ನು ಪಡೆಯುವ ಹೋರಾಟದಲ್ಲಿ ಪುರುಷರ ದಬ್ಬಾಳಿಕೆಗೆ ಒಳಗಾಗುತ್ತಾಳೆ.

ರಮಾಳ ಸುತ್ತಲು ಸಮಾಜದ ಪುರುಷ ವರ್ಗವೂ ಸುತ್ತುತ್ತದೆ. ಒಂದು ಮರಕ್ಕೆ ಸಾಕಷ್ಟು ಹೂ, ಹಣ್ಣು, ಕಾಯಿಗಳಿರುವಂತೆ 'ರಮಾ' ಎಂಬ ಒಂದು ಹೆಣ್ಣನ್ನು ಬೇರೆ ಬೇರೆ ವಿಕೃತ ಕಾಮ ಪುರುಷರು ಹೇಗೆ ಬಳಸಿಕೊಂಡಿದ್ದಾರೆಂಬುದನ್ನು ತಿಳಿಯಬಹುದು. ರಮಾ ತನ್ನ ಸ್ವ ಇಚ್ಚೆಯಿಂದ ಈ ಬದುಕಿಗೆ ಬಂದವಳಲ್ಲಿ ಇಂತಹ ದುರಂತ ಜೀವನಕ್ಕೆ ಸಮಾಜ ಪ್ರಮುಖ ಕಾರಣವಾಗುತ್ತದೆ. ಅನಂತರ ಆಕೆಯ ವೈಯಕ್ತಿಕ ಬದುಕಿನ ಸಮಸ್ಯೆಗಳು ಎದುರಾಗುತ್ತವೆ.

ರಮಾಳಿಗೆ ಕಾರ್ಖಾನೆಯ ಕೆಲಸ ನೀಡುವ ಮ್ಯಾನೇಜರ್ ಆಕೆಯ ಮೇಲಿನ ವ್ಯಾಮೋಹದಿಂದ ಆಕೆಯ ರೂಪ ಸೌದರ್ಯದ ಮೋಹಕ್ಕೆ ಬಿದ್ದು ಸ್ವಾರ್ಥದಿಂದ ಕೆಲಸ ನೀಡುತ್ತಾನೆಯೇ ಹೊರತು ಆಕೆಯ ದುಡಿಮೆಯನ್ನು ನೋಡಲ್ಲ. ಅವಳನ್ನು ಕಾಮ ತೃಷೆಗೆ ಬಳಸಿಕೊಳ್ಳುವ ಉದ್ದೇಶ, ಆ ಮೂಲಕ ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವ ಪ್ರಯತ್ನ ಇದೆ. ರಮಾ ಸರ್ಕಾರಿ ಆಫೀಸರೊಬ್ಬರ ಮನೆಯಲ್ಲಿ ಅಡಿಗೆಯ ಕೆಲಸಕ್ಕೆ ಸೇರಿದಾಗ ಅವರ ಮಾಗನಿಂದಲೂ ತಾಯಿಯ ಸ್ಥಾನದಲ್ಲಿರುವ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸುತ್ತಾನೆ. ಜೊತೆಗೆ ನರ್ಸಿಂಗ್ ಹೋಂ ನಲ್ಲಿ ಕೆಲಸಕ್ಕೆ ಸೇರಿದಾಗಲೂ ಅಲ್ಲಿನ ಡಾಕ್ಟರನ

1 ಮಹಿಳೆ ಮತ್ತು ಸಾಮಾಜಿಕತೆ ಎನ್.ಕೆ. ಕೋದಂಡರಾಮ ಪು.ಸಂ. 45

ಬಲಗೈ ಭಂಟನಾದ ಮುರುಗಪ್ಪನು ಸಹ ರಮಾಳ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಆತನ ಕೈಯನ್ನು ಕಚ್ಚಿ ಬಿಡಿಸಿಕೊಂಡು ಬರುತ್ತಾಳೆ. ಹೀಗೆ ಹಂತ ಹಂತವಾಗಿ ನಡೆಯುವ ಆಕೆಯ ಮೇಲಿನ ದೌರ್ಜನ್ಯದ ಅನಿವಾರ್ಯವಾಗಿ ಆಕೆ ಹೆಣ್ಣು ಎಷ್ಟೇ ಮಾನಗಳಿಗೆ ಅಂಜಿ ಅದಕ್ಕಾಗಿ ಬದುಕಲು ಯತ್ನಿಸಿದರೂ ಸಮಾಜ ಅದಕ್ಕೆ ಅವಕಾಶ ನೀಡದ ಸನ್ನಿವೇಶ ಸೃಷ್ಟಿಸಿರುವುದರಿಂದ ಈ ವೃತ್ತಿಗೆ ಬರಲು ಸಾಧ್ಯವಾಗಿದೆ.

ಪ್ರಾರಂಭದಲ್ಲಿ ರಮಾಳ ಬಳಿ ಬರುವವರು ಚಿನ್ನ, ರನ್ನ, ರಾಣಿ, ಪ್ರೇಯಸಿ ಹೀಗೆ ನಾನಾ ರೀತಿಯಲ್ಲಿ ಕರೆಯುತ್ತಿದ್ದವರು ಅನಂತರ ಅವರ ವರ್ತನೆ ಕ್ರೂರವಾಗುತ್ತದೆ. ಸುಬ್ಬಯ್ಯ 'ದೇಹಮಾರಿಕೊಂಡು ಬದುಕೊ ಲೌಡಿಗೆ ಎಂತಹ ಅಹಂಕಾರ. ನಾವು ದುಡ್ಡು ಬಿಸಾಕಿದ ಮೇಲೆ ಮೈಗೆ ಹುಷಾರಿರಲಿ ಇಲ್ಲದಿರಲಿ ಸಾಯ್ತಾ ಮಲಗಿದ್ದರೂ ಬರಬೇಕು ನಮಗೇನು ದುಡ್ಡು ಗಿಡದಲ್ಲಿ ಬಿಡುತ್ತದೆಯೇ ? ಕಾಸು ಬಿಸಾಕಿದರೆ ನಮ್ಮ ಸೇವೆ ಮಾಡೋಕೆ ಇವಳಂತಹವರು ಸಾವಿರ ಜನ ಇದ್ದಾರೆ, ಏನೊ ವರ್ತನೆ ಮನೆಅಂತ ನಾನು ಅಭಿಮಾನವಿಟ್ಟುಕೊಂಡಿದ್ದರೆ ದರ್ಬಾರು ಮಾಡುತ್ತಾಳೆ ಇವಳು. ಈ ಮುದಿ ಮುಖ ಯಾರಿಗೆ ಬೇಕಾಗಿದೆ' ಎಂದು ಕೂಗಾಡಿದ ಮಾತುಗಳು ಹೆಣ್ಣಿನ ಬದುಕು ಪುರುಷನ ಅಧೀನದಲ್ಲಿ ಎಂತಹ ಸೋಚನೀಯ ಎನಿಸುತ್ತದೆ. ಗಂಡಿನ ಕಾಮ ತೃಷೆಗೆ ಹೆಣ್ಣು ಒಂದು ಬೋಗವಸ್ತು, ಕಾಸಿಗಾಗಿ ಪ್ರತಿಯೊಂದು ಹೆಣ್ಣು ತನ್ನ ಕನ್ಯತ್ವವನ್ನು ಕಳೆದುಕೊಳ್ಳುವುದಕ್ಕೆ ಸಿದ್ದಳಿದ್ದಾರೆ ಎಂಬ ಅಭಿಪ್ರಾಯ ಸಮಾಜದಲ್ಲಿ ಮೂಡಿದೆ. ಅದೇ ಆತನ ಹೆಂಡತಿ ತಾಯಿ, ತಂಗಿ, ಅಕ್ಕ, ಈ ರೀತಿಯಾಗಿ ವರ್ತಿಸಿದರೆ ಪುರುಷರ ಸ್ಥಾನ ಮಾನದ ಪ್ರಶ್ನೆ ? ಎಂಬ ಮಾತು ಬರುತ್ತದೆ. ಇದು ಪುರುಷನ ದಬ್ಬಾಳಿಕೆಯಲ್ಲಿ ಮುಖ್ಯವಾಗಿದ್ದು ಆತನ ಅಮಾನವೀಯ ವರ್ತನೆಯ ಕ್ರೂರ ಮೃಗತ್ವವಾಗಿದೆ.

ರಮಾಳ ಜೊತೆ ವಿದ್ಯಾರ್ಥಿಯೊಬ್ಬ ಲೈಂಗಿಕ ತೃಷೆಗಾಗಿ ಕೇಳಿ ಬರುವುದು ನಾಡಿನ, ಸಮಾಜದ ದುರಂತ. ಮುಗ್ದ, ಅರಳುವ ಮನಸ್ಸಿರುವ, ಸಮಾಜದ ಕುಟುಂಬದ, ನೆರೆವರೆಯವರ ಬಗ್ಗೆ ಆಗ ತಾನೆ ತನ್ನ ಆಲೋಚನೆಗಳನ್ನು ತಿಳಿಯುವ ವಿದ್ಯಾರ್ಥಿಯೊಬ್ಬ ಇಂತಹ ವೃತ್ತಿಗೆ ಬರುವುದು ಸಮಾಜದ, ನಾಡಿನ ಭವಿಷ್ಯದ ಸ್ಥಿತಿಯನ್ನು ಸೂಚಿಸುತ್ತದೆ. ಅಪ್ರಾಪ್ತ ವಯಸ್ಸಿನಲ್ಲಿ ಇಂತಹ ಕಾಮನೆಗೆ ಬಲಿಯಾಗುವ ವಿದ್ಯಾರ್ಥಿಗಳು, ಭವಿಷ್ಯದಲ್ಲಿ ಬದಲಾಗದ ಸ್ಥಿತಿಗೆ ಮುಳುಗಿರುತ್ತಾರೆ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತ್ತೆ' ಎಂಬಂತೆ ಇಂತಹ ಮಕ್ಕಳ ಮನಸ್ಸಿನಲ್ಲಿ ಆವರಿಸಿರುವ ಕೆಟ್ಟ ಚಾಳಿಗಳನ್ನು ದೂರ ಮಾಡಬೇಕು. ಇಲ್ಲಿ ಕಾದಂಬರಿಕಾರ್ತಿ ಭವಿಷ್ಯದ ಆಶಯದಿಂದಾಗಿ ರಮಾಳ ಮೂಲಕ ವಿದ್ಯಾರ್ಥಿಯನ್ನು

ತಿರಸ್ಕರಿಸಿ ಆತನಿಗೆ ಬುದ್ಧಿಯನ್ನು ಹೇಳುತ್ತಾಳೆ.

'ನನ್ನ ಮನೆಗೆ ಬಂದು ಹೋಗುವವರ ಸಂಖ್ಯೆ ವಿಪರೀತ ಎಲ್ಲರಿಗೂ ಸೊಗಬಸ್ತಾಗಿ ಊಟ, ಉಪಚಾರ ಆಗಬೇಕು. ನನ್ನ ಮನೆಗೆ ಬಂದು ತಿಂದು ಹೊರಗೆ ಹೋಗಿ ನನ್ನನ್ನೇ ದೂರುತ್ತಾರೆ'. – ಎಂಬ ಅ.ನ.ಕೃ ರವರ 'ಶನಿ ಸಂತಾನದ' ಸರಸ್ವತಿಯ ಮಾತುಗಳು ಅವಳ ಮೇಲಿನ ಪುರುಷರ ಸ್ವಾರ್ಥಬಳಕೆ, ದಬ್ಬಾಳಿಕೆಯಾಗಿದೆ. ತಮ್ಮ ತೃಷೆ ಆಕಾಂಕ್ಷೆ ಅನುಕೂಲಗಳು ಮುಗಿದ ಮೇಲೆ ಆಕೆಯ ಮೇಲೆ ತಿರಸ್ಕಾರದ ನಿಂದನೆಯ ಮಾತುಗಳಾಡುವುದು ಪುರುಷ ವರ್ಗದ ದಬ್ಬಾಳಿಕೆಯಾಗಿದೆ,

ನಂಜಯ್ಯ ಮತ್ತು ಸರಸ್ವತಮ್ಮನ ಸಂಬಂದ ನೋಡಿದ ಮಂಜಯ್ಯ 'ಆಕೆಯ ಕಪಾಳಕ್ಕೆ ಹೊಡೆದು ನೀನು ಮನುಷ್ಯಳೇ ನೀನೊಂದು ಹೆಣ್ಣು ನಾಯಿ' ಎಂದು ಹೇಳುತ್ತಾನೆ ಮಂಜಯ್ಯನ ಉದ್ದೇಶ ಆಕೆ ನನಗೆ ಮಾತ್ರ ಮೀಸಲು, ನನ್ನ ಅದೀನದಲ್ಲೆ ನನ್ನ ಕಾಮ ತೃಪ್ತಿಗೆ ಮಾತ್ರ ಎಂದು ಅಧಿಕಾರವನ್ನು ಚಲಾಯಿಸುವ ದರ್ಪವನ್ನು ತೋರಿಸುತ್ತಾರೆ. ಸರಸ್ವತಿಯನ್ನು ತಮ್ಮ ದಾಹಕ್ಕೆ ಬಳಸಿಕೊಂಡ ನಂತರ ಆಕೆಯನ್ನು ತುಂಬಾ ನಿತ್ಕೃಷ್ಟವಾಗಿ ಕಾಣುತ್ತಾರೆ. ಆಕೆಯನ್ನು ಕಷ್ಟಕಾಲದಲ್ಲಿ ಕೈಬಿಟ್ಟು ದೂರ ತಳ್ಳುತ್ತಾರೆ.

'ಮಸಣದ ಹೂ' ಕಾದಂಬರಿಯ ಸರಸ್ವತಿಯ ಬದುಕು ಹೆಂಚಿನ ಕಾರ್ಖಾನೆಯ ಯಜಮಾನನಿಂದ ದೌರ್ಜನ್ಯಕ್ಕೆ ಜೊತೆಗೆ ತನ್ನ ಗಂಡನ ತಿರಸ್ಕಾರ, ಆತನೇ ಒಪ್ಪಿ ಈ ಸಂಬಂಧಗಳ ಸೃಷ್ಟಿಗೆ ಕಾರಣನಾಗುತ್ತಾನೆ.

ತಾಯವ್ವನ ಮನೆಗೆ ಬಂದಂತಹ ಗರಡಿ ವೀರಪ್ಪ ಕುಡಿದು ಬಂದು ಸುಖ ಪಡೆಯುದರ ಜೊತೆಗೆ ಅವರ ಮೇಲೆ ದರ್ಪ ತೋರಿಸುತ್ತಾರೆ. ಬಾಗಿಲು ತೆಗೆಯುವುದು ತಡವಾಗಿದ್ದಕ್ಕೆ – 'ಭಾಗಿಲು ತೆಗೆಯೋದು ಎಷ್ಟೊತ್ತೆ ? ಬಾಗ್ಲಲ್ಲಿ ಕಾಯೋಕೆ ನಿನ್ನ ಜವಾನ್ರೂಂದ್ಕೋಂಡ್ಯಾ ? ಬಾಳ ಹಮ್ಮು ಹೆಚ್ಚಾಗೋಯ್ತು ನಿನ್ಗೆ' ಎಂದು ಹೇಳುವ ಮಾತು ಹೆಣ್ಣಿನ ಬಗ್ಗೆ ಆತನ ಮನೋಭಾವವನ್ನು, ಕ್ರೂರ ವರ್ತನೆಯನ್ನು ಸೂಚಿಸುತ್ತದೆ.

ಅಲ್ಲದೆ ರಂಗಯ್ಯನ ಮಗಳು ಪಾರ್ವತಿಯನ್ನು ತಮ್ಮ ಆಸೆಗಾಗಿ ದಬ್ಬಾಳಿಕೆಯನ್ನು ನಡೆಸುತ್ತಾರೆ. ಹೀಗಾಗಿ ಹೆಣ್ಣಿನ ಈ ವೃತ್ತಿಗೆ, ಸಮಸ್ಯೆಗೆ ಬರಲು ಪುರುಷರ ದಬ್ಬಾಳಿಕೆ ಶೊಷಣೆ ದೌರ್ಜನ್ಯಕ್ಕೂ ಒಂದು ಕಾರಣವಾಗಿದೆ.

ಅಧಿಕಾರ, ಸ್ವಾರ್ಥ, ದರ್ಪ, ಹೆಣ್ಣಿನ ಈ ಬದುಕಿಗೆ ದಾರಿಯಾಗಿದೆ. ಯಾವ ಶಿಕ್ಷಣವನ್ನು ಪಡೆದು ಇತರರಿಗೆ ತಮ್ಮ ಅರಿವುಗಳನ್ನು ಹಂಚಿ ಆ ಮೂಲಕ ಭವಿಷ್ಯದ ಪ್ರಜಾ ರಾಜ್ಯಕ್ಕೆ ಕಾರಣವಾಗಬೇಕಿದ್ದ ಮಾಧ್ಯಮಿಕ ಶಾಲೆಯ ಉಪಾಧ್ಯಾಯಿನಿ ರಾಜಮ್ಮ

ವಿಧವೆಯ ಪರಿಣಾಮವಾಗಿ ಇದಕ್ಕೆ ಹೋಗಲು ಸಹಾಯವಾಗಿದೆ. ಈಕೆಯ ಮೇಲೆ ಡಿ.ಇ.ಓ. ಸಾಹೇಬರ ದೃಷ್ಟಿ ಬಿದ್ದು ಈ ಅನಾಥ ವಿಧವೆಯ ಉದ್ಧಾರದತ್ತ ಹೊರಳಿದಾಗ ಸಾಮ ಬೇಧಗಳಿಂದ ಒಲಿಸಿಕೊಳ್ಳಲು ಯತ್ನಿಸಿ ವಿಫಲರಾದಾಗ ಅಧಿಕಾರ ಬಲತ್ಕಾರವಾಗಿ ದಂಡೋಪಾಯವನ್ನು ಪ್ರಯೋಗಿಸಿದರು. ಅದೆಂದರೆ ಆಕೆ ಪೂರ್ವಭಾವಿ ಅಪ್ಪಣೆ ಇಲ್ಲದ ಕಾರಣದಿಂದ ರಜೆ ಹಾಕಿದಾಗ ಆಕೆಗೆ ಡಿಸ್‌ಮಿಸ್ ಸಸ್ಪೆನ್ಸ್‌ಗಳ ಬೆದರಿಕೆ ಹಾಕುತ್ತಾನೆ ಅಧಿಕಾರ ಎಂಬ ಅಹಂಕಾರದಿಂದ ಆ ಸಾಹೇಬ ಈ ವಿಧವೆಯ ಮೇಲೆ ಬಲತ್ಕರಿಸಿದ್ದರ ಪರಿಣಾಮವಾಗಿ ಅವಳ ಅತೃಪ್ತ ಕಾಮವು ಇತರ ಹುಡುಗರ ಮೇಲೆ ಆಕರ್ಷಣೆಗೆ ಒಳಗಾಗಿತ್ತು. ಇದರಿಂದ ಸಂಪತ್ಕುಮಾರನ ಗಂಟ್ಟು ಬಿದ್ದಿದ್ದರಿಂದ ಆಕೆಯೂ ಈ ಚಟುವಟಿಕೆಯನ್ನು ಗೌಪ್ಯವಾಗಿ ನಡೆಸುತ್ತಿದ್ದಳು. ಜ್ಞಾನದ ಬಲದಿಂದ ಯಾವ ಜನಾಂಗವನ್ನು ಸಮಾಜವನ್ನು ಎಚ್ಚರಿಸುವ ಜವಬ್ದಾರಿ ಹೊಂದಿದ್ದ ಒಬ್ಬ ಶಿಕ್ಷಕಿಯೇ ಅದೇ ಸಮಾಜದ ಸಾಮಾಜಿಕ ಪಿಡುಗಿನ ಸೃಷ್ಟಿಗೆ ಕಾರಣೀ ಭೂತಳಾಗಿರುವುದು ಸಮಾಜದ ಅಧಿಕಾರಶಾಯಿಗಳ ದಬ್ಬಾಳಿಕೆಯಿಂದ.

ಸಮಾಜವನ್ನು ಸಾಮಾಜಿಕ ರೋಗಗಳಿಂದ ರಕ್ಷಿಸಬೇಕಾದ ರಕ್ಷಕ ಪೋಲೀಸ್ ವ್ಯವಸ್ಥೆಯೇ ಪ್ರತ್ಯಕ್ಷವಾಗಿ ಅದಕ್ಕೆ ಬೆಂಬಲ ನೀಡುವುದರ ಜೊತೆಗೆ ಅವರ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಿ ದರ್ಪಕೋರಿಸಿ ತನ್ನ ಬೇಳೆಯನ್ನು ಅಲ್ಲಿ ಬೇಹಿಸಿಕೊಳ್ಳುವುದು ಸಮಾಜದ ದುರಂತದ ಸ್ಥಿತಿಯನ್ನು, ಇಲ್ಲಿನ ಅವ್ಯವಸ್ಥೆಯನ್ನು ತೋರಿಸುತ್ತದೆ. ಪುಟ್ಟ ರಂಗಮ್ಮನ ಮನೆಯ ಪುಟ್ಟ ಲಕ್ಷ್ಮಿಗೆ ಮಂಡಿ ಚಿಕ್ಕಣ್ಣನ ಮಾಮೂಲಿ ಗಿರಾಕಿಗಳಲ್ಲಿ ಒಬ್ಬ. ಈತನಿಂದ ಪುಟ್ಟ ರಂಗಮ್ಮನಿಗೆ ನೂರಾರು ರುಪಾಯಿ ಸಂದಾಯವಾಗುತ್ತಿತ್ತು ಆದರೆ ಆತ ಮತ್ತು ಆತನಿಂದ ಬರುವ ಹಣ ತಪ್ಪಿದ್ದ ಕಾರಣವನ್ನು ಅರಿತು ಚಿಕ್ಕಣ್ಣನಿಗೆ ಜಾನಕಿಯನ್ನು ಪೋಲೀಸಿನ ಬೆಂಬಲದಿಂದ ತನ್ನ ಮನೆಗೆ ಬರಮಾಡಿಕೊಳ್ಳುತ್ತಾಳೆ. ಯಾವ ಸಮಸ್ಯೆಯನ್ನು ನಾಶ ಮಾಡುವ, ಸಾಮಾಜಿಕ ಸ್ವಾಸ್ತ್ಯದ ಜವಬ್ದಾರಿ ಹೊತ್ತಿದ್ದ ಪೋಲೀಸ್ ಕಂದ ಸ್ವಾಮಿಯೇ ತನ್ನ ಕಾಮ ತೃಷೆಗೆ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಪುಟ್ಟ ರಂಗಿ ಮತ್ತು ತಾಯವ್ವನಿಂದ ಹಣವನ್ನು ಪಡೆಯುವುದು ಬ್ರಷ್ಟತೆಯನ್ನು ತೋರಿಸುವುದರ ಜೊತೆಗೆ ಜಾನಕಿಯಿಂದ ದೇಹ ಸುಖವನ್ನು ಪಡೆದು ಮತ್ತೆ ಆವೃತ್ತಿಗೆ ಉತ್ತೇಜನ ನೀಡಿರುವುದು ಬೇಜವಬ್ದಾರಿಯ ಸ್ಥಿತಿಯಾಗಿದೆ.

ಇದರ ಪರಿಣಾಮದಿಂದ ಪುಟ್ಟ ಲಕ್ಷ್ಮಿ ಮತ್ತು ಜಾನಕಿಯಲ್ಲಿ ಆಂತರಿಕ ದ್ವೇಷ ಉಂಟಾಗಿ ಶಾಂತಾಳ ಸಾವಿಗೆ ಪುಟ್ಟ ಲಕ್ಷ್ಮಿ ಪರೋಕ್ಷವಾಗಿ ಕಾರಣಳಾಗುತ್ತಾಳೆ. ವೃತ್ತಿಯಲ್ಲಿ

ಬರುವ ನೊಂದಂತಹ ಹೆಣ್ಣು ತನ್ನ ಮಗನಾದರೂ ಮುಂದೆ ಚನ್ನಾಗಿರಲೆಂದು ಹಣಗಳಿಕೆಗೆ ಮುಂದಾದ ಸರಸ್ವತಿ ಪೊಲೀಸಿನವನಿಂದ ಹಣ ಪಡೆದು ದೈಹಿಕ ಸುಖ ನೀಡಿ ಅವರ ಹಿಂಸೆಗೆ ಬಲಿಯಾಗುತ್ತಾಳೆ. ನಂತರ ಆ ಪೊಲೀಸಿನವನು ತನ್ನ ಅಧಿಕಾರತನದಿಂದ ಆ ಹಣವನ್ನು ಕಿತ್ತುಕೊಂಡು, ಆಕೆಯಿಂದ ಸುಖವನ್ನು ಅನುಭವಿಸುತ್ತಾನೆ. ಇಲ್ಲಿನ ಸಮಸ್ಯೆಗಳ ಕೂಪದಲ್ಲಿರುವ ಮಹಿಳೆಯರನ್ನು ರಕ್ಷಿಸುವ ಬದಲು ಅವರ ಕಾಮ ಭಕ್ಷಕನಾಗಿ ವರ್ತಿಸುವ ಪೊಲೀಸ್ ಅಥವಾ ಅಧಿಕಾರಿ ವರ್ಗದವರ ಶೋಷಣೆಯಾಗಿದೆ.

ಹೆಣ್ಣು ಮಕ್ಕಳ ಕರ್ತವ್ಯ ನಿರ್ವಹಣೆ :

ಹೆಣ್ಣು ಮಕ್ಕಳು ಎಂದರೆ ಆ ಕುಟುಂಬಕ್ಕೆ ಸೆರಗಿನಲ್ಲಿ ಕಟ್ಟಿಕೊಂಡ ಕೆಂಡದಂತೆ ಅಂತಹ ಭಯ ಆತಂಕಗಳು, ಕರ್ತವ್ಯಗಳು, ಅವರ ಬಗ್ಗೆ ಭವಿಷ್ಯದ ಜೀವನದ ಕನಸುಗಳು ಬೃಹತ್ತಾಗಿರುತ್ತವೆ. ಇಂತಹ ಸಂದರ್ಭದಲ್ಲಿ ಅವರ ಜವಬ್ದಾರಿ ನಿರ್ವಹಣೆ ಬೇರೆ ಬೇರೆ ವೃತ್ತಿಗಳನ್ನು ಹಿಡಿಯುವುದರಲ್ಲಿ ಈ ವೃತ್ತಿಗೂ ಬರುವವರು ಇದ್ದಾರೆ.

'ನನ್ನ ಹೆಣ್ಣು ಮಕ್ಕಳಿಗೆ ದಾರಿಯಾದರೆ ಸಾಕು ಗಂಡು ಮಕ್ಕಳಾಗಿದ್ದರೆ ನಾನು ಯೋಚನೆ ಮಾಡುತ್ತಿರಲಿಲ್ಲ' ಎಂಬ ಸರಸ್ವತ್ತಮ್ಮನ ಮಾತುಗಳು ಹೆಣ್ಣುಮಕ್ಕಳ ಜವಬ್ದಾರಿಯನ್ನು ಅದನ್ನು ನಿಭಾಯಿಸುವ ಉದ್ದೇಶವನ್ನು ಹೇಳುತ್ತಾಳೆ. ತನ್ನ ಮಕ್ಕಳ ವಿದ್ಯಾಭ್ಯಾಸ ಭವಿಷ್ಯದ ಚಿಂತನೆಯ ಜೊತೆಗೆ ಹೆಣ್ಣಿಗೆ ವರದಕ್ಷಿಣೆ ನೀಡಿ ಮದುವೆ ಮಾಡಬೇಕು ಆ ಜವಬ್ದಾರಿಯನ್ನು ಗಂಡ, ಗಂಡುಮಕ್ಕಳಿದ್ದರೆ ನಿಭಾಯಿಸುತ್ತಿದ್ದರು ಎಂಬುದು ಸರಸ್ವತಮ್ಮನ ನಿರೀಕ್ಷೆಯಾಗಿತ್ತು

'ಕುಂತಳ' ಳ ತಾಯಿ ತನ್ನ ಮಗಳಿಗೆ ಎಲ್ಲಿಯಾದರೂ ಸ್ಥಿರ ನೆಲೆಯನ್ನು ಕಲ್ಪಿಸುವ ಆಶಯ ಇಟ್ಟುಕೊಂಡಿದ್ದಳು. ಅದೇ ರೀತಿಯಲ್ಲಿ ನಂಜಪ್ಪನಲ್ಲಿ ತನ್ನ ಮಗಳ ಚಿಂತನೆಯನ್ನು ಹೇಳಿಕೊಳ್ಳುತ್ತಾಳೆ. ಆ ಮೂಲಕ ವಿವಾಹ ಮಾಡಿಕೊಳ್ಳದಿದ್ದರೂ ತನ್ನ ಆಕಾಂಕ್ಷೆಗಾಗಿ ಕುಂತಳಳನ್ನು ಬಳಸಿಕೊಂಡು ಆಕೆಗೆ ಬದುಕಿನ ಅಗತ್ಯ ವಸ್ತುಗಳನ್ನು ನೀಡುತ್ತಾನೆ. ಆಗ ಆಕೆಯ ತಾಯಿ ಎಷ್ಟೋ ತೃಪ್ತಿ ಸಮಾದಾನಗಳು ಉಂಟಾಗುತ್ತದೆ.

ಕೇವಲ ಹೆಣ್ಣು ಮಕ್ಕಳ ಜವಬ್ದಾರಿಯಲ್ಲ, ಇದರಲ್ಲಿ ಗಂಡು ಮಕ್ಕಳ ಕರ್ತವ್ಯ ಇರುತ್ತದೆ. ಗಂಡನಿಂದ ದೂರಾದ ಸರಸ್ವತಿ ತನ್ನ ಮಗನಾದರೂ ಮುಂದೆ ಚನ್ನಾಗಿರಲೆಂದು ಹಣ ಗಳಿಕೆಗೆ ಈ ವೃತ್ತಿಯನ್ನು ಸೇರುವುದು ಸಹ ಗಂಡನಿಗಿಲ್ಲದ ಜವಬ್ದಾರಿ ಹೆಣ್ಣಿನ ಕರ್ತವ್ಯವನ್ನು ಸೂಚಿಸುತ್ತದೆ.

ತ್ರಿವೇಣಿಯವರ ರಮಾಳ ಈ ಬದುಕಿಗೆ ತನ್ನ ಮಗಳ ಭವಿಷ್ಯವೇ ಕಣ್ಣೆದುರಿಗೆ ಸುಳಿಯುತ್ತದೆ. ರಮಾ ತನ್ನ ಮಗಳು ಶೀಲಾಳ ವಿದ್ಯಾಭ್ಯಾಸ, ಹಸಿವಿನ ನಿವಾರಣೆಗೆ

ಅನಿವಾರ್ಯವಾಗಿ ಈ ನೋವಿಗೆ ಒಳಗಾಗುತ್ತಾಳೆ ತನ್ನ ಹಾಗೆ ತನ್ನ ಮಗಳು ಈ ರೀತಿಯಾಗಿ ಬದುಕಬಾರದೆಂದು ಆಕೆಯನ್ನು ಕ್ರಿಶ್ಚಿಯನ್ನರ ಹಾಸ್ಟೆಲ್‌ನಲ್ಲಿ ಇರಿಸಿ ತನ್ನ ಗುರುತು ಇಲ್ಲದಂತೆ ಸಾಕುತ್ತಾಳೆ. ಸಮಾಜ ಎಲ್ಲಿ ವೇಶ್ಯೆಯ ಮಗಳೆಂದು ನಿಂದಿಸುವರೋ ಎಂಬ ತಲ್ಲಣ ರಮಾಳಲ್ಲಿದೆ. ಆ ಮೂಲಕ ಹಣಗಳಿಸಿ ಆಕೆಗೆ ತಿಳಿಯದಂತೆ ಕಳುಹಿಸುವ ಮೂಲಕ ತನ್ನ ಮಗಳ ಭವಿಷ್ಯದ ಜೀವನವನ್ನು ನೋಡಿ ತುಂಬಾ ಸಂತೋಷಪಡುತ್ತಾಳೆ.

ಹೀಗಾಗಿ ಮಕ್ಕಳ ಜವಬ್ದಾರಿ ಹೊತ್ತು, ಆ ಮೂಲಕ ತನ್ನ ಬದುಕನ್ನು ಸಮಾಜ ಬಾಹಿರ ಚಟುವಟಿಕೆಗೆ ನೂಕುತ್ತಾಳೆ. ವಿಧವೆಯರು, ಬಡತನ, ಇತರ ಸಂಬಂಧಿಕರ ಸಹಾಯ ಸಹಾನುಭೂತಿಗಳಲ್ಲಿರುವ ಸನ್ನಿವೇಶ, ಸಂದರ್ಭಗಳು ಈ ವೃತ್ತಿಗೆ ಬರಲು ಪ್ರಚೋದನೆಯಾಗಿದೆ.

ಮಧ್ಯವರ್ತಿಗಳ ಹಾವಳಿ :

'ಮಧ್ಯವರ್ತಿಗಳು' ಪ್ರತಿಯೊಂದು ಕ್ಷೇತ್ರದಲ್ಲೂ ಇರುವಂತಹುದನ್ನು ನಾವು ಕಾಣಬಹುದು. ಇವರು ತಮ್ಮ ವಯಕ್ತಿಕ ದ್ವೇಷಕ್ಕಾಗಿ, ಹಣದಾಹಕ್ಕಾಗಿ, ಸ್ವಾರ್ಥಕ್ಕಾಗಿ, ಮೋಹಕ್ಕಾಗಿ ಕಾರ್ಯನಿರ್ವಹಿಸುವಂತದನ್ನು ನಾವು ಕಾಣಬಹುದು. ಎರಡು ಪವಿತ್ರ ಜೀವಗಳನ್ನು ಕೂಡಿಸುವಂತಹ ವಿವಾಹ ಕಾರ್ಯವೆಂಬ ಶುಭ ಕಾರ್ಯಗಳಿಗೆ ಮಧ್ಯವರ್ತಿಗಳಾಗಿ ವರ್ತಿಸುವ ಹಾಗೂ ಅದೇ ವಿವಾಹದ ಹೆಣ್ಣನ್ನು ಸಮಾಜ ಬಾಹಿರ ವೇಶ್ಯ ವೃತ್ತಿಗೆ ತಳ್ಳುವ ಕಾರ್ಯದಲ್ಲಿ ಭಾಗಿಯಾಗಿದ್ದಾರೆ.

ನಮ್ಮ ಸಮಾಜ ಹೆಣ್ಣಿನ ಲೈಂಗಿಕ ಕ್ರಿಯೆಗೆ ಅದರಲ್ಲೂ ಕನ್ಯತ್ವದ ಸುತ್ತಾ ಬಲವಾದ ನಿಷೇಧಗಳನ್ನು ಏರಿರುವಂತಹ ಈ ಕನ್ಯತ್ವವನ್ನು ಒಮ್ಮೆ ಕಳೆದುಕೊಂಡ ಮೇಲೆ ಅನಂತರ ಇತರರಿಗೆ ಒಪ್ಪಿಸಿಕೊಳ್ಳುವುದು ತೀರಾ ಸಹಜವೆಂದೇ ತಿಳಿಯುತ್ತಾರೆ. ಇಂತಹ ಕನ್ಯತ್ವವನ್ನು ಮಧ್ಯವರ್ತಿಯಿಂದ ಕಳೆದುಕೊಂಡಾಗ ಆತನೇ ಇವರನ್ನು ಈ ವೃತ್ತಿಗೆ ಸೇರಿಸುತ್ತಾರೆ.

ಈ ಮಧ್ಯವರ್ತಿಗಳಲ್ಲಿ ಹೆಣ್ಣು ಗಂಡು ಇಬ್ಬರೂ ಇದ್ದಾರೆ. ಗಂಡು ತನ್ನ ಕಾಮದಾಹದಿಂದ ಈ ರೀತಿ ವರ್ತಿಸುತ್ತಾರೆ. ಸಂಗೀತದ ಮೇಸ್ತ್ರಿ ಕುಮಾರ್ ನಂಜಯ್ಯನಿಂದ ಲಾಭ ಪಡೆಯುವ ಉದ್ದೇಶದಿಂದ ಆತ ಹೇಳಿದ ಹಾಗೆ ಸರಸ್ವತಿಯ ಜೊತೆ ಸಂಪರ್ಕ ಏರ್ಪಡಿಸುವುದು, ಅವರಿಬ್ಬರನ್ನು ಒಂದು ಸ್ಥಳದಲ್ಲಿ ಸಂಧಿಸುವ ಹಾಗೆ ಸಹಾಯಕನಾಗುತ್ತಾನೆ. ಜೊತೆಗೆ ತನ್ನ ನೃತ್ಯ ಶಾಲೆಗೆ ಬರುವ ಹೆಣ್ಣುಗಳ ಬಗ್ಗೆ ನಂಜಯ್ಯನ ಹದ್ದಿನ ಕಣ್ಣುಗಳು ಬಿದ್ದು ಅಲ್ಲಿ ಕುಂತಳಳನ್ನು ನಂಜಯ್ಯನ ಜೊತೆ ಸೇರಿಸಲು ಆಕೆಯ ತಾಯಿಯ ಬಳಿ ಮಾತನಾಡಿ ಆಸೆ ಆಮಿಷಗಳನ್ನು ತೋರಿಸುತ್ತಾನೆ. ಆ ಮೂಲಕ ಸರಸ್ವತಿ-ನಂಜಯ್ಯ,

ನಂಜಯ್ಯ-ಕುಂತಳ ನಡುವೆ ತಲೆಹಿಡುಕನಾಗಿ ಕೆಲಸ ನಿರ್ವಹಿಸುತ್ತಾನೆ.

ಇದೇ ಕಾದಂಬರಿಯ ಹೆಂಗಸರು ತಲೆಹಿಡುಕುತನದಲ್ಲಿ ಸಹಭಾಗಿಯಾಗಿರುವುದು ಕಂಡು ಬರುತ್ತದೆ. ಸರಸ್ವತಿ ನಂಜಯ್ಯ ಸೇರಲು ಮನೆಯಲ್ಲಿ ಗೌಪ್ಯವಾಗಿ ಅವಕಾಶ ನೀಡುವ ಮುತ್ತಮ್ಮ, ಭಾಗ್ಯಮ್ಮ ಮಧ್ಯವರ್ತಿಗಳಾಗುತ್ತಾರೆ. ಕಾರಣ ಅವರಲ್ಲಿ ಬಡತನ, ಹೊಟ್ಟೆ ತುಂಬ ತಿಂದ ದಿನವೂ ಇರಲಿಲ್ಲ ತಮ್ಮ ಬುದಕಿನ ನಿರ್ವಹಣೆ ಹೇಗೋ ಸಾಗಬೇಕಿತ್ತು

"ನಮ್ಮ ಬದುಕು ಯಾವ ಶಾಶ್ವತ ಮುತ್ತಮ್ಮ ಇರೋವರೆಗೆ ಚನ್ನಾಗಿ ತಿನ್ನೋದು ಬ್ಯಾಡವ ? ವಾರವಾದರೂ ಮಾಂಸದ ಮುಖ ಕಾಣೋದಿಲ್ಲ ಮೊಟ್ಟೆ ಸಿಕ್ಕಿದ ದಿವಸ ನಮಗೆ ಹಬ್ಬ, ಸಪ್ಪೆ ಕೂಳು ತಿಂದು ತಿಂದು ನನಗೆ ಬೇಸರವಾಗಿದೆಯಮ್ಮ" – ಎಂಬ ಮಾತುಗಳು ಈ ವೃತ್ತಿಯ ಬಗೆಗೆ, ಅದರ ಲಾಭದ ಬಗೆಗೆ ನಿಲುವಿದೆ. ತಮ್ಮ ಮನೆಯಲ್ಲಿ ಯಾರಿಗೆ ಯಾರು ಬೇಕೋ ಅವರನ್ನು ಸೇರಿಸುವ ಕೆಲಸ ಮಾಡುತ್ತಾರೆ.

ಮುತ್ತಮ್ಮನ ಮನೆಗೆ ಎಲ್ಲರೂ ಬಂದು ಹೋಗುವ ಸ್ಥಳವಾಗಿತ್ತು. ಬಡವರು ಹಣಕ್ಕಾಗಿ ಮನೆಯಲ್ಲಿ ತಮ್ಮಿಂದ ಸುಖ ನೀಡುತ್ತಾರೆ. ಅದೇ ರೀತಿ ಇಲ್ಲಿ ಬರುವ ಪುರಷರು ಹಣವನ್ನು ತೆತ್ತು ದೇಹ ಸುಖವನ್ನು ಪಡೆಯುತ್ತಾರೆ. ರಾಮ ರಾಜಪ್ಪ ಬಾಲೂಳ ಸಂಬಂಧಕ್ಕೆ ಮುತ್ತಮ್ಮನ ಮನೆಗೆ ಬರುತ್ತಾನೆ. ಅನಂತರ ನಂಜಪ್ಪ ಸರಸ್ವತಿ ಬಂದು ಹೋಗುತ್ತಾರೆ. ಸರಸ್ವತಿಯ ಮೇಲೆ ಮೋಹಗೊಂಡ ರಾಮ ರಾಜಪ್ಪನಿಗಾಗಿ ಆಕೆಯ ಜೊತೆ ಮಾತನಾಡಿ ಒಪ್ಪಿಸುತ್ತಾಳೆ. ಆ ಮೂಲಕ 'ವೈಟ್‌ಹಾರ್ಸ್' ಎಂಬ ಪಾನೀಯ ಮತ್ತು ಹಣದ ಅನುಕೂಲವನ್ನು ಪಡೆಯುತ್ತಾರೆ.

ಅನಂತರ ರಾಘವಚಾರ್ಯರ ಮೂಲಕ ಸರಸ್ವತಿ ತನ್ನ ಭವಿಷ್ಯದ ಬದುಕಿಗೆ ಅಧಿಕಾರಿ ಶ್ರೀ ರಂಗರಾಯರ ಸಂಬಂಧ ಬೆಳೆಸುತ್ತಾಳೆ. ರಾಘವಚಾರ್ಯ ಸರಸ್ವತಿಯ ಬದುಕಿನ ಬಗ್ಗೆ ಕನಿಕರ, ಅನುಕಂಪ ತೋರಿ ಸಹಾಯವೆಂಬ ಮನೋಭಾವದಿಂದ ಈ ರೀತಿ ಸಂಪರ್ಕ ಕಲ್ಪಸುತ್ತಾನೆ.

ಶಾಂತಿ ಎಂಬಾಕೆ ಈ ವೃತ್ತಿಗೆ ಬರಲು ಸಂಪತ್ಕುಮಾರನಿಂದ ಕನ್ಯತ್ವ ಕಳೆದುಕೊಂಡು ಸುಳ್ಳು ನೆಪಗಳನ್ನು ಹೇಳಿ ವೇಶ್ಯ ದಂಧೆಗೆ ಬಿಟ್ಟು ಹೊರಟು ಹೋಗುತ್ತಾನೆ. ಸಂಪತ್ಕಮಾರ ಶಾಂತಿಯ ಮೇಲೆ ನಡೆಸುವ ಅತ್ಯಾಚಾರಕ್ಕೆ ಸನ್ನಿವೇಷವನ್ನು ನೀಡಿದಂತವರು ರಾಜಮ್ಮ ಈಕೆ ಮಧ್ಯವರ್ತಿಯಾಗಿ ಸಂಪತ್ಕುಮಾರನ ಅದೀನಕ್ಕೆ ಒಳಗಾಗಿ ಆತ ಹೇಳಿದಂತೆ ನಡೆದುಕೊಳ್ಳುತ್ತಾಳೆ, ಜೊತೆಗೆ ಈ ವ್ಯಕ್ತಿಯು ಶಾಂತಿಯನ್ನು ವೇಶ್ಯ ಗೃಹಕ್ಕೆ ಬಿಟ್ಟು ಹಣವನ್ನು ಪಡೆಯುತ್ತಾನೆ.

'ಪಾರ್ವತಿ' ಎಂಬ ಒಬ್ಬ ಅಸಾಯಕ ಹೆಣ್ಣಿನ ಮೇಲೆ ಊರಿನ ಧಣಿಯಾದ ನರಸಿಂಹ ರೆಡ್ಡಿ ಕಣ್ಣಿಟ್ಟಿದಾಗ ಅಲ್ಲಿಂದ ತಪ್ಪಿಸಿಕೊಂಡು ಬರುವಾಗ ಸೋಮಣ್ಣನ ಕೈಗೆ ಸಿಕ್ಕಿ ಒಬ್ಬರ ಮೇಲೆ ಒಬ್ಬರು ಕ್ರೂರವಾಗಿ ಅತ್ಯಚಾರ ಮಾಡುತ್ತಾರೆ. ಕೊನೆಗೆ ಆಕೆಯನ್ನು ವೇಶ್ಯಾ ಮನೆಗೆ ತಂದು ಬಿಟ್ಟು ಹಣವನ್ನು ಪಡೆಯುವುದನ್ನು ಕಾಣಬಹುದು.

ಇದೇ ರೀತಿ ನಿಂಗಣ್ಣನೂ ಕೂಡ ಈ ದಂಧೆಗೆ ಮಧ್ಯವರ್ತಿಯಾಗಿ ವರ್ತಿಸುತ್ತಾನೆ. ಹೆಣ್ಣು ಮಕ್ಕಳು ಎಲ್ಲೆಲ್ಲಿ ಸಿಗುತ್ತವೆ, ಹೇಗೆ ಇಲ್ಲಿಗೆ ಕರೆತರಬೇಕೆಂದು ಆಲೋಚಿಸುವುದನ್ನು ಕಾಣಬಹುದು. ಹೆಣ್ಣನ್ನು ಈ ವೃತ್ತಿಗೆ ತಳ್ಳಿದ ಮೇಲೆ ಅವರಿಗಾಗಿ ಹಣ ನೀಡುವಂತಹ ಗಿರಾಕಿ/ಕಾಮಪೀಡಿತ ಪುರುಷರನ್ನು ಕರೆದುತರುವ ಮಧ್ಯವರ್ತಿಗಳಾಗಿಯೂ ಇದ್ದಾರೆ. ಇದಕ್ಕೆ ಸೋಮಣ್ಣ, ನಿಂಗಣ್ಣ, ಸಿಂಗಾರು ಪ್ರಮುಖ ಪಾತ್ರವಹಿಸುತ್ತಾರೆ.

ಸಿಂಗಾರು ತನ್ನ ಅಂಗವಿಕಲತೆಯ ಪರಿಣಾಮವಾಗಿ ಈ ವೃತ್ತಿಗೆ ಬಂದ ಮೇಲೆ ಇಲ್ಲಿನ ವ್ಯವಸ್ಥೆಯನ್ನು, ಕೋಪದಿಂದ; ತಿರಸ್ಕಾರದಿಂದ ನೋಡಿದರೂ ಅದನ್ನು ಬಿಡುವ ಅವಕಾಶ ಆಗದು ಆತನಿಗೆ ಅಲ್ಲಿನ ಹೆಣ್ಣು ಮಕ್ಕಳ ಮೇಲೆ ಕರುಣೆ, ಅನುಕಂಪಗಳಿವೆ. ಆದರೆ ಅವರನ್ನು ರಕ್ಷಿಸುವ ಆಸೆ ಇದ್ದರೂ ಸಹ ಆತನಿಂದ ಅದು ಸಾಧ್ಯವಾಗದಿರುವುದನ್ನು ಕಾಣಬಹುದು. ಆದರೆ ನಿಂಗಣ್ಣ ಸೋಮಣ್ಣರಲ್ಲಿ ಹೆಣ್ಣಿನ ಬಗ್ಗೆ ಯಾವುದೇ ಮಾನವೀಯ ಭಾವನೆಯನ್ನು ತಳೆಯುವುದಿಲ್ಲ. ಅವರ ಮೂಲ ಉದ್ದೇಶ ಹಣ, ಕಾಮತೃಪ್ತಿಯೇ ಮುಖ್ಯವಾಗಿದೆ.

ಸಿಂಗಾರುವಿನಲ್ಲಿ "ಈ ರೀತಿಯ ಬದುಕಿನ ಬಗ್ಗೆ ತಿರಸ್ಕಾರಗಳಿದ್ದರೂ ಸಹ ಆತನ ಹಸಿವು, ಬದುಕಿನಾಸೆಗೆ ಈ ಕೆಲಸ ಮಾಡಿದ್ದರೆ ತಪ್ಪೇನು ಇಲ್ಲ !" ಎಂಬ ಭಾವನೆ ಬೆಳೆದು ಈ ವೃತ್ತಿಗೆ ಮಧ್ಯವರ್ತಿಯಾಗುತ್ತಾನೆ.

ಸಿನಿಮಾ ಎಂಬ ಮಾಧ್ಯಮವು ಕೂಡ ಈ ಬದುಕಿಗೆ ಹೆಣ್ಣನ್ನು ತಂದು ಬಿಸಾಕುವುದನ್ನು ಕಾಣಬಹುದು. ಸಿನಿಮಾದಲ್ಲಿ ಪಾರ್ಟುಮಾಡುವ ಆಸೆಯಿಂದ ಬರುವ ಹೆಣ್ಣು ಮಕ್ಕಳನ್ನು ಬೇರೆ ಬೇರೆ ಸ್ಥಳಗಳಿಗೆ ವ್ಯಾಪಾರ ಮಾಡುತ್ತಾರೆ.

ಹೆಣ್ಣಿನ ನೋವಿನ ಬದುಕಿನ ಯಜಮಾನಿಯ ಸ್ಥಾನದಲ್ಲಿದ್ದುಕೊಂಡು ಮಾಡುವಂತವರು ಪುಟ್ಟ ರಂಗಮ್ಮ, ಚಿನ್ನಮ ಮತ್ತು ತಾಯವ್ವ ಇವರು ಪರಂಪರಾಗತವಾಗಿ ಇದೊಂದು ಪದವಿ ಎನ್ನುವಷ್ಟರ ಮಟ್ಟಿಗೆ ಮುಂದುವರೆಸಿಕೊಂಡು ಬರುತ್ತಾಳೆ. ಹಣ, ಸಂಪಾದನೆ, ಆಸ್ತಿ ಪಾಸ್ತಿಗಳನ್ನು ಸಂಗ್ರಹಿಸುವ ಉದ್ದೇಶ ಚಿನ್ನಮ್ಮನಲ್ಲಿದ್ದು ತನ್ನ ನಂತರ ಮಗಳು ಲಕ್ಷ್ಮೀ ಈ ಬದುಕನ್ನು ನಡೆಸಿಕೊಂಡು ಬರಬೇಕೆಂಬ ಆಶಯವನ್ನು

ತೋರಿಸುವಂತದ್ದು ಈ ಜೀವನವನ್ನು ಮಧ್ಯವರ್ತಿಯಾಗಿ, ಯಜಮಾನಿಯಾಗಿ ನಡೆಸುವ ನಮ್ಮ ಸಮಾಜದ ಹೆಣ್ಣಿನ ಬದುಕಿನ ಶೋಚನೀಯ ಸ್ಥಿತಿಯಾಗಿದೆ.

ಸುಂದರರಾಜು ಎಂಬಾತ ಸದಾನಂದ ಎಂಬ ಮಧ್ಯವರ್ತಿಯ ಸಹಾಯದಿಂದ ಇತರ ಹೆಣ್ಣಿನೊಡನೆ ಲೈಂಗಿಕ ಬಯಕೆ ಪಡೆದು ಅದಕ್ಕೆ ಕಾಣಿಕೆಯಾಗಿ ಬಂದ ರೋಗವನ್ನು ತನ್ನ ಹೆಂಡತಿಗೆ ನೀಡಿ ಅವಳ ಸಾವಿಗೂ ಕಾರಣನಾಗುತ್ತಾನೆ.

'ಬೀದಿಯಲ್ಲಿ ಬಿದ್ದವಳು' ಎಂಬ ಕಾದಂಬರಿಯ ಯಮುನಾ ಹೆಣ್ಣಿನ ಪಾತ್ರವೂ ಇದೇ ರೀತಿಯ ಮಧ್ಯವರ್ತಿಯ ಹಾವಳಿಗೆ ಒಳಗಾಗುತ್ತಾಳೆ. ಯಮುನಾ ಮಾನವಾಗಿ ಬದುಕುವುದಕ್ಕೆ ತನ್ನ ಗೌಡರ ಕಾಮ ಪೀಪಾಸೆಯಿಂದ ದೂರವಾಗಲೂ ಸಾಕಷ್ಟು ಪ್ರಯತ್ನಿಸುತ್ತಾಳೆ. ತನ್ನ ತಂದೆ–ತಾಯಿ ಕಳೆದುಕೊಂಡು ಆ ಸರಿರಾತ್ರಿಯಲ್ಲಿ ಆಸರೆಗಾಗಿ ಬಸಲಿಂಗವ್ವನ ಮನೆಗೆ ಬರತ್ತಾಳೆ. ಆದರೆ ಅಲ್ಲಿಗೆ ಗೌಡರನ್ನು ಕರೆಯಿಸಿ ಆಕೆಯ ಮೇಲೆ ಅತ್ಯಾಚಾರ ಮಾಡಲು ಅವಕಾಶವನ್ನು ಒದಗಿಸುತ್ತಾಳೆ. ಗೌಡರನ್ನು ಎದಿರು ಹಾಕಿಕೊ ಬಾರದಿತ್ತು ನಿಮ್ಮವ್ವ ಅವರ ವಿರುದ್ಧ ಹೋಗಿ ಬಾಳೇವು ಮಾಡಾಕಾಗುವುದೇನೇ ? ನನಗೆ ಮೊದಲೇ ಗೊತ್ತಿತ್ತು ಹೀಗೆಲ್ಲಾ ಆಗುತ್ತೈತಿ ಅಂತ ಇನ್ನೇನು ಮಾಡುವಾಕೆನೀ ? ಎಂಬ ಮಾತುಗಳು ಗೌಡನಿಂದ ಸಹಾಯವನ್ನು ಪಡೆಯುವ ಉದ್ದೇಶದಿಂದ ಆತನಿಗೆ ಇಚ್ಛೆಯಾಗುವ ರೀತಿ ಮಧ್ಯವರ್ತಿಯಾಗಿ ನಡೆಸುತ್ತಾಳೆ. ಅಲ್ಲಿಗೆ ಯಾವುದೇ ಗಿರಾಕಿಯನ್ನು ಸಹ ಈ ರೀತಿಯಾಗಿ ಸೇರಿಸಿ ಆ ಮೂಲಕ ತನ್ನ ಸ್ವಾರ್ಥವನ್ನು ಬಳಸಿಕೊಳ್ಳುತ್ತಾಳೆ.

ಇದರಲ್ಲಿ ಬರುವ ಹಣಮ ಮತ್ತು ಬಾಬಾ ಎಂಬ ವ್ಯಕ್ತಿಗಳು ಸುಳೇರ ಕೇರಿಗೆ ಗಿರಾಕಿಗಳನ್ನು, ಹಣವಂತರನ್ನು ಕರೆದು ತರುವ ಕಾರ್ಯವನ್ನು ನಿರ್ವಹಿಸುತ್ತಾರೆ. ಯಮುನ ಈ ಒಂದು ದಂಧಗೆ ಬರುವುದಕ್ಕೆ ಕಾರಣ ಬಾಬಾ. ಆತ ಆತ್ಮಹತ್ಯಗೆ ಯತ್ನಿಸುವ ಈಕೆಯನ್ನು ಪ್ರೀತಿಯಿಂದ ಮಾತನಾಡಿಸಿ ಹೊಸ ಗಿರಾಕಿಯ ಹಾಗೆ ತನ್ನ ಕೇರಿಯ ಒಳಗೆ ತಂದು ಆ ಮೂಲಕ ಅವಳು ಗೌಡರ ಹತ್ಯೆಗೆ ಬಲಿಯಾಗಿ ಅರೆಹುಚ್ಚಿಯಾಗುತ್ತಾಳೆ.

ವೇಶ್ಯಾ ಗೃಹಗಳ ಏಜೆಂಟರು ಇತ್ತೀಚೆಗೆ ಹೆಚ್ಚಾಗಿದ್ದು ಮಧ್ಯಸ್ಥಿಕೆಯಲ್ಲಿ ವ್ಯವಹಾರ ಕುದುರಿಸಿಕೊಂಡು ಹೆಣ್ಣಿನ ದಲ್ಲಾಳಿ ಹಣ ಪಡೆದು ಬಾಲಕಿಯನ್ನು ಅಪಹರಣ ಮಾಡುವ ಕ್ರಿಯೆ ಉಲ್ಬಣವಾಗುತ್ತಿದೆ.

ಹೆಣ್ಣಿನಲ್ಲಿರುವ ಸೌದರ್ಯ ವಿಲಾಸಿ ವಸ್ತುಗಳ ಬಯಕೆ :

ಹೆಣ್ಣು ಯೌವನಕ್ಕೆ ಬಂದಾಗ ಸಹಜವಾಗಿ ತನ್ನ ಸೌದರ್ಯದ ಬಗ್ಗೆ ಕಾಳಜಿ, ಆಸಕ್ತಿ ವಹಿಸುತ್ತಾಳೆ. ಅವುಗಳ ಆಕರ್ಷಣೆಗೆ ಒಳಗಾಗಿ ತನ್ನ ಬಗೆಗೆ ಇತರರ ದೃಷ್ಟಿಯನ್ನು ನೋಡಿ ಅರ್ಥಮಾಡಿ ಕೊಳ್ಳುವ ಸಾಮರ್ಥ್ಯ ಇರುವುದಿಲ್ಲ. ಸರಸ್ವತಿಯಲ್ಲೂ ತನ್ನ ಮಕ್ಕಳ ಸೌದರ್ಯ ವಿಲಾಸಿ ವಸ್ತುಗಳನ್ನು ನಂಜಯ್ಯನಿಂದ ಮಂಜಯ್ಯನಿಂದ ಪಡೆಯುವುದನ್ನು ಕಾಣಬಹುದು.

'ಶಾಂತಿ' ಎಂಬಾಕೆ ಬಡತನದಲ್ಲಿ ಹುಟ್ಟಿದವಳು. ಆಕೆಯದು ತುಂಬಾ ಆಸೆಯ ಸ್ವಭಾವ, ಸಹಜವಾಗಿಯೇ ತಿನಿಸುಗಳ ಬಗ್ಗೆ, ಶೃಂಗಾರ ಸಾಧನಗಳ ಬಗ್ಗೆ ಹೆಚ್ಚು ಪ್ರಿಯವಾಗಿತ್ತು. ಶಾಂತಿ ಷೋಕಿಯ ಹುಡುಗಿ ಈ ವೃತ್ತಿಯಿಂದ ಬಂದ ಹಣವನ್ನು ಸಿನಿಮಾ ನೋಡುವುದು, ಬಿರಿಯಾನಿ, ಬ್ರಾಂದಿ ತರಿಸಿ ತಿಂದು ಕುಡಿಯುವುದು, ಸೌಂದರ್ಯ ವಸ್ತುಗಳಾದ ಹೂವು, ತಲೆಗೆ ಹಚ್ಚಲು ವಾಸನೆ ಎಣ್ಣೆ, ಮುಖಕ್ಕೆ ಪೌಡರ್ ಇವುಗಳು ಬೇಕು. ಈಕೆಯ ದುಂದುಗಾರಿಕೆಯನ್ನು ಪ್ರಶ್ನೆಮಾಡಿದರೆ – ಆಕೆ "ಕೈಬಾಯಿ ಕಟ್ಟಿ ಎರಡು ಹೊತ್ತಿನ ಸಪ್ಪೆ ಕೂಳು ತಿಂದಿರಲಿಕ್ಕೆ ನಾನಿಲ್ಲಿಗೆ ಬಂದೆನೇ ? ಅಷ್ಟೇ ಅಂದರೆ ಮನೆಯಲ್ಲೇ ಸಿಕ್ತಾ ಇತ್ತು. ಇಲ್ಲಿ ಬಂದದ್ಯಾಕೆ ? ಗೊತ್ತೇ ಮಜಾ ಉಡಾಯಿಸಲಿಕ್ಕೆ" ಎಂಬ ಆಕೆಯ ಮಾತಿಗಳು ಅವಳಲ್ಲಿನ ಅಂತರಂಗದ ಬಯಕೆಗಳನ್ನು, ಬಣ್ಣದ ಕನಸನ್ನ ವ್ಯಕ್ತಪಡಿಸುತ್ತಾಳೆ.

ಈಕೆಯ ಅತೀವ ಆಸೆಯನ್ನು ತನ್ನ ಕಾಮುಕ ತೃಷೆಗೆ ಬಳಸಿಕೊಂಡ ವ್ಯಕ್ತಿ ಸಂಪತ್ಕುಮಾರ. ಈತ ಆಕೆಗೆ ಸೌಂದರ್ಯ ಸಾಧನಗಳ ಆಕರ್ಷಣೆ ನೀಡಿ ಆ ಮೂಲಕ ತನ್ನ ಸ್ವಾರ್ಥಕ್ಕೆ ಬಳಸಿಕೊಂಡು ಈ ವೃತ್ತಿಗೆ ತಂದು ಬಿಟ್ಟಿರುತ್ತಾನೆ. ಹೀಗಾಗಿ ಹೆಣ್ಣಿನಲ್ಲಿರುವ ಸೌಂದರ್ಯ ವಿಲಾಸಿ ವಸ್ತುಗಳ ವ್ಯಾಮೋಹವನ್ನು ದೌರ್ಬಲ್ಯವಾಗಿ ಬಳಸಿಕೊಳ್ಳುತ್ತಾರೆ.

ಅತೀ ಕಾಮುಕತೆ :

ಹೆಣ್ಣು ಮತ್ತು ಗಂಡಿನಲ್ಲಿ ಸಹಜವಾಗಿ ನಿಸರ್ಗದತ್ತವಾಗಿರುವುದ ಕಾಮುಖ ಭಾವನೆ. ಅದರ ಆಸೆಯ ಹೀಡೇರಿಕೆಗಾಗಿ ನಮ್ಮ ಸಮಾಜ 'ಮದುವೆ' ಎಂಬ ನಿಯಮದಲ್ಲಿ ಹಿಡಿತದಲ್ಲಿಟ್ಟು ಹೆಣ್ಣು ಮತ್ತು ಗಂಡಿನ ಕಾಮನೆಗಳು ಅನೈತಿಕತೆಯನ್ನು ಉಂಟುಮಾಡದೆ ಸಂಪ್ರದಾಯದ ಚೌಕಟ್ಟಿಗೆ ಬಂಧಿಸಿ ಆ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುತ್ತಿದೆ.

ಅತಿ ಕಾಮುಕತೆ ಇಂದು ಕುಟುಂಬ ಸಂಬಂಧಗಳನ್ನು ಮೀರಿ ಕ್ರೌರ್ಯದ ದಾರಿ ಹಿಡಿದಿರುವುದನ್ನು ಕಾಣಬಹುದು. ಇಂತಹ ಭಾವನೆಗಳಿಗೆ ಬಲಿಯಾಗುವ ಹೆಣ್ಣು

ಅನಿವಾರ್ಯವಾಗಿಯೇ ಈ ವೇಶ್ಯಾ ಬದುಕೆಂಬ ಬೆಂಕಿಗೆ ಬೀಳುತ್ತಿದ್ದಾಳೆ.

'ಶನಿಸಂತಾನ' ಕಾದಂಬರಿಯ ಸರಸ್ವತಮ್ಮ ತನ್ನ ಮನೆಗೆ ಬಂದ ಕುಮಾರ್ ನೃತ್ಯ ಪಾಠ ಹೇಳಿ ಕೊಡುವಾಗ ಮಳೆ ಅಧಿಕವಾಗಿ ಅವನು ಅಲ್ಲೇ ಉಳಿಯುತ್ತಾನೆ. ಸರಸ್ವತಮ್ಮ ಕೆಣಕಿದ ಪಣಿಯಂತೆ ಕುಮಾರನನ್ನು ಉದ್ರೇಕಗೊಳಿಸಲು ತನ್ನ ಪೂರ್ಣ ಸಾಮರ್ಥ್ಯ ಪ್ರಯೋಗಿಸಿದಾಗ ತನ್ನ ಕಾಮ ಸಂದಾನಕ್ಕೆ ನೀಡದಿದ್ದ ಕುಮಾರನಿಗೆ "ಹೆಣ್ಣೇ ಮೈ ತೆರೆದುಕೊಂಡು ಬಂದಿರುವಾಗಲೂ ನೀವು ನೀವು ಹೀಗಿರುವುದು." ಪ್ರಶ್ನಿಸಿದಾಗ ಆತ ಗಂಡಾಗುವುದು ಹಣೆಯಲಿಲ್ಲ ಎನ್ನುತ್ತಾನೆ. ಇಲ್ಲಿ ಸರಸ್ವತಿಯ ಅತೀ ಕಾಮುಕವೂ ಕುಮಾರನ ಮೇಲೆ ಪ್ರಯೋಗ ಮಾಡಿ ದುಃಖ ವ್ಯಕ್ತಪಡಿಸುತ್ತಾಳೆ. ಇದು ಮುಂದಿನ ಪುರುಷನ ಸಂಪರ್ಕಕ್ಕೆ ಪ್ರಚೋದನೆ ಉಂಟುಮಾಡಿದೆ.

ನಂಜಯ್ಯನಿಗೆ ಸರಸ್ವತಮ್ಮ ಹೇಳುವ 'ಗಂಡಸು ಹೆಂಗಸಿನಿಂದ ಸೌಖ್ಯ ಬಯಸುವಂತೆ' ಹೆಂಗಸು ಗಂಡಸಿನಿಂದ ಬಯಸುತ್ತಾಳಲ್ಲವೇ' ? ಎಂಬ ಮಾತುಗಳು ಅತೀ ಕಾಮದ ಪುರುಷ ಮತ್ತು ಮಹಿಳೆಯನ್ನು ಸೂಚಿಸುತ್ತದೆ. ಇದರಲ್ಲಿ ಗಂಡಿಗೆ ಸ್ವಾತಂತ್ರ್ಯವಿದೆ. ಯಾವುದೆ ಅವಮಾನವಿಲ್ಲ ಆದರೆ ಹೆಣ್ಣಿಗೆ ಇದನ್ನು ವ್ಯಕ್ತಪಡಿಸಲು ಸ್ವಾತಂತ್ರ್ಯವಿಲ್ಲ ಆದರೆ ಇದನ್ನು ಈಡೇರಿಸಿಕೊಳ್ಳಲು ಅಕ್ರಮವಾಗಿ ಯತ್ನಿಸಿದಾಗ ಅವಮಾನ ನಿಂಧನೆಗಳುಂಟಾಗಿ ಗೌರವವನ್ನು ಕಳೆದುಕೊಳ್ಳುತ್ತಾಳೆ. ಇದನ್ನು ಬಾಯಿಬಿಟ್ಟು ಹೇಳಿಕೊಂಡರೆ ಸಮಾಜ ಆಕೆಯನ್ನು ನಾಚಿಕೆಗೆಟ್ಟವಳು, ಕುಲಹೀನ ಹೆಣ್ಣು ಎನ್ನುತ್ತಾರೆಯೇ ಹೊರತು ಗಂಡನ್ನು ದೂಷಿಸುವುದಿಲ್ಲ

"ನನ್ನ ಗಂಡ ನನಗೆ ಸಾಸಿವೆಯಷ್ಟು ಸೌಖ್ಯ ಕೊಡಲಿಲ್ಲ, ಮಕ್ಕಳಾದವು ನಿಜ, ಹೇಗಾದವೋ ನನಗೆ ಸಂದೇಹ ಅಲ್ಲಿಂದ ವಿಧಿ ನನಗೆ ಒಬ್ಬೊಬ್ಬರ ಸಹವಾಸ ಮಾಡಿಸಿತು. ಕೊನೆಗೆ ಮಂಜಯ್ಯನವರನ್ನು ಗಂಟು ಹಾಕಿತು. ಯಾರೂ ನನ್ನನ್ನು ತೃಪ್ತಿ ಪಡಿಸಲಿಲ್ಲ ನಿಮ್ಮ ಸ್ನೇಹವಾಗುವವರೆಗೆ ನನಗೆ ಗಂಡು ಹೆಣ್ಣಿನ ಸಂಬಂಧ ಹೀಗೆ ಎನ್ನುವ ವಿಷಯವೇ ಗೊತ್ತಿರಲಿಲ್ಲ." ಎಂಬ ಮಾತುಗಳು ಸರಸ್ವತಮ್ಮನ ಈ ವೃತ್ತಿ ಜೀವನದ ಮನೋಭಿಲಾಷೆಯನ್ನು ಅತೃಪ್ತ ಕಾಮದ ವಿಷಯವನ್ನು ಬಿಂಬಿಸುತ್ತದೆ.

ಸರಸ್ವತಮ್ಮನಲ್ಲೂ ಇರುವ ಹಾಗೆ ನಂಜಪ್ಪನಲ್ಲೂ ಅತೀ ಕಾಮದ ಭಾವನೆ ಇದೆ. ಆತ ಏಕಕಾಲದಲಲ್ಲಿ ಸರಸ್ವತಿ ಮತ್ತು ಕುಂತಳಳ ನಡುವೆ ಸಂಪರ್ಕ ಪಡೆದು ತನ್ನ ಅತೀ ಕಾಮದ ದೃಷ್ಟಿಯನ್ನು ವ್ಯಕ್ತಪಡಿಸುತ್ತಾನೆ.

ಅತೀ ಕಾಮದ ದೃಷ್ಟಿಯ ಪುರುಷ ಹೆಣ್ಣಿನ ಮೇಲೆ ಅತ್ಯಾಚಾರಕ್ಕೆ ದಾರಿ ಮಾಡಿಕೊಡುತ್ತದೆ. ಪೀತಾಂಬರಯ್ಯ ಮತ್ತು ಸರಸ್ವತಮ್ಮ ಕೂಡುವುದು ಕಾಮುಕ ಪೀಪಾಸೆಯಿಂದ.

ರಮಾ ಸರ್ಕಾರಿ ಆಫೀಸಿನೊಬ್ಬರ ಮನೆಯಲ್ಲಿ ಕೆಲಸಕ್ಕೆ ಸೇರಿದಾಗ ಆತನ ಮಗ ಆಕೆಯ ಮೇಲೆ ಅತ್ಯಾಚಾರದ ಪ್ರಯತ್ನ ಎಸಗುವುದು, ಆತನ ಕಾಮುಕ ತನದಿಂದ. ವೈಧ್ಯರ ಬಲಗೈ ಬಂಟನಾದ ಮುರುಗಪ್ಪನು, ಶೆಟ್ಟಿಯು ರಾಧಾಳಲ್ಲಿನ ದೈಹಿಕ ಸಂಪರ್ಕವು ಹೊಂದುವುದು ಅವರ ಲೈಂಗಿಕ ಬಯಕೆಯಾಗಿದೆ. ಇಲ್ಲಿ ಬರುವಂತಹ ಅಂಗಡಿಯಾತ, ಕಾರ್ಖಾನೆಯ ಮ್ಯಾನೇಜರ್ ಮುಂತಾದವರ ಶೋಷಣೆ ಅವರಲ್ಲಿನ ಅತೀಕಾಮುಕ ಪಶು ವರ್ತನೆಯಿಂದಾಗಿದೆ.

'ಮಸಣದಹೂವು' ಕಾದಂಬರಿಯಲ್ಲಿ ಸೋಮಣ್ಣನೆಂಬ ಮಧ್ಯವರ್ತಿ ಪಾರ್ವತಿಯ ಮೇಲೆ, ಕಾರ್ಖಾನೆಯ ಮಾಲಿಕ ಸರಸ್ವತಿಯ ಮೇಲೆ, ಮೇಲಾಧಿಕಾರಿಗಳು ರಾಜಮ್ಮನ ಮೇಲೆ, ಅತ್ಯಾಚಾರಕ್ಕೆ ಬಳಸಿಕೊಳ್ಳುವುದು ಅವರಲ್ಲಿ ನಿಗೂಡವಾಗಿದ್ದ ಲೈಂಗಿಕ ಬಳಕೆಯ ಕಾರಣವಾಗಿದೆ. ಪೋಲೀಸ್ ವ್ಯಕ್ತಿಗಳು ಈ ಕಾರ್ಯಕ್ಕೆ ಬೆಂಬಲ ನೀಡುವುದು ತಮ್ಮ ಬಯಕೆಯ ತೃಪ್ತಿಗಾಗಿಯೇ.

ಯಮುನಾ ಗೌಡರಿಂದ ಈ ವೃತ್ತಿಗೆ ಬಲಿಯಾಗುವುದು ಅವರ ಬಯಕೆಯ ಗುರಿಯಿಂದಾಗಿ. ಹೀಗಾಗಿ ಅತೀ ಕಾಮದ ಭಾವನೆ ಪ್ರತಿಯೊಬ್ಬರಲ್ಲೂ ಇದ್ದರೂ ಅದರ ನಿಯಂತ್ರಣ, ಸನ್ನಿವೇಶ ಹತೋಟಿಯಲ್ಲಿರುತ್ತದೆ. ಮನಸ್ಸು ಹರಿದಂತೆ ಹೋದರೆ ಅಂತಹವರು ಎಂತಹ ಚಟುವಟಿಕೆಯಲ್ಲಾದರೂ ಸಿಲುಕಿ ನಿಂಧನೆಗೆ ಬಲಿಯಾಗುತ್ತಾರೆ.

ಈ ಭಾವನೆಯಿರುವವರು ಸೂಳೇಗಾರಿಕೆಯ ದಂಧೆಗೆ ಬೀಳುತ್ತಾರೆನ್ನಲು ಸಾಧ್ಯವಿಲ್ಲ. ಅಂತಹವರು ವಾಸ್ತವದಲ್ಲಿ ತನ್ನ ಗಂಡನಿಗೆ ತಿಳಿಯದಂತೆ ಇತರರೊಡನೆ ಅಕ್ರಮ ಸಂಬಂಧ ಹೊಂದಿರುತ್ತಾರೆ. ಅವರನ್ನು 'ಸೂಳೆ' ಎಂಬುವುದರ ಬದಲು ನಡತೆಗೆಟ್ಟವಳು, ಕೆಟ್ಟ ಹೆಂಗಸು ಎಂಬ ಪದಗಳು ಬರುತ್ತವೆ. ಈ ರೀತಿಯ ನಿಂಧನೆಗೆ ಬಲಿಯಾಗಲೂ ಕಾರಣ ಅವರು ತಮ್ಮ ಗಂಡನಲ್ಲಿ ಪಡೆಯಲಾಗದ ಲೈಂಗಿಕ ಬಯಕೆಯನ್ನು ಇತರರ ಸಂಪರ್ಕದಿಂದ ಪಡೆಯಲು ಬಯಸುತ್ತಾಳೆ.

ಮಸಣದ ಹೂವು ಕಾದಂಬರಿಯಲ್ಲಿ ಬರುವ ಸುಂದರಮ್ಮ ಅತೀ ಕಾಮದ ವ್ಯಕ್ತಿ ಎನಿಸುತ್ತಾಳೆ. ಗಂಡ ನಂಸಪ್ಪ ವಿದ್ಯೆ, ಅಧಿಕಾರ, ಕೈತುಂಬ ಸಂಬಳ ಇದ್ದರೂ ತನ್ನ ಹೆಂಡತಿಯನ್ನು ತಣಿಸುವ ಶಕ್ತಿಯನ್ನ ಪಡೆದಿಲ್ಲ. ಸುಂದರಮ್ಮ ಮದುವೆಗೆ ಮೊದಲೇ ತನ್ನ ಕಾಮದ ಹಸಿವನ್ನು ಕೆಲಸದ ಆಳಾದ ಕರಿಯನ ಮೇಲೆ ಹರಿಹಾಯ್ದು ಬಲವಂತವಾಗಿ ತನ್ನ ದಾಹವನ್ನು ತೀರಿಸಿಕೊಳ್ಳುತ್ತಾಳೆ. ಇಷ್ಟಾದರೂ ಸಹ ಮದುವೆಯ ನಂತರವೂ ಈಕೆಯ ಈ ಹಸಿವು ಹಿಂಗಿರಲಿಲ್ಲ.

ತನ್ನ ಗಂಡ ಕೆಲಸದ ನಿಮಿತ್ತ ದೂರ ಹೋದಾಗ ಸುಂದರಮ್ಮ ಸಬ್ ಓವರ್ಸಿಯಾ ಸಂಬಂಧವನ್ನು ಬೆಳಸುತ್ತಾಳೆ ಇದನ್ನು ತಿಳಿದ ಗಂಡನಿಗೆ ತುಂಬಾ ಸಿಟ್ಟು, ಆಕ್ರೋಶ ಬರುತ್ತದೆ. ಈಕೆಯ ಕಾಮದಾಹ ಸುಂದರರಾಜುವಿನ ಮೇಲೂ ಬೀಡುತ್ತದೆ. ಇವರಿಬ್ಬರ ಕಾಮದ ಹಸಿವು ನಂಜಪ್ಪ ಊರಿನಲ್ಲಿ ಇಲ್ಲದಾಗ ಈಡೇರುತ್ತದೆ. ಈ ವರ್ತನೆಯೂ ನರಸಪ್ಪನಿಗೆ ಗೊತ್ತಾಗಿ ಏನಾದರೂ ಮಾಡು ಆದರೆ ಈ ವಿಚಾರ ಹೊರಗಡೆ ತಿಳಿಯದಂತೆ ನಡೆದುಕೊ ಎಂಬ ಭಾವವು ಬರುತ್ತದೆ. ಸಹಜವಾದ ಕಾಮದ ಭಾವನೆ ಕೆಲವರಲ್ಲಿ ಅತಿಯಾಗಿ ಅದನ್ನು ನಿಯಂತ್ರಿಸಲು ಅಸಮರ್ಥರಾದಾಗ ಯಾವುದೇ ಅನುಮಾನಗಳಿಗೆ ಅಂಜದೆ ಈ ರೀತಿಯಾಗಿ ಕ್ರೂರವಾಗಿ ವರ್ತಿಸುತ್ತಾರೆ.

ಬಡತನ, ವಿಧವೆಯರು, ಅನಾಥ ಮಕ್ಕಳ ಅಸಾಯಕತೆ. :

ಬಡತನ ಮನುಷ್ಯನ್ನು ಅಮಾನವೀಯವಾದ ಕೆಟ್ಟ ವ್ಯವಸ್ಥೆಗೆ ದೂಡುವುದನ್ನು ಕಾಣಬಹುದು. ಇದು ಪ್ರಾಚೀನ ಕಾಲದಿಂದ ಇಂದಿನ ತನಕವೂ ಸಹ ಬಡತನವೆಂಬ ಕಾರಣದಿಂದ ನಾನಾ ರೀತಿಯ ಸಮಾಜ ಬಾಹಿರ ಚಟುವಟಿಕೆಗಳಿಗೆ ಬಲಿಯಾಗಿರುವುದನ್ನು ಕಾಣಬಹುದು. ಅದೇ ರೀತಿ ಹೆಣ್ಣು ಮಕ್ಕಳು ಬೇರೆಯವರ ಅಧೀನಕ್ಕೆ ಬಲಿಯಾಗಿ ತಮ್ಮ ಕನ್ಯತ್ವವನ್ನು ಕಳೆದುಕೊಂಡಿದ್ದಾರೆ.

ಸರಸ್ವತಿ ಬಡತನಕ್ಕೆ ಬಿದ್ದಿದ್ದರಿಂದ, ಆಕೆಯ ಗಂಡ ಬಿಟ್ಟು ಹೋದುದರ ಪರಿಣಾಮವಾಗಿ ಈ ವೃತ್ತಿಗೆ ಬರುತ್ತಾಳೆ. ಈಕೆ ತನ್ನ ಜೀವನ ನಿರ್ವಹಣೆಗೆ ಎಲ್ಲಾ ಕಡೆಗೂ ಅಲೆದಾಗ ಅವರ ಮಾತಿಗೆ ಒಪ್ಪಿದರೆ ಕೆಲಸ, ಇಲ್ಲವಾದರೆ ಗೇಟುಪಾಸು ಇಂತಹ ಸ್ಥಿತಿಯಲ್ಲಿ ಈ ಕೂಪಕ್ಕೆ ಬೀಳುತ್ತಾಳೆ. ತನ್ನ ಮಗನ ಭವಿಷ್ಯವೂ ಆಕೆಯ ಈ ಉದ್ದೇಶದಲ್ಲಿ ಅಡಗಿರುವುದನ್ನು ಕಾಣಬಹುದು.

ಶಾಂತಿ ಎಂಬಾಕೆಗೆ ಆಕೆಯ ಜೊತೆ ಹುಟ್ಟಿದ ತಂಗಿಯರು ಮೂವರು, ಬಡತನ ಬೇರೆ, ಅರಿವಿಲ್ಲದೆಯೇ ಈ ದಂಧೆಗೆ ಬಲಿಯಾಗುತ್ತಾಳೆ. ರಾಜಮ್ಮ ಎಂಬ ವಿಧವೆಯು ಬೇಗನೆ ಗಂಡನನ್ನು ಕಳೆದುಕೊಂಡಿದ್ದರ ಫಲವಾಗಿ ಅವಳಲ್ಲಿ ಮೌನವಾಗಿದ್ದ ಕಾಮದ ಭಾವನೆ ಮೇಲಾಧಿಕಾರಿಗಳ ಕ್ರೌರ್ಯಕ್ಕೆ ಒಳಗಾಗಿ ಕೆರಳುತ್ತದೆ. ಇದನ್ನು ತನ್ನ ವೃತ್ತಿಯ ಜೊತೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾಳೆ.

ಪಾರ್ವತಿ ತಾಯಿಯನ್ನು ಕಳೆದುಕೊಂಡು ತಂದೆಯ ಆಸರೆಯಲ್ಲಿ ಬಡತನದಲ್ಲೂ ಪ್ರೀತಿಯಿಂದ ಬೆಳೆದವಳು. ಇವರ ಈ ಅಸಹಾಯಕತೆಯನ್ನು ಆ ಊರಿನ ನರಸಿಂಹ ರೆಡ್ಡಿ

ಮತ್ತು ಸುಬ್ಬಣ್ಣ ತಮ್ಮ ಕಾಮುಕ ದಾಳಿಗೆ ಬಳಸಿಕೊಂಡು ಈ ವೃತ್ತಿಗೆ ತಂದು ಬಿಸಾಡುತ್ತಾರೆ. 'ಹೂವು ಹಣ್ಣು' ಕಾದಂಬರಿಯ ರಾಧ ತನ್ನ ಬಡತನವೆಂಬ ನೋವಿನಿಂದ ಮುಕ್ತಿ ಪಡೆಯಲು ಸಾಹಸ ಪ್ರಯತ್ನ ಮಾಡಿದರೂ, ಆಕೆಯ ರೂಪ ಸೌಂದರ್ಯ, ಗಂಡನನ್ನು ಕಳೆದುಕೊಂಡು ದಿಕ್ಕು ಇಲ್ಲದೆ ಬದುಕುವ ಅಮಾಯಕ ಸನ್ನಿವೇಶವನ್ನು, ಕಾಮುಕಿಗಳು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ತನ್ನ ಮಗಳು ಭವಿಷ್ಯದಲ್ಲಿ ಚನ್ನಾಗಿರಬೇಕು, ಹಸಿವು ನಿಲ್ಲಬೇಕಾದರೆ ತನ್ನ ಈ ಸ್ವಭಾವವನ್ನು ಅವರಿಗೆ ನೀಡಬೇಕೆಂದು ತಿಳಿದು ಹಣಕ್ಕಾಗಿ ತನ್ನ ದಾಹ ತೀರಿಸಿಕೊಳ್ಳಲು ವೃತ್ತಿಯನ್ನ ನಡೆಸಿಕೊಂಡು ಬರುತ್ತಾಳೆ. ಅದೇ ಬಡತನ, ಹಸಿವು, ರೋಗ–ರುಜಿನಗಳು ಕೊನೆಗೆ ಆಕೆಯನ್ನು ಬಲಿತೆಗೆದುಕೊಳ್ಳುತ್ತದೆ.

'ಬೀದಿಯಲ್ಲಿ ಬಿದ್ದವಳು' ಕಾದಂಬರಿಯ ಯಮುನಾಳ ಕುಟುಂಬವು ಬಡತನ ರೋಗ ರುಜಿನಗಳಿಗೆ ಬಲಿಯಾಗಿದ್ದರ ಪರಿಣಾಮವಾಗಿ ಆ ಊರಿನ ಗೌಡ ಹಣದ ಸಹಾಯ ನೀಡುವ ಮೂಲಕ ಅವರನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾನೆ. ಯಮುನಾಳನ್ನು ತನ್ನ ಕಾಮದಾಹಕ್ಕೆ ಬಲಿತೆಗೆದುಕೊಳ್ಳುತ್ತಾನೆ. ಅಲ್ಲದೆ ಈಕೆಯ ಗಂಡ ಬೇರೊಂದು ಮದುವೆಯಾದಾಗ ಆತನಿಂದ ಲೈಂಗಿಕ ತೃಪ್ತಿ ಪಡೆಯಲಾಗದೇ ನೋವಿನಿಂದ ಪರಿತಪಿಸುತ್ತಾಳೆ. ಈ ಸಂಕಟವನ್ನು ಮರೆಯಲು ಹೆಂಡಕ್ಕೆ ಬಲಿಯಾಗಿ ಮಲ್ಲಪ್ಪನ ತೋಳಿನಲ್ಲಿ ಬಂಧಿಯಾಗುತ್ತಾಳೆ. ಗಂಡನಿಂದ ಪರಿತ್ಯಜಿಸಲ್ಪಟ್ಟ ಯಮುನಾ ಬೇರೊಬ್ಬನಿಂದ ಸುಖವನ್ನು ಆಸರೆಯನ್ನು ಪಡೆಯುತ್ತಾಳೆ.

ತಂದೆ, ತಾಯಿ, ಗಂಡನಿಂದ ದೂರಾಗಿ ಗೌಡನಿಂದಲೂ ಅತ್ಯಾಚಾರಕ್ಕೆ ಬಲಿಯಾಗಿ ನೊಂದು ಅನಾಥೆಯಾಗಿ ಸಾವಿಗೆ ಶರಣಾಗುವ, ಆಕೆಯನ್ನು ಪ್ರೀತಿಯಿಂದ ಮಾತನಾಡಿಸಿ ವೇಶ್ಯಾ ಗೃಹಕ್ಕೆ ಕರೆದು ತರುತ್ತಾನೆ. ಆಕೆಯ ಈ ಬದುಕಿಗೆ ಬಡತನ, ಗಂಡನಿಂದ ಆದ ಅನ್ಯಾಯ, ಗೌಡನ ಕ್ರೌರ್ಯ ನಂತರ ಅನಾಥೆಯಾದ ಸನ್ನಿವೇಶಗಳು ಕಾರಣವಾಗುತ್ತವೆ.

ಬಡತನದಿಂದ ನರಳುವಂತಹ ಜನ ಸಮೂಹದ ಮೇಲೆ ಹಣದ ನರ್ತನವೂ ಕ್ರೂರವಾಗಿರುತ್ತದೆ. ಅಂತಹ ಸನ್ನಿವೇಶ ಸರಸ್ವತಿಯ ಬದುಕಿನಲ್ಲಿ ಆಗುತ್ತದೆ. ಆಕೆ ಹೇಳುವಂತಹ "ಈ ಜಗತ್ತಿನಲ್ಲಿ ಕ್ರೋಧವಿಲ್ಲ, ಕರುಣೆಯಿಲ್ಲ, ಕಂಬನಿಯಿಲ್ಲ, ಅದೆಲ್ಲಾ ದುಡ್ಡಿರುವವರ ವಿಲಾಸ ವಸ್ತು ಎಂಬ ಮಾತುಗಳು ತಾನು ಅನುಭವಿಸಿದ ಧನಿಕರ ಕ್ರೂರ ಹಿಂಸೆಯಲ್ಲಿ ಹಣದಿಂದ ವ್ಯಕ್ತಿ ವರ್ತಿಸುವ ಅನೈತಿಕ ವರ್ತನೆಯನ್ನು ಪ್ರತಿನಿಧಿಸುತ್ತದೆ.

ಅನುವಂಶೀಯ ಅಂಶಗಳು :

ಅನುವಂಶೀಯ ಅಂಶಗಳು ವೇಶ್ಯಾ ವೃತ್ತಿಗೆ ಕಾರಣವೆಂಬ ಹೇಳಿಕೆಯಿಂದ ವೇಶ್ಯಾ

ವೃತ್ತಿಯನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಹಿಸಲಾಗುತ್ತದೆಂಬ ನಂಬಿಕೆಯಿದೆ. ವೇಶ್ಯಾ ವೃತ್ತಿಯೂ ತಂದೆ ತಾಯಿಗಳಿಂದ ಮಕ್ಕಳಿಗೂ ವರ್ಗಾವಣೆಯಾಗುವುದೆಂದು ತಿಳಿಯಲಾಗಿದೆ. ವಂಶ ಪಾರಂಪರ್ಯ ವೃತ್ತಿಯೆಂದು ತಾಯಿಯಿಂದ ಮಗಳಿಗೆ ವರ್ಗಾಹಿಸಲಾಗುವುದು. ಪರಂಪರಾಗತ ಕಸುಬಿಗೆ ಕಟ್ಟು ಬಿದ್ದು ಮಗಳು ಇದನ್ನೇ ಅನುಸರಿಸುತ್ತಾಳೆ. ತಾಯಿ ವೇಶ್ಯೆಯು ತನ್ನ ಮಗಳಿಗೆ ನೃತ್ಯ ಹಾಗೂ ಹಾಡುಗಾರಿಕೆಯ ತರಬೇತಿ ದೊರಕಿಸಿಕೊಡುತ್ತಾಳೆ. ಕಸುಬಿನ ಮರ್ಮವನ್ನು ಮಗಳಿಗೆ ತಿಳಿಸಲಾಗುವುದು. ಕೆಲವು ಸಮೂಹಗಳಲ್ಲಿ ತಾಯಿ ವೇಶ್ಯೆಯು ತನ್ನ ಮಗಳನ್ನು ವೇಶ್ಯೆಯಾಗಿಸಬಹುದು ಸಂಪ್ರದಾಯವಾಗಿದೆ. ವೇಶ್ಯಾ ವೃತ್ತಿಯನ್ನು ಪರಂಪರಾಗತ ಕಸುಬೆಂದು ತಿಳಿದಿರುವವರು ಮಗಳಿಗೆ ಗೆಜ್ಜೆಪೂಜೆ ಮಾಡಿಸುತ್ತಾರೆ. ಸತ್ಕುಲ ಕನ್ಯೆಗೆ ವಿವಾಹ ಎಷ್ಟು ಪ್ರಾದಾನ್ಯವೋ ಹಾಗೆ ವೇಶ್ಯೆಯಾಗುತ್ತಿರುವ ಕನ್ಯೆಗೆ ಸಂಪ್ರದಾಯಕವಾಗಿ ಗೆಜ್ಜೆಪೂಜೆಯೂ ಅಷ್ಟೇ ಮುಖ್ಯವಾದುದು. ಎಂ.ಕೆ.ಇಂದಿರಾರವರ 'ಗೆಜ್ಜೆಪೂಜೆ' ಕಾದಂಬರಿಯು ಅನುವಂಸಿಕವಾಗಿ ನಡೆಸಲು ಪ್ರಯತ್ನಿಸುತ್ತಾಳೆ. ಆದರೆ ಇದಕ್ಕೆ ವಿರುದ್ಧ ಮನಸ್ಥಿತಿಯ ಚಂದ್ರ ಸಾವಿನ ಮೂಲಕ ಅದರಿಂದ ಮುಕ್ತಿ ಪಡೆದಿರುವುದನ್ನು ಕಾಣಬಹುದು.

'ಮೈಮನಗಳ ಸುಳಿಯಲ್ಲಿ' ಕಾದಂಬರಿಯ ವೇಶ್ಯಾ ಬದುಕು ಅನುವಂಶೀಯವಾಗಿದೆ. ಭವಾನಿ ನಿಷ್ಟೆಯಿಂದ ಒಬ್ಬನೊಡನೆ ತನ್ನ ಬದುಕನ್ನು ಸವೆಸಿದರೆ ಆಕೆಯ ಮಗಳು ಮಂಜುಳೆ ತಮ್ಮ ಪದ್ದತಿಯ ಈ ಬದುಕಿನಲ್ಲಿ ಹಲವಾರು ಪುರುಷರು ಬರುತ್ತಾರೆ. ನಂತರ ಅವರ ಸಾಕು ಮಗಳು ಶಾಂತ ಇದೇ ರೀತಿಯಾಗಿ ಬದುಕಿದವರು. ಭವಾನಿ ಮತ್ತು ಮಂಜುಳೆ ಮಾತ್ರ ದೇಹಮಾತ್ರ ಮಾರಿಕೊಂಡು ಬದುಕಿದರೆ ಹೊರತು ಮನಸ್ಸನ್ನಲ್ಲ. ಆದರೆ ಶಾಂತ ದೇಹ ಮಾರಿಕೊಳ್ಳುವುದರ ಜೊತೆಗೆ ಮನಸ್ಸನ್ನು ಮಾರಿಕೊಂಡು ಬದುಕುತ್ತಾಳೆ. ಇದಕ್ಕೆ ವಿರುದ್ದವಾಗಿ ಚಂದ್ರ ದೇಹ ಮನಸ್ಸನ್ನು ಇತರರಿಗೆ ಒಪ್ಪಿಸಲು ಸಿದ್ದವಿಲ್ಲದ ದಿಟ್ಟ ಮಹಿಳೆ ಎನಿಸುತ್ತಾಳೆ.

ಈ ವೇಶ್ಯಾ ದಂಧೆ ನಡೆಸುವಂತ ಯಜಮಾನರು ವಂಶ ಪರಂಪರೆಯಿಂದ ಬಂದಿರುವುದಿದೆ. ತ.ರಾ.ಸು.ರವರ ಚಿನ್ನಮ್ಮಳ ತಾಯಿ ಇದೇ ರೀತಿ ಬದುಕಿದವಳು ಆಕೆಯಿಂದ ಈ ಬದುಕಿನಲ್ಲಿ ಹೆಣ್ಣನ್ನು ಹೇಗೆ ಪಳಗಿಸಬೇಕು ಹಣದ ವ್ಯವಹಾರ ಹೇಗೆ ಕುದಿರಿಸುವುದು ಎಂಬ ಪಾಠ ಕಲಿತಿರುತ್ತಾಳೆ. ಚಿನ್ನಮ್ಮ ತನ್ನ ತಾಯಿಯಂತೆ ಬದುಕಿ ಹಣ ಸಂಪಾದಿಸುತ್ತಾಳೆ. ತನ್ನ ಮಗಳು ಲಕ್ಷ್ಮಿ ಇದೇ ರೀತಿಯಾಗಿ ಬಾಳಬೇಕೆಂದು ಆಕೆಗೂ ಇದೇ ಬದುಕಿನ ಪಾಠ ಹೇಳುತ್ತಾಳೆ. ಪುಟ್ಟರಂಗಿ ಸತ್ತ ನಂತರ ಆ ಗೃಹಕ್ಕೆ ಚಿನ್ನಮ್ಮ ಯಜಮಾನಿಯಾಗಿ ಪರಂಪರೆಯನ್ನು ಮುಂದುವರೆಸುತ್ತಾಳೆ

ಆರ್ಥಿಕ ಅಂಶಗಳು :

ಆರ್ಥಿಕ ಅಂಶಗಳಾದ ಬಡತನ, ನಿರುದ್ಯೋಗ, ಕೈಗಾರೀಕರಣ, ನಗರೀಕರಣ, ಮುಂತಾದವು ವೇಶ್ಯಾ ವೃತ್ತಿಗೆ ಪ್ರಭಲವಾದ ಅವ್ಯಕ್ತಕಾರಕಗಳೆಂದು ಅನೇಕ ಸಮೀಕ್ಷೆ ಹಾಗೂ ಅಧ್ಯಯನಗಳಿಂದ ಖಚಿತವಾಗಿ ತಿಳಿದು ಬಂದಿದೆ. ಬಡ ಹುಡುಗಿಯರು ಹಾಗೂ ಹೆಂಗಸರಿಗೆ ಜೀವನೋಪಾಯಕ್ಕೆ ಬೇರೆ ಮಾರ್ಗಲ್ಲದೆ ಲೈಂಗಿಕ ಸ್ವೇಚ್ಛಾಚಾರಕ್ಕೆ ಬಲಿಯಾಗಿ ವೇಶ್ಯೆಯರಾಗುತ್ತಾರೆ. ಹಸಿವು, ಬಡತನ, ಆರ್ಥಿಕ ಅಸಮಾನತೆ, ಮೋಜಿನ ಜೀವನದ ವ್ಯಾಮೋಹ ಮುಂತಾದ ಕೆಲವು ಅಂಶಗಳು ವೇಶ್ಯಾ ವೃತ್ತಿಗಿಳಿಯಲು ಪ್ರಚೋದಿಸುತ್ತದೆ. ಅಸಹಾಯಕ ಹೆಂಗಸರಿಗೆ ವೇಶ್ಯಾ ವೃತ್ತಿಯು ಸುಲಭ ಜೀವನೋಪಾಯವಾಗಿದೆ. ಬಡತನದ ಕನ್ಯೆ ರಸ್ತೆಯಲ್ಲಿ ನಿಂತು ಭಿಕ್ಷೆ ಬೇಡಲು ಹಿಂಜರಿಯುತ್ತಾಳೆ. "ಭಿಕ್ಷೆ ಭೇಡಲು ನನಗೆ ನಾಚಿಕೆ ಹಾಗೂ ಸಂಕೋಚ, ಆದರೆ ನಿಮ್ಮ ತೋಳಿನಲ್ಲಿರಲು ನನಗೆ ಹೆಮ್ಮೆ" 2 ಎಂದು ವೇಶ್ಯೆಯರು ತಮ್ಮ ಹತ್ತಿರ ಬಂದ ಪುರುಷರನ್ನು ಹೊಗಳಿ ರಮಿಸುತ್ತಾರೆ. ಭಿಕ್ಷುಕ ಕನ್ಯೆಯರ ಅರೆ ನಗ್ನತೆಯನ್ನು ಸವಿದು ಆಶ್ರಯ ನೀಡುವನೆಂದು ಕೆಡಿಸಿ ವಂಚಿಸುವ ಕಾಮುಕರಿಗೂ ಕೊರತೆಯಿಲ್ಲ.

ಮಸಣದ ಹೂವು ಕಾದಂಬರಿಯ ಸರಸ್ವತಿ ಪುಟ್ಟಲಕ್ಷ್ಮಿ, ಚಿನ್ನಮ್ಮ, ಪುಟ್ಟರಂಗಿ, ಮುಂತಾದ ಮಹಿಳೆಯರು ಹಣದಾಹದಿಂದ ಈ ವೃತ್ತಿ ಬದುಕನ್ನು ಸ್ವೀಕರಿಸುತ್ತಾರೆ. ಹೂವುಹಣ್ಣು ಕಾದಂಬರಿಯ ರಮಾ, ಶನಿಸಂತಾನದ ಕುಂತಳ, ಸರಸ್ವತಿ, ಗೆಜ್ಜೆಪೂಜೆಯ ಸಂಗವ್ವ ಇವರೆಲ್ಲರ ಮೂಲ ಉದ್ದೇಶ ಹಣದಾಹಕ್ಕೆ ಬಲಿಯಾಗಿ ತಮ್ಮನ್ನು ತಾವು ಮಾರಿಕೊಳ್ಳುತ್ತಾರೆ.

ತೀವ್ರ ಕೈಗಾರಿಕರಣ ಹಾಗೂ ನಗರೀಕರಣದಿಂದಾಗಿ ವಸತಿ ಗೃಹಗಳ ಅಭಾವ ಹೆಚ್ಚುತ್ತಿದೆ. ಮನೆಗಳ ಅಭಾವ ಏಕಾಂತತೆಗೆ ಅವಕಾಶವಿಲ್ಲದಿರುವಿಕೆ ಕಿಕ್ಕಿರಿದ ಜನ ಸಂದಣಿ ಮನರಂಜನಾ ಸೌಲಭ್ಯಗಳ ಅಭಾವ ಮುಂತಾದ ಕಾರ್ಮಿಕ ಸ್ತ್ರೀಯರನ್ನು ಅನೈತಿಕ ಲೈಂಗಿಕ ಕ್ರಿಯೆಯಲ್ಲಿ ತೊಡಗುವಂತೆ ಪ್ರಚೋದಿಸುತ್ತವೆ. ಏರುತ್ತಿರುವ ಬೆಲೆಗಳಲ್ಲಿ ತಮ್ಮ ಕಡಿಮೆ ಸಂಬಳದಿಂದ ಇಲ್ಲವೇ ಕೂಲಿಯಿಂದ ಜೀವನ ಸಾಗಿಸಲಾಗದ ಸ್ತ್ರೀಯರು ತಮ್ಮ ದೇಹವನ್ನು ಹಣಕ್ಕಾಗಿ ಒಪ್ಪಿಸಬಹುದು. ಬೇರೆ ಎಲ್ಲರಿಗಿಂತಲೂ ಹೆಚ್ಚಾಗಿ ಕಾರ್ಖಾನೆಯ ಕಾರ್ಮಿಕರಲ್ಲಿ ವೇಶ್ಯಾ ವೃತ್ತಿಯೂ ಆಚರಣೆಯಲ್ಲಿದೆಯೆಂದು ಅನೇಕ ಸಮೀಕ್ಷೆಗಳು ರುಜುವಾತುಪಡಿಸಿವೆ ಹೂವುಹಣ್ಣು ಕಾದಂಬರಿಯ ರಮಾ ಕಾರ್ಖಾನೆಯಲ್ಲಿ ಕೆಲಸ ಕೇಳಲು ಹೋದಾಗ ಅಲ್ಲಿನ ಮಹಿಳೆ ಮಾನವಾಗಿ ಬದುಕುವುದಕ್ಕೆ ಇಲ್ಲಿ ಸಾಧ್ಯವಿಲ್ಲ ಎಂಬ ಮಾತುಗಳು ದೃಢಪಡಿಸುತ್ತದೆ.

2 ಸಾಮಾಜಿಕ ಸಮಸ್ಯೆಗಳು ಎಂ. ನಾರಾಯಣ್ ಪು.ಸಂ.378

'ಮಸಣದ ಹೂವು' ಕಾದಂಬರಿಯ ಸರಸ್ವತಿಯ ಈ ವೇಶ್ಯಾ ಬದುಕಿಗೆ ಕಾರ್ಖಾನೆಯ ಮಾಲಿಕನೇ ಕಾರಣಿಭೂತನಾಗುತ್ತಾನೆ. ಹೀಗಾಗಿ ಕಾರ್ಖಾನೆಯಲ್ಲಿ ಮಹಿಳಾ ಕಾರ್ಮಿಕರು ಪುರಷ ಕಾರ್ಮಿಕರೊಡನೆ ದೈಹಿಕ ಸಂಪರ್ಕ ಹೊಂದಿ ಅನಿವಾರ್ಯವಾಗಿ ವೇಶ್ಯಾ ವೃತ್ತಿಗೆ ಬಲಿಯಾಗುತ್ತಾರೆ. ಕಾಮಕ್ಕೆ ಕಣ್ಣಿಲ್ಲ ಕಾಮೋದ್ರೇಕಕ್ಕೆ ಬಲಿಯಾಗಿ ಅರಿವಿಲ್ಲದೆಯೇ ಸಂಬೋಗಿಸಬಹುದು. ರಾತ್ರಿ ಹೊತ್ತು ಕಾರ್ಖಾನೆಯಲ್ಲಿ ಕೆಲಸ ಮಾಡುವಾಗ ಉದ್ರಿಕ್ತರಾಗಬಹುದು. ಹೀಗೆ ಒಂದಲ್ಲ ಒಂದು ಕಾರಣದಿಂದ ಕಾರ್ಮಿಕ ಸ್ತ್ರೀಯರು ವೇಶ್ಯಾವೃತ್ತಿಗೆ ಬಹಳ ಸುಲಭವಾಗಿ ಬಲಿಯಾಗುತ್ತಾರೆ. ಕಾರ್ಖಾನೆಯ ಪುರುಷ ಕಾರ್ಮಿಕರು ತಮ್ಮ ಊರಿನಲ್ಲಿರುವ ಹೆಂಡತಿಯನ್ನು ಕರೆದುಕೊಂಡು ಬರಲು ಮನೆ ಸಿಗುವುದಿಲ್ಲ ಹೆಂಡತಿಯಿಂದ ಬೇಸರಪಟ್ಟವರು ಕಾಮ ಬಯಕೆಗಾಗಿ ಮಹಿಳಾ ಕಾರ್ಮಿಕರನ್ನು ಕಾಡಿಸುತ್ತಾರೆ.

ದ್ವಿಮುಖ ನೀತಿಯ ನೈತಿಕತೆ :

ಪುರುಷ ಮತ್ತು ಸ್ತ್ರೀಯರನ್ನು ಲೈಂಗಿಕ ವಿಷಯಗಳಲ್ಲಿ ಬೇರೆಬೇರೆ ರೀತಿಯಲ್ಲಿ ಪರಿಗಣಿಸಲಾಗುವುದು. ಪುರುಷರ ಲೈಂಗಿಕ ಸ್ಥೈರ ವೃತ್ತಿಯನ್ನು ಸಹಿಸಲಾಗುವುದು. ಅದೇ ಸ್ತ್ರೀಯರ ಲೈಂಗಿಕ ಅನ್ಯೆತಿಕತೆಯನ್ನು ಸಹಿಸುವುದಿಲ್ಲ ಹಾಗೂ ಅಂಥವರನ್ನು ಸಮಾಜ ಕಠೋರವಾಗಿ ದಂಡಿಸುತ್ತದೆ. ಲೈಂಗಿಕ ಅಪರಾಧಗಳಿಂದ ಸ್ತ್ರೀಗೆ ನಿಂದನೆ, ಅಪವಾದ, ಬಹಿಷ್ಕಾರ ದೊರೆಯುವುದೇ ಹೊರತು ಪುರುಷನಿಗಲ್ಲ. ಮಸಣದ ಹೂವೂ ಕಾದಂಬರಿಯ ಶಾಂತ, ಪಾರ್ವತಿ, ಬೀದಿಯಲ್ಲಿ ಬಿದ್ದವಳು ಕಾದಂಬರಿಯ ಯಮುನಾ ಒಂದಲ್ಲ ಒಂದು ಕಾರಣದಿಂದ ಲೈಂಗಿಕ ಅತ್ಯಾಚಾರಕ್ಕೆ ಬಲಿಯಾಗಿ ಸಮಾಜದ; ಕುಟುಂಬದ, ನಿಂದನೆಗೆ ಒಳಗಾದವರೇ, ಇದರಿಂದ ಈ ವೃತ್ತಿಗೆ ಸೇರಿದ್ದಾರೆ.

ಸ್ತ್ರೀ ಒಮ್ಮೆ ಕಾಲು ಜಾರಿದರೆ ಪುನಃ ಅದರಿಂದ ಅವಳಿಗೆ ವಿಮೋಚನೆ ಇಲ್ಲ ಒಮ್ಮೆ ಅವಳಿಗೆ ವೇಶ್ಯೆಯೆಂಬ ಪಟ್ಟ ಕಟ್ಟಿದರೆ ಅದರಿಂದ ಆಕೆ ತಪ್ಪಿಸಿಕೊಳ್ಳಲು ಆಗುವುದಿಲ್ಲ. ವಿವಾಹವಾಗುವ ಕನ್ಯೆಯಿಂದ ಕೌಮಾರ್ಯವನ್ನು ಅಪೇಕ್ಷಿಸುತ್ತೇವೆಯೇ ಹೊರತು ವರನಿಂದಲ್ಲ. ವಿವಾಹವಾದ ಮೇಲೂ ಹೆಂಡತಿಯೂ ಪತಿವ್ರತೆಯಾಗಿರಬೇಕು. ಗಂಡನೇ ದೇವರೆಂದು ನಂಬಬೇಕು. ಆದರೆ ಗಂಡನಿಂದ ಪತ್ನೀವ್ರತವನ್ನು ಸಮಾಜ ಅಪೇಕ್ಷಿಸುವುದಿಲ್ಲ. ಶನಿಸಂತಾನದ ಸರಸ್ವತಿಯ ಗಂಡ, ನಂಜಯ್ಯ, ಮಂಜಯ್ಯ, 'ಹೂವುಹಣ್ಣು' ಕಾದಂಬರಿಯ ಶೆಟ್ಟಿ – ಹೀಗೆ ಹಲವಾರು ವ್ಯಕ್ತಿಗಳು ಕೆಟ್ಟದಾರಿ ತುಳಿದರೂ ಹೆಂಡತಿ ಮಾತ್ರ ತನಗೆ ನಿಷ್ಠೆಯಿಂದ ಇರಬೇಕೆಂಬ ದ್ವಿಮುಖ ನೀತಿಯ ನೈತಿಕತೆಯು ವೇಶ್ಯಾವೃತ್ತಿಗೆ ಪೂರಕವಾಗಿದೆ. ಇದು

ಸ್ತ್ರೀಯರಲ್ಲಿ ಪುರುಷರ ಹೆಚ್ಚುಗಾರಿಕೆಯ ಬಗ್ಗೆ ಕ್ರೋಧ ಮತ್ಸರ ಬೆಳೆಸಿ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಪ್ರವೃತ್ತಿ ಬೆಳೆದು ಅನೈತಿಕ ಲೈಂಗಿಕ ಸಂಬಂಧ ಬೆಳೆಸಲು ಉತ್ತೇಜಿಸಬಹುದು

ಸಂಪ್ರದಾಯ :

ಬಾಲ್ಯವಿವಾಹ ಕಾನೂನು ಬಾಹಿರವಾಗಿದ್ದರೂ ಸಹ ಇದು ಇನ್ನೂ ಅಚರಣೆಯಾಲ್ಲದೆ. ದುರಾದೃಷ್ಟದಿಂದ ಪ್ರಾಪ್ತ ವಯಸ್ಕಾರದಾಗಲೇ ಕೆಲವರು ವಿಧವೆಯರಾಗಬಹುದು. ಅವರಿಗೆ ಕಾಮ ಬಯಕೆಯಿದ್ದರೂ ಅದನ್ನು ವ್ಯಕ್ತಪಡಿಸುವ ಹಾಗಿಲ್ಲ. ಅಲ್ಲದೆ ಅವರಿಗೆ ಮರುವಿವಾಹ ಇಲ್ಲದೆ ಇರುವುದರಿಂದ ಅವರು ಶೀಲವಂತರಾಗಿರಬೇಕೆಂದು ಸಮಾಜ ಬಯಸುತ್ತದೆ. ಇಂತಹವರು ಕಾಲಕ್ರಮೇಣ ಕಾಮುಕರ ಕಾಟ ತಡೆಯಲಾರದೆ, ವೇಶ್ಯೆಯರಾಗುತ್ತಾರೆ. 'ಮಸಣದ ಹೂವು'ವಿನ ರಾಜಮ್ಮ, ಶನಿಸಂತಾನದ ಸರಸ್ವತಿ 'ಹೂವುಹಣ್ಣು'ನ 'ರಮಾ' ಈ ರೀತಿಯಾಗಿ ಬಲಿಯಾಗುತ್ತಾರೆ.

ವರದಕ್ಷಿಣೆಯನ್ನು ಕಾನೂನು ನಿಷೇದಿಸಿದ್ದರೂ ಇದನ್ನು ಗುಟ್ಟಾಗಿ ತೆಗೆದುಕೊಳ್ಳುತ್ತಾರೆ. ತಂದೆಯು ವರದಕ್ಷಿಣೆ ಕೊಡಲು ಅಶಕ್ತನಾದರೆ ಮಗಳು ಪ್ರಾಪ್ತ ವಯಸ್ಕಳಾದರೂ ಅವಿವಾಹಿತೆಯಾಗಿ ಉಳಿಸಬಹುದು. ತೀರದ ಬಯಕೆಯಿಂದ ಅಡ್ಡದಾರಿ ಹುಡುಕಬಹುದು. ಕನ್ಯೆಯೇ ವೇಶ್ಯಾವೃತ್ತಿಯಿಂದ ಗುಟ್ಟಾಗಿ ಹಣ ಸಂಪಾದಿಸಿ ವರದಕ್ಷಿಣೆಗಾಗಿ ಕೂಡಿಡಬಹುದು.

"ಹಿಮಾಲಯದ ತಪ್ಪಲು ಪ್ರದೇಶದ ಜಿಲ್ಲೆಗಳಲ್ಲಿ 'ರೀಟ್' ಎಂಬ ಸಂಪ್ರದಾಯವಿದೆ. ಈ ಸಂಪ್ರದಾಯದ ಪ್ರಕಾರ ಹೊಸ ಹೆಂಡತಿಯನ್ನು ಪಡೆಯಲಿಚ್ಛಿಸವವನು ಹಳೆಯ ಹೆಂಡತಿಯನ್ನು ಮಾ[illegible] ಬಿಡುತ್ತಾನೆ. ಇದು ತಲೆ ಹಿಡುಕರಿಗೆ ಸಮೃದ್ಧ ಅವಕಾಶ ಒದಗಿಸುತ್ತದ"3.

"ಬಂಗಾಳದಲ್ಲಿ ವಿಧವೆಯರನ್ನು ಕಾಶಿ ವಿಶ್ವನಾಥ ದೇವಾಲಯಕ್ಕೆ ಬಿಡುವ ಸಂಪ್ರದಾಯವಿದೆ. ವಿಧವೆಯರು ತಮ್ಮ ವೈಧವ್ಯ ಜೀವನವನ್ನು ಪ್ರಾರ್ಥನೆ ಜಪತಪಗಳಲ್ಲಿ ಕಳೆಯಬೇಕು. ಇಂಥ ಅನೇಕ ವಿಧವೆಯರು ಕಾಶಿಯ ವೇಶ್ಯಾಗೃಹಗಳಲ್ಲಿ ಸೇರಿದ್ದಾರೆ. ಇನ್ನೊಂದು ವಿಲಕ್ಷಣ ಸಂಪ್ರದಾಯವೆಂದರೆ ಕನ್ಯೆಯು ವಿವಾಹವಾದ ಮೊದಲ ರಾತ್ರಿಯನ್ನು ಧಾರ್ಮಿಕ ಗುರುಗಳ ಆಜ್ಞೆಯಂತೆ ಭಕ್ತರಿಗೆ ಧಾರೆಯೆರೆಯಬೇಕು. ಇದು ಭಾರತದ ಅನೇಕ ಭಾಗಗಳಲ್ಲಿ ಹಾಗೂ ಅನೇಕ ಸಮುದಾಯಗಳಲ್ಲಿ ರೂಢಿಯಲ್ಲಿದೆ. ಕಿಶೋರಿಯರು ಅನಾಥರಾದರೆ ನೆರೆಹೊರೆಯವರ ಪಾಲಾಗುತ್ತಾರೆ. ಉತ್ತರ ಪ್ರದೇಶದ ನಾಯಕರಲ್ಲಿ ಅಪ್ರಾಪ್ತ

3 ಸಾಮಾಜಿಕೆ ಸಮಸ್ಯೆಗಳು ಎಂ.ನಾರಾಯಣ್ ಪುಟ ಸಂಖ್ಯೆ – 381

ಹುಡುಗಿಯರಿಗೆ ವೇಶ್ಯಾವೃತ್ತಿಯ ತರಬೇತಿ ನೀಡುವ ಸಂಪ್ರದಾಯವಿದೆ."[4]

'ಬೀದಿಯಲ್ಲಿ ಬಿದ್ದವಳು' ನ ಯಮುನಾ, 'ಗೆಜ್ಜೆಪೂಜೆ'ಯ ಅಪರ್ಣಾ ತಂದೆ-ತಾಯಿಯನ್ನು ಒಂದಲ್ಲ ಒಂದು ವಿಧದಲ್ಲಿ ಕಳೆದುಕೊಂಡು ಅನಾಥರಾಗಿ ಈ ವೃತ್ತಿಗೆ ಬಲಿಯಾಗುತ್ತಾರೆ.

ವಿಧವೆಯರು ಅವಿವಾಹಿತ ತರುಣಿಯರು ಹಾಗೂ ಉದಾಸೀನಗೊಂಡ ಮಹಿಳೆಯರು ನಿರಾಶ್ರಿತರಾಗಿ ಬೀದಿ ಪಾಲಾಗುತ್ತಾರೆ. ಇಂಥ ಹೆಂಗಸರು ಅಕ್ರಮ ಲೈಂಗಿಕ ಕೃತ್ಯಗಳಿಗೆ ಸುಲಭವಾಗಿ ಬಲಿಯಾಗುತ್ತಾರೆ. ಹೆಣ್ಣು ಮಕ್ಕಳ ಮೇಲೆ ತಂದೆ ತಾಯಿಗಳ ಹಿಡಿತವಿಲ್ಲದಿರುವಿಕೆ, ತಂದೆತಾಯಿಗಳು ಅನೈತಿಕ ಲೈಂಗಿಕ ಸಂಬಂಧಗಳನ್ನು ಹೊಂದಿರುವುದು. ವೇಶ್ಯೆಯರ ಸಹವಾಸ ಮುಂತಾದವುಗಳು ವೇಶ್ಯಾವೃತ್ತಿಗೆ ಪೂರಕವಾಗಿವೆ.

ಬಹುಪತ್ನಿತ್ವವು ಖಂಡನೀಯವಾದುದು. ಪತ್ನಿಯರ ಸಂಖ್ಯೆಯು ಹೆಚ್ಚುವುದರಿಂದ ಅವರಲ್ಲೇ ದ್ವೇಷ ಅಸೂಯೆ ಹೆಚ್ಚುತ್ತವೆ. ಯಾವ ಹೆಣ್ಣು ತನ್ನ ಗಂಡನು ಮತ್ತೊಬ್ಬಳೊಡನೆ ಪ್ರೇಮ ಹರಡಿಕೊಳ್ಳುವುದನ್ನು ಸಹಿಸುವುದಿಲ್ಲ. ಇದರಿಂದ ವೈವಾಹಿಕ ಸುಖ ನಾಶವಾಗುತ್ತದೆ. ಯಾವ ಗಂಡನೂ ತನ್ನ ಎಲ್ಲಾ ಹೆಂಡತಿಯರನ ಸಮಾನರಾಗಿ ನೋಡಿಕೊಳ್ಳಲು ಸಾಧ್ಯವಿಲ್ಲ. ಅತಿ ಮುದ್ದಿನ ಮಡದಿಯನ್ನು ಮಾತ್ರ ಹೆಚ್ಚಾಗಿ ಪ್ರೀತಿಸುತ್ತಾನೆ. ಇದರಿಂದ ಪ್ರೇಮದಿಂದ ವಂಚಿಸಲ್ಪಟ್ಟ ಹೆಂಡತಿಯರು ಲೈಂಗಿಕವಾಗಿ ಅತೃಪ್ತರಾಗಿ ಗಂಡನಲ್ಲದೆ ಬೇರೆಯವರೊಂದಿಗೆ ಕಾಮತೃಪ್ತಿ ಪಡೆಯುತ್ತಾರೆ. ಕಾಲಕ್ರಮೇಣ ಇವರು ವೇಶ್ಯೆಯರಾಗುತ್ತಾರೆ. "ಬೀದಿಯಲ್ಲಿ ಬಿದ್ದವಳು" ಕಾದಂಬರಿಯ ಯಮುನ ತನ್ನ ಗಂಡ ಎರಡನೇ ಮದುವೆಯಾದ ಮೇಲೆ ಮಲ್ಲಪ್ಪನೊಡನೆ ಅಕ್ರಮ ಸಂಬಂಧ ಹೊಂದಿ ತಿರಸ್ಕಾರಕ್ಕೆ ಒಳಗಾಗುತ್ತಾಳೆ.

ಆಧುನಿಕ ಸಮಾಜಗಳು ಹೆಚ್ಚು ಹೆಚ್ಚು ಅನೈತಿಕವಾಗುತ್ತಿವೆ. ನೈತಿಕ ಮೌಲ್ಯಗಳು ಮತ್ತು ಲೈಂಗಿಕ ನಿಯಮಗಳನ್ನು ಉಲ್ಲಂಘಿಸಿ ಅಗೌರವಿಸಲಾಗುತ್ತದೆ. ಲೈಂಗಿಕ, ಅನೈತಿಕತೆ ಹಾಗೂ ದಾರಿತಪ್ಪಿ ಸುಖಿಸುವುದು ಹೆಚ್ಚುತ್ತಿದೆ. ಮಕ್ಕಳ ಮೇಲಿನ ಹಿಡಿತವಿಲ್ಲದಿರುವಿಕೆ ಹಾಗೂ ತಂದೆತಾಯಿಯರ ಉದಾಸೀನತೆಯು ಇದಕ್ಕೆ ಕಾರಣಗಳಾಗಿವೆ. ಕಾಲೇಜು ಹುಡುಗಿಯರಲ್ಲಿ ದಾರಿ ತಪ್ಪಿ ಲೈಂಗಿಕ ಸುಖಾನುಭವ ಪಡೆಯಬಹುದು ಪ್ರಧಾನವಾಗಿದೆ. ಜಾರಜ ಮಕ್ಕಳು ಸಂಖ್ಯೆಯ ಹೆಚ್ಚುಳವೇ ಲೈಂಗಿಕ ಅನೈತಿಕತೆಗೆ ಹಿಡಿದ ಕನ್ನಡಿ. ವಿವಾಹವಿಚ್ಛೇದನ, ಅನೈತಿಕ ಹಾಗೂ ಅಕ್ರಮ ಪ್ರೇಮ ಹೆಚ್ಚುತ್ತಿವೆ. ಗರ್ಭ ವಿರೋಧ ವಿಧಾನಗಳು ಹಾಗೂ ತಂತ್ರಗಳು, ಕದ್ದು ಸಂಭೋಗಿಸುವವರಿಗೆ ಹೆಚ್ಚು ಅನುಕೂಲಕರವಾಗಿವೆ.

4 ಸಾಮಾಜಿಕ ಸಮಸ್ಯೆಗಳು ಎಂ.ನಾರಾಯಣ್ ಪುಟ. ಸಂಖ್ಯೆ. 382

ಅತಿಕಾಮುಕತೆ, ಕ್ರೂರಿ ತಂದೆ ತಾಯಿಗಳು ಅಥವಾ ಪತಿ ಸುತ್ತಣ ಪರಿಸರ, ಕೆಟ್ಟ ಸ್ನೇಹಿತರು, ಪ್ರವೃತ್ತಿ, ದೋರಣೆ ಹೊಸ ಅನುಭವ ಹಾಗೂ ಹೊಸ ರುಚಿಗಳಲ್ಲಿ ಆಸಕ್ತಿ, ಹೆಂಗಸಿನ ಭೋಗ ಪ್ರಿಯತೆ ಹಾಗೂ ಚಂಚಲತೆ, ಯುವಕರಲ್ಲಿ ರೋಮಾಂಚಕಾರಿ ಲೈಂಗಿಕ ಚಾಳಿ, ಆಶ್ಲೀಲ ಲೈಂಗಿಕ ಭಾಷೆ, ಸಿನಿಮಾಗಳಿಲ್ಲಿ ಲೈಂಗಿಕ ಪ್ರದರ್ಶನಗಳು ಕಾರಣವಾಗಿದೆ.

ಶಾರೀರಿಕ ಹಾಗೂ ಮಾನಸಿಕ ಅಂಶಗಳು :

ಶಾರೀರಿಕ ಹಾಗೂ ಮಾನಸಿಕ ಅಸ್ತವ್ಯಸ್ತತೆಯಿಂದ ಕೆಲವರು ವೇಶ್ಯಾವೃತ್ತಿಗೆ ಸೇರಬಹುದು ಅಂಗವಿಕರಾದವರು ತನ್ನ ಜೀವನೋಪಾಯಕ್ಕೆ ಬೇರೆ ಮಾರ್ಗವಿಲ್ಲದೆ ಬೇರೆಯುವರ ಕಾಮುಬಯಕೆಯುನ್ನು ತೃಪ್ತಿಪಡಿಸುತ್ತಾ ನೈತಿಕ ಮಾರ್ಗದಿಂದ ದೂರಸರಿಯುತ್ತಾಳೆ. ಭಾವೋದ್ರೇಕದಲ್ಲಿ ಅಶಾಂತಿ, ಅತಿ ಕಾಮುಕತೆ ಹಾಗೂ ರಸ ಗ್ರಂಥಿಗಳಲ್ಲುಂಟಾದ ಏರುಪೇರು, ಗೊಂದಲಕ್ಕೋಳಗಾದ ಹೆಣ್ಣು ಸಹಜವಾಗಿ ಅನೈತಿಕ ಸಂಬಂಧಗಳಿಗೆ ಅವಕಾಶ ಕೊಡುತ್ತಾಳೆ. ವಿಲಾಸಿ ಜೀವನ. ಹೊಸ ರುಚಿ ಹಾಗೂ ಅನುಭವಗಳನ್ನು ಅಪೇಕ್ಷಿಸುವವಳು ವೇಶ್ಯೆಯಾಗುತ್ತಾಳೆ. ಜುಗುಪ್ಸೆ, ಪ್ರಣಯದಲ್ಲಿ ಆಶಾಭಂಗ, ವಿವಾಹದಲ್ಲಿ ನಿರಾಶೆ ಮುಂತಾದ ಮಾನಸಿಕ ಕ್ಲೇಶಗಳಿಗೆ ಒಳಗಾದ ಹೆಂಗಸರು ವೇಶ್ಯಾವೃತ್ತಿಗೆ ಹೊಂದಿಕೊಳ್ಳುತ್ತಾರೆ.

ಅ.ನ.ಕೃಷ್ಣರಾಯರ 'ಶನಿಸಂತಾನದ' ಕಾದಂಬರಿಯಲ್ಲಿ ಕಾದಂಬರಿಕಾರರು ವೇಶ್ಯಾ ಬದುಕಿಗೆ ಆಕೆಯ ಬಡತನ, ಹೆಣ್ಣು ಮಕ್ಕಳು ಕರ್ತವ್ಯ, ಅತಿಕಾಮುಕತೆ, ಹಣದಾಹದಿಂದ ನಡೆಯುವುದನ್ನು ತಿಳಿಸುತ್ತಾರೆ. ಇಲ್ಲಿ ಕಾದಂಬರಿಕಾರರು ಹೆಣ್ಣು ಮತ್ತು ಅವಳ ಸುತ್ತಲಿನ ಸಮಸ್ಯೆಗಳಿಗೆ ಒತ್ತು ನೀಡಿ ತಮ್ಮ ನಿಲುವನ್ನು, ವೇಶ್ಯಾ ಬದುಕಿನ ಪರಿವರ್ತನೆಯನ್ನು ಪುರುಷರಲ್ಲಿ ತರುವ ಮೂಲಕ ಪುರುಷರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಗಂಡು ಹೆಣ್ಣಿನ ಸಂಬಂಧದಲ್ಲಿ ಅತಿರಂಜನೆಯನ್ನು, ಅಂಗಾಂಗಗಳ ವರ್ಣನೆಯನ್ನು ಹೆಚ್ಚು ಬಿಂಬಿಸುತ್ತದೆಯೇ ಹೊರತು ವೇಶ್ಯಾ ಬದುಕಿನ ಮುಕ್ತಿಗೆ, ಬದಲಾವಣೆಗೆ ಆಸಕ್ತಿ ತೋರಿಲ್ಲ. ಅವರ ದೃಷ್ಟಿಯಲ್ಲಿ ಮಹಿಳೆಯೇ ತನ್ನ ಸ್ವಹಿಚ್ಚೆಯಿಂದ, ಸ್ವಾರ್ಥಕ್ಕಾಗಿ ಈ ಜೀವನಕ್ಕೆ ಬರುವುದನ್ನು ತಿಳಿಸುತ್ತಾ ಪುರಷರ ವಿಚಾರದಲ್ಲಿ ಮೌನವಹಿಸುತ್ತಾರೆ.

ಎಂ.ಕೆ. ಇಂದಿರಾರವರ 'ಗೆಜ್ಜೆಪೂಜೆ' ಕಾದಂಬರಿಯಲ್ಲಿ ಲೇಖಕಿಯು ಚಂದ್ರಳ ಪಾತ್ರದ ಮೂಲಕ ಬದಲಾವಣೆಗೆ ಯತ್ನಿಸುತ್ತಾಳೆ. ಚಂದ್ರಳಾನು 'ಸೂಳೆಯರು' ಎಂದು ನಿಂದಿಸುವಾಗ ಚಂದ್ರ ಹೇಳುವಂತಹ ಮಾತು – " ಸೂಳೆರಜಾತಿ ಅಲ್ದೆ ಬೇರೆ ಎಲ್ಲಾ

ಜಾತೀಲೂ ಕೂಡ ಎಷ್ಟೋ ಜನ ಹೆಂಗಸ್ರು ಮದ್ವೇಗೆ ಮುಂಚೇನೇ, ಮದ್ವೆ ಆದ್ಮೇಲೆ ಕೆಟ್ಟೋಗಿರ್ತಾರೆ. ಅವರನ್ನು ಮಾತ್ರ ಯಾರೂ ಸೂಳೇಂತ ಅನ್ನೋಲ್ಲ ನಾವು ಗರತೀಗಿಂತ ಸರಿಯಾಗಿದ್ದೂ ಹೀಗಂತಾರಲ್ಲ? ಎಂಬಲ್ಲಿ 'ಸೂಳೆ' ಎಂದು ಕರೆಸಿಕೊಳ್ಳುವಂತಹ ಮಹಿಳೆಯರಲ್ಲಿ ನಿಷ್ಠೆಯಿಂದ ಒಬ್ಬರಿಗೆ ತಮ್ಮ ತನು ಮನವನ್ನು ಒಪ್ಪಿಸಿ ಬಾಳುವಂತಹ 'ಗರತಿ' ಯರು ಇದ್ದರೂ ಅವರನ್ನು ಸೂಳೆಯೆಂದೇ ಕಾಣುತ್ತಾರೆ. ಸಮಾಜದಲ್ಲಿ 'ಗರತಿ' ಎನಿಸಿಕೊಂಡು ಎಷ್ಟೋ ಮಹಿಳೆಯರು ತಮ್ಮ ಗಂಡಂದಿರಿಗೆ ಕುಟುಂಬಕ್ಕೆ ತಿಳಿಯದೆ ಗೌಪ್ಯವಾಗಿ ಅಕ್ರಮ ಸಂಬಂಧ ಹೊಂದುವಂತಹ ಸಮಾಜದ ವಿಪರ್ಯಾಸವನ್ನು ತಿಳಿಸುತ್ತಾರೆ.

ತನ್ನ ತಾಯಿ 'ಸೂಳೆ'ಯ ಮನೆಯವಳಲ್ಲಿ, ನಾವು ಬ್ರಾಹ್ಮಣರು. ನನ್ನ ತಾಯಿ ಅನಾಥೆಯಾಗಿದ್ದಾಗ ಸಂಗವ್ವ ಈ ವೃತ್ತಿಗೆ ತಂದು ನನ್ನ ಭವಿಷ್ಯವನ್ನು ಹಾಳು ಮಾಡಿದುದರ ಬಗ್ಗೆ ಸಂಗವ್ವನಲ್ಲಿ ಆಕ್ರೋಸ, ಸಿಟ್ಟು ಇದೆ. ಚಂದ್ರ ಮದುವೆಯಾಗ ಬಯಸಿ ಇತರರ ಹಾಗೆ ಗಂಡನೊಡನೆ ಸಂಸಾರ ನಡೆಸುವ ಆಸೆ ಇದ್ದರೂ, ಸಮಾಜ ಮಾತ್ರ ನೀನು ಸೂಳೆ, ನಿನ್ನನ್ನು ಯಾರೂ ಮದುವೆಯಾಗುವುದಿಲ್ಲ. ನಿನ್ನ ದೇಹ ಮಾತ್ರ ಬೇಕೆ ಹೊರತು, ನೀನು ಬೇಡ ಎಂಬ ಮಾತುಗಳು ವೇಶ್ಯಾ ಬದುಕಿನಿಂದ ಬಿಡುಗಡೆ ಪಡೆಯಲು ಈ ವ್ಯವಸ್ಥೆ ಅವಕಾಶ ನೀಡದಿರುವುದನ್ನು ಕಾಣಬಹುದು.

'ನಾವು ಸೂಳೇರಲ್ಲ' ಎಂದು ಚಂದ್ರ ಸಮಾಜಕ್ಕೆ ಸಾರಿ ಹೇಳಿದರೂ ಅದು ನಂಬದಿದ್ದಾಗ ಚಂದ್ರ ಕೊನೆಯಲ್ಲಿ ವಿಧಿಯಲ್ಲದೆ ವೇಶ್ಯೆಯಾಗಿ ಬದುಕಲು ಇಷ್ಟವಿಲ್ಲದೆ, ಮದುವೆಯಾಗಿ ಜೀವಿಸಲು ಸಮಾಜದಲ್ಲಿ ಅವಕಾಶವಿಲ್ಲದ ಇಂತಹ ಸನ್ನಿವೇಶದಲ್ಲಿ ಅತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕಾದಂಬರಿಕಾರ್ತಿ ಹೆಣ್ಣಿನ ನಿಕೃಷ್ಟ ಬದುಕಿನ ಪರಿವರ್ತನೆಗೆ ಸಮಾಜದಲ್ಲಿ ಮಾನ್ಯತೆ ಸಿಗದಿದ್ದಾಗ ಆಕೆ ಇದರಲ್ಲಿ ಜೀವಿಸಲು ಇಷ್ಟವಿಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುವ ಸಾಹಸ ಮಾಡಿಸುತ್ತಾಳೆ.

'ಮಸಣದ ಹೂವು' ಕಾದಂಬರಿಯಲ್ಲಿ ತ.ರಾ.ಸುರವರು ವೇಶ್ಯೆಯ ಈ ರೀತಿಯ ಬದುಕಿಗೆ ಆಕೆಯ ಸುತ್ತಲಿನ ಸಮಾಜದ ಸಮಸ್ಯೆ ಮತ್ತು ಪುರುಷ ವರ್ಗದ ದಬ್ಬಾಳಿ, ಅವರ ಕಾಮುಖ ಭಾವನೆಗಳು ಕಾರಣವಾಗಿವೆ. ಆದ್ದರಿಂದಲೇ ಕಾದಂಬರಿಕಾರರು ತಮ್ಮ ಕಾದಂಬರಿಯ ಕೊನೆಯಲ್ಲಿ ಈ ವೇಶ್ಯಾ ದಂಧೆಗೆ ಸಮಾಜದಲ್ಲಿನ ಕಾರಣಗಳನ್ನು ಸೂಚಿಸುತ್ತಾರೆ. ಬಂಡವಾಳಶಾಹಿ, ಆರ್ಥಿಕ ವಿಷಮತೆ, ಬಡತನ, ಹೆಣ್ಣನ್ನು ನೋಡುವ ಗಂಡಿನ ದೃಷ್ಟಿಧೋರಣೆಯನ್ನು ತಿಳಿಸುತ್ತಾರೆ. ಹೆಣ್ಣಿನ ಈ ರೀತಿಯ ದುರಂತದ ಬದುಕಿಗೆ

ಗಂಡೇ ಮೂಲ ಕಾರಣ. ಆತ ಬದಲಾದಂತೆ ಈ ಸಮಸ್ಯೆಯು ಸಡಿಲಗೊಳ್ಳುತ್ತದೆಂದು ಹೇಳುವ ಮೂಲಕ ತಮ್ಮ ಕಾಳಜಿಯನ್ನು ಸ್ತ್ರೀಪರವಾಗಿಸಿ ಅವಳ ಸುತ್ತಲಿನ ಸಮಸ್ಯೆಗಳತ್ತಾ ಬೆಳಕು ಚೆಲ್ಲುತ್ತಾರೆ.

ತ್ರಿವೇಣಿಯವರ 'ಹೂವುಹಣ್ಣು' ಕಾದಂದರಿಯು 'ಹೆಣ್ಣು ಎಷ್ಟೆ ಮಾನಗಳಿಗೆ ಅಂಜಿ ಬದುಕಿದರೂ ಆ ಸಮಾಜ ಬಾಳಿಸುವುದಿಲ್ಲ;' ಎಂಬ ಮಾತುಗಳಲ್ಲಿ ಹೆಣ್ಣಿನ ಈ ಬದುಕಿಗೆ ಕಾರಣ ಸಮಾಜ ನೋಡುವ ದೃಷ್ಟಿ ಕೋನ, ವಿಧವೆಯಾಗಿ ಬಡತನಕ್ಕೆ ಸಿಕ್ಕಿದ್ದ ಅನಾಥೆಯೊಬ್ಬಳು ತನ್ನ ವಂಶದ ಕುಡಿಯನ್ನು ಸಾಕಲು ನಡೆಸುವ ಹೋರಾಟದಲ್ಲಿ ಕಾಮುಕರ ಕಣ್ಣಿನಿಂದ ಪಾರಾಗಲು ಅರಿಯದೇ ಅನಿವಾರ್ಯವಾಗಿ ವೇಶ್ಯಾ ಜೀವವನ್ನು ನಡೆಸಬೇಕಾಗುವುದರ ಪರಿಸ್ಥಿತಿಯನ್ನು ಚಿತ್ರಿಸುವ ಕಾದಂಬರಿ.

ಪರಿಸ್ಥಿತಿ ಮನಸ್ಥಿತಿಗಳ ಒತ್ತಡಗಳಿಂದ ವ್ಯಕ್ತಿಗಳು ಆ ದಾರಿಯತ್ತ ನಡೆದಾಗ ಸ್ತ್ರೀಯನ್ನು ಮಾತ್ರವೇ ಹೊಣೆಯಾಗಿಸಿ, ನಿರ್ದಯವಾಗಿ ತಿರಸ್ಕರಿಸುವ ಸಾಂಪ್ರದಾಯಿಕ ದೃಷ್ಟಿಯನ್ನು ಅವರು ಖಂಡಿಸಿದ್ದಾರೆ.

ನಾವಿರುವುದು ಮೈಮಾರಿಕೊಳ್ಳುವುದಕ್ಕೆ ಹೊರತು ಮನಸ್ಸನ್ನಲ್ಲ ಎಂದು ದೃಢವಗಿ ನಂಬಿ ತನ್ನ ಕುಲ ಕಸಬನ್ನು ನಿಷ್ಠೆಯಿಂದ ನಡೆಸಿಕೊಂಡು ಹೋಗುವ ಮಂಜುಳೆಯ ತಾಯಿ ಭವಾನಿ ಕೂಡ ಗರತಿಯಂತೆ ಬಾಳಿದವಳು, ಬಾಳುಕೊಟ್ಟವನಿಗೆ ಮೈಮನಸ್ಸುಗಳೆರಡನ್ನೂ ಧಾರೆಯೆರೆದವರು. ಆದರೆ ತಾಯಿಗಿಂತ ಹೆಚ್ಚು ವೈವಿಧ್ಯ-ಮಾಯವಾದ, ಸಮೃದ್ಧವಾದ, ಶ್ರೀಮಂತ ಜೀವನ ನಡೆಸಿದ ಮಂಜುಳೆ ತನ್ನ ಮೈಮನಸ್ಸುಗಳೆರಡರ ಮೇಲೂ ತಾನೇ ನಿಯಂತ್ರಣ ಸಾಧಿಸಿಕೊಂಡಳು. ತನ್ನ ಮೈ ಬಯಸಿದ ಮತ್ತು ಮನಸ್ಸು ಆಶಿಸಿದ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಪಡೆದುಕೊಂಡವಳು ಮಂಜುಳೆ.

ಮಂಜುಳೆಯ ಪ್ರತಿರೂಪದಂತೆ ಬೆಳೆಯುವ ವಿದ್ಯಾವಂತೆ ಚಂದ್ರಿಯ ಕನಸುಗಳು ಮಂಜುಳೆಯ ಆತ್ಮವೃತ್ತಾಂತವನ್ನು ಓದಿದ ನಂತರ ಗರಿಗೆದರುತ್ತವೆ. 'ಮರ್ಯಾದೆಯಿಂದ ಬದುಕು ನಡೆಸಬೇಕು ಎಂಬ ಆಸೆ ನನ್ನದು' ಎನ್ನುವ ಚಂದ್ರಿಯ ಕೊನೆಯ ಮಾತುಗಳು ಅವಳ ಬಾಳಿನ ಅನ್ವೇಷಣೆಯ ಹಾದಿಯನ್ನು ಸೂಚಿಸುತ್ತವೆ. ವಿವಾಹ ಜೀವನ ಗರತಿಯಿರಲಿ ವೇಶ್ಯಾಕುಲದ ಗರತಿಯಿರಲಿ ತುಂಬ ಗೌರವದಿಂದ ಆ ಪಾತ್ರಗಳ ಮಾನಸಿಕ ಲೋಕವನ್ನು ಒಳಹೊಕ್ಕು ನೋಡುವ ಕಾರಂತರು ಸ್ತ್ರೀ ಮನಸ್ಸನ್ನು ಸಮರ್ಥವಾಗಿ ಅರ್ಥ ಮಾಡಿಕೊಳ್ಳಬಲ್ಲರು.

ಬಸವರಾಜಕಟ್ಟಿ ಮುನಿಯವರು ಬೀದಿಯಲ್ಲಿ ಬಿದ್ದವಳು ಕಾದಂಬರಿಯಲ್ಲಿ ಯಮುನಾಳ ಈ ಸ್ಥಿತಿಗೆ ಬಡತನ, ಗೌಡರ ದಬ್ಬಾಳಿಕೆಯಾಗಿದೆ. ಮದುವೆಯಾಗಿ ಗಂಡನಿಂದ ಪರಿತ್ಯಕ್ತೆಯಾದ ಗೌಡರ ಸ್ವಾರ್ಥಕ್ಕೆ ಬಲಿಯಾಗಿ ಸಾವಿನ ಅಂಚಿನಲ್ಲಿದ್ದ ಯಮುಳಾನ್ನು ಬದುಕಿಸಿದ್ದ ಈ ವೇಶ್ಯಾವ್ಯವಸ್ಥೆಯ ಬಗ್ಗೆ ತನ್ನ ಸಿಟ್ಟು ಆಕ್ರೋಶದಿಂದ ಹುಚ್ಚಿಯಾಗಿ ತನ್ನ ಪ್ರೀತಿಯ ರಾಮುವಿಗಾಗಿ ಹಪಹಪಿಸುತ್ತಾಳೆ.

ವೇಶ್ಯಾವೃತ್ತಿಯು ಒಂದು ಕಳಂಕ ಹಾಗೂ ಅನೈತಿಕ ವೃತ್ತಿಯಾಗಿ ಪರಿಗಣಿಸಲ್ಪಟ್ಟಿದೆ. ಒಂದು ಕುಟುಂಬದ ಹೆಣ್ಣು ಇಲ್ಲವೆ ಗಂಡು ಇಷ್ಟವಿಲ್ಲದೆ ಅನಿವಾರ್ಯವಾಗಿಯೇ ಇಲ್ಲವೆ ಉದ್ದೇಶ ಪೂರಕವಾಗಿ ಈ ಲೈಂಗಿಕ ವೃತ್ತಿಗೆ ಒಳಗಾದರೆ ಅಂತಹ ಮನೆತನಗಳಿಗೆ ತುಂಬ ಕೆಟ್ಟ ಹೆಸರು. ಇದರಿಂದ ಎಷ್ಟೋ ಕುಟುಂಬಗಳು ಸಹ ತಮ್ಮ ಮುಂದಿನ ಮಕ್ಕಳ ಭವಿಷ್ಯದ ಬಗ್ಗೆ ಗಾಢವಾಗಿ ಚಿಂತಿಸುತ್ತಾರೆ.

ಮಸಣದ ಹೂವು ಕಾದಂಬರಿಯಲ್ಲಿ ಶಾಂತ ತನ್ನ ಅಲಂಕಾರಿಕಾ ವಸ್ತುಗಳಗೆ ಆಸೆಗೆ ಬಲಿಯಾಗಿ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಇದರಿಂದ ಗರ್ಭಿಣಿಯಾದಾಗ ಆಕೆಯ ಮನೆಯವರಿಗೆ ನೋವು, ಸಂಕಟ, ಅವಮಾನಗಳು ಉಂಟಾಗುತ್ತದೆ. ಇದರಿಂದ ಆಕೆಯನ್ನು ಮನೆಯಿಂದ ಹೊರ ಹಾಕಿದ್ದರಿಂದ ಸಹಜವಾಗಿಯೇ ಅವಳು ವೇಶ್ಯಾದಂಥೆಗೆ ಬಲಿಯಾಗುತ್ತಾಳೆ.

ವೇಶ್ಯೆಯರು ಅನೇಕ ರೋಗಗಳಿಗೆ ಕಾರಣರಾಗುವುದರ ಜೊತೆಗೆ ಇತರರ ಮೂಲಕ ಸಮಾಜದಲ್ಲಿ ರೋಗರುಜಿನಗಳು ಹರಡಲು ಕಾರಣರಾಗುತ್ತಾರೆ. ವೇಶ್ಯೆಯರು ಗುಹ್ಯ ರೋಗಗಳನ್ನು ಹರಡುವ ಕೇಂದ್ರ ಬಿಂದುಗಳು ವೇಶ್ಯೆಯೊಂದಿಗೆ ಸಂಭೋಗ ಮಾಡುವುದರಿಂದ ಗುಹ್ಯರೋಗಗಳು ಅಂಟಿಕೊಳ್ಳುತ್ತವೆ. ಗುಹ್ಯರೋಗದಲ್ಲಿ ಪರಂಗಿ ಹಣ್ಣಿನರೋಗ ಮತ್ತು ಮೇಹರೋಗಗಳು, ಕಾಂಕ್ರಾಯ್ಡ್ ರೋಗಗಳು ಸೃಷ್ಟಿಯಾಗುತ್ತದೆ.

ಮಸಣದಹೂವು ಕಾದಂಬರಿಯಲ್ಲಿ ಬರುವಂತಹ ವೆಂಕಟ ಮನೋರೋಗಿಯಾಗಿ ಇತರರ ಸಾವಿಗೆ ಕಾರಣವಾಗಿ ಆತ್ಯಹತ್ಯೆ ಮಾಡಿಕೊಳ್ಳುತ್ತಾಳೆ. ದೇವೀರಿ ಮೈಕೈಗಳು ಊತಬಂಧು ಅದರಿಂದ ರಕ್ತಸೋರುವಿಕೆಯ ಮೂಲಕ ಅತಿಯಾದ ಯಾತೆಯಿಂದ ಸಾಯುತ್ತಾಳೆ. ಲಕ್ಷ್ಮಿಗೆ ಬಾಯಿಯಲ್ಲಿ ಕಾಣಿಸಿಕೊಂಡ ಕೆರೆದ ಗಾಯಗಳು ರಣವಾಗಿ ಆಕೆಯನ್ನೇ ಬಲಿತೆಗೆದುಕೊಳ್ಳುತ್ತದೆ. ಶಾಂತ ತನ್ನ ಗರ್ಭತೊಳಿಸಿದಾಗ ಅತಿಯಾದ ರಕ್ತಸ್ರಾವದಿಂದಾಗಿ ಮರಣ ಹೊಂದುತ್ತಾಳೆ.

ಸುಂದರರಾಜುವಿನ ಅನೈತಿಕ ಸಂಬಂಧದಿಂದ ಆತನಿಗೆ ಬಂದ ರೋಗ ಹೆಂಡತಿ ಮತ್ತು ಮಗುವಿಗೆ ಬಂದು ಅವರು 'ಸಿಫ್‌ಲಿಸ್' ರೋಗದಿಂದ ಸಾವನ್ನು ಹೊಂದುತ್ತಾರೆ.

ವೇಶ್ಯಾವಾಟಿಕೆಯು ವಿಘಟಿತ ವ್ಯಕ್ತಿತ್ವಕ್ಕೆ ಎಡೆ ಮಾಡುತ್ತದೆ. ಇದರಿಂದ ಉಂಟಾಗುವ ವ್ಯಕ್ತಿತ್ವ ನಾಶವು ದುರಸ್ತಿಗೊಳಿಸಲಾಗದುದು. ಥಾಮಸ್ ಅವರು "ವೇಶ್ಯಯು ಜಾರಿದ ಹುಡುಗಿ ಎಂದು ಹೇಳಲಾಗುವುದಿಲ್ಲ, ಏಕೆಂದರೆ ಅವಳು ಎದ್ದೆ ಇರಲಿಲ್ಲವಲ್ಲ. ಅನೈತಿಕತೆವುಳ್ಳವಳೆಂದು ಹೇಳಾಗುವುದಿಲ್ಲ, ಏಕೆಂದರೆ ನೈತಿಕತೆಯೇ ಇರಲಿಲ್ಲ" 5 ಎಂದು ಹೇಳಿರುವುದು ಸೂಚ್ಯವಾಗಿದೆ.

ಇವರ ನಡತೆ, ನೈತಿಕತೆ ಮತ್ತು ವ್ಯವಹಾರಗಳು ಸುಯೋಗ ವಿರೋಧಿಯಾದವು ಹಾಗೂ ಪ್ರತ್ಯೇಕ ನಮೂನೆಯವು ಇಂತಹ ನಡತೆಯನ್ನು ನಿರ್ಮೂಲನೆಗೊಳಿಸುವುದರಿಂದಾಗಲೀ ಸುಧಾರಿಸುವುದಾಗಲೀ ಆಸಾಧ್ಯವಾದ ಕೆಲಸ.

ವೇಶ್ಯಾವೃತ್ತಿಯು ಮಾನವ ಜನಾಂಗಕ್ಕೆ ಕೆಟ್ಟ ಹೆಸರು ತರುತ್ತದೆ. ಈ ಸಮಸ್ಯೆಯಿರುವ ಸಮಾಜದಲ್ಲಿ ನೀತಿಗೆ, ನೈತಿಕ ಮೌಲ್ಯಗಳಿಗೆ ಬೆಲೆ ಇರುವುದಿಲ್ಲ. ಅಂತಹ ಕಡೆಗಳಲ್ಲಿ ಸಾಮಾಜಿಕ ಮೌಲ್ಯಗಳಿಗೆ ಬೆಲೆಯಿರುವುದಿಲ್ಲ ವೇಶ್ಯಾದಂಧೆಯ ಸಮಾಜಗಳು ಸುರಕ್ಷಿತವಗಿ ಹೆಚ್ಚು ಕಾಲ ಬಾಳುವುದಿಲ್ಲ. ಅಲ್ಲಿ ಮನುಷ್ಯನ ಮೃಗೀಯ ಗುಣ, ಪುರುಷನಿಗೆ ಮಹಿಳೆ ಕಾಮುಖದ, ಭೋಗಕ್ಕೆ ಸಿದ್ಧಾವಾಗಿರು ಸರಕಾಗುತ್ತಾಳೆ. ಮಹಿಳೆಗೆ ಪುರುಷ ಹಣನೀಡುವ ಮತ್ತು ತೃಪ್ತಿ ನೀಡುವ ವ್ಯಕ್ತಿಯಾಗಿರುತ್ತಾನೆ. ಆಗ ಒಬ್ಬರ ಮೇಲೆ ಒಬ್ಬರ ದಬ್ಬಾಳಿಕೆ, ಕ್ರೂರಹಿಂಸೆಗಳನ್ನು ನಡೆಸುತ್ತಾರೆ. ಇದು ಒಂದು ಸಮುದಾಯದ, ಒಂದು ರಾಷ್ಟ್ರದ ಮಾನವೀಯ ನೈತಿಕ ಮೌಲ್ಯಗಳ ಅಧಪಥನವನ್ನು ಸೂಚಿಸುತ್ತದೆ. ಗಂಡ ಹೆಂಡಿರಲ್ಲಿ, ಕುಟುಂಬ ಮತ್ತು ಮಕ್ಕಳು ಸಮಾಜದಲ್ಲಿ ಪ್ರೀತಿ, ವಾತ್ಸಲ್ಯ, ಅರಿವುಗಳು ನಾಶವಾಗಿ ವೈಮನಸ್ಸು ಸೃಷ್ಟಿಯಾಗುತ್ತದೆ. ಇದರಿಂದ ಜೀವನದಲ್ಲಿ ಜುಗುಪ್ಸೆಯುಂಟಾಗಿ ಆತ್ಮಹತ್ಯೆ ಕೊಲೆಗಳೆಂಬ ಅಹಿತಕರ ಘಟನೆಗಳಲ್ಲಿ ಪರ್ಯಾವಸಾನವಾಗಬಹುದು. ಇಂತಹ ವೇಶ್ಯಾ ದಂಧೆಯಿಂದಾಗಿ ಕುಟುಂಬ ಸಮಾಜಗಳು ವಿಘಟಿತವಾಗುತ್ತವೆ.

ಸಂತಾನಹೀನತೆ ವೇಶ್ಯ ವೃತ್ತಿಯಿಂದಾಗುವ ದುಷ್ಪರಿಣಾಮವಾಗಿದೆ. ವೇಶ್ಯೆಯಲ್ಲಿ ಎಷ್ಟೋ ಹೆಣ್ಣು ಮಕ್ಕಳು ತಾಯಿಯಾಗಬೇಕೆಂದು ಸಹಜವಾಗಿ ಬಯಸುತ್ತಾಳೆ. ತನ್ನ ಆತ್ಮ ತೃಪ್ತಿಗಾಗಿಯೋ, ಇಲ್ಲವೇ ತನ್ನ ವೃತ್ತಿಯನ್ನು ಮುಂದುವರೆಸುವುದ್ದಾಗಿಯೋ ಮಕ್ಕಳನ್ನು ಬಯಸುತ್ತಾಳೆ. ಮಸಣದ ಹೂವು ಕಾದಂಬರಿಯ ಪುಟ್ಟಲಕ್ಷ್ಮಿಗೆ ವೇಶ್ಯಾ ಬದುಕಿನ

5 ಸಾಮಾಜಿಕ ಸಮಸ್ಯೆಗಳು ಎಂ.ನಾರಾಯಣ್ ಪುಟ. ಸಂಖ್ಯೆ. 387

ಪರಿಣಾಮದಿಂದಾಗಿ ರೋಗಿಷ್ಟ ಮಗುವಿಗೆ ಜನ್ಮ ನೀಡುತ್ತಾಳೆ. ಆದರೆ ಅದರ ನೋವು ಸಂಕಟ ನೋಡಿ ತಾನೇ ಬೇಗ ಮರಣಹೊಂದಿದಾಗ ಆ ಮಗುವಿನ ಬಗ್ಗೆ ಅಲ್ಲಿನ ಜನರು ನಿಕೃಷ್ಟವಾಗಿ ತಾತ್ಸಾರದಿಂದ ಕಾಣುತ್ತಾರೆ. ಕೊನೆಗೆ ಆ ಮಗು ಸಾಯುತ್ತದೆ. "ಮೈಮನಗಳ ಸುಳಿ" ಯಲ್ಲಿ ಕಾದಂಬರಿಯ ಮಂಜುಳ ಮಕ್ಕಳಿಗಾಗಿ ಹಂಬಲಿಸಿದರೆ ಆಕೆಯ ತಂಗಿ ಕಪಿಲೆ ಮೂರು–ನಾಲ್ಕು ಮಕ್ಕಳಿಗೆ ಜನ್ಮ ನೀಡಿ ಸತ್ತನಂತರ , ನಂತರದ ಮಕ್ಕಳು ಉಳಿಯುತ್ತವೆ.

ಮಾನ ಮತ್ತು ಧನಹಾನಿಯು ಮಹಿಳೆ ಮತ್ತು ಪುರುಷರಿಬ್ಬರಿಗೂ ಉಂಟಾಗುತ್ತದೆ. ವೇಶ್ಯೆಯಾಗಲಿ, ವೇಶ್ಯೆಯರ ಸಹವಾಸ ಮಾಡುವಂತಹ ಗಂಡಸರಿಗಾಗಲಿ ಮಾನದ ಬಗ್ಗೆ ಕಾಳಜಿ ಇಲ್ಲ. ಸ್ತ್ರೀ ಹಣಕ್ಕೋಸ್ಕರ ಅಥವಾ ಜೀವನಾಧಾರಕ್ಕೋಸ್ಕರ ದೇಹವನ್ನು ಮಾರಿಕೊಳ್ಳುವುದು ಅತ್ಯಂತ ಹೇಯಕೃತ್ಯ. ಶನಿಸಂತಾನದ ಸರಸ್ವತಮ್ಮ ಹಣಕ್ಕಾಗಿ ಈ ವೇಶ್ಯಾದಂಧೆಗೆ ಇಳಿದರೂ ಸಹ ಅವರ ಹೆಣ್ಣು ಮಕ್ಕಳು ಶಾಲೆಗೆ ಹೋಗುವಾಗ ಇತರರ ನಿಂದನೆಗೆ ಅವಮಾನಕ್ಕೆ ಒಳಗಾಗುತ್ತಾರೆ.

ಮೈಮನಗಳ ಸುಳಿಯಲ್ಲಿನ ಶಾಂತ ಕಾಳಿಂಗಯ್ಯನ ಸ್ನೇಹ, ಆತನ ಮೋಹಕಮಾತಿಗೆ ಬಲಿಯಾಗಿ ತನ್ನ ಆಸ್ತಿಯನ್ನು ಕಳೆದುಕೊಳ್ಳುತ್ತಾಳೆ. ಮಸಣದ ಹೂವು ಕಾದಂಬರಿಯ ಸರಸ್ವತಿ ಶೀಲದ ಜೊತೆಗೆ ಹಣವನ್ನು ಪೋಲಿಸ್‌ನಿಂದ ಕಳೆದುಕೊಳ್ಳುತ್ತಾಳೆ. ವಾಸ್ತವ ಪ್ರಪಂಚದಲ್ಲೂ ಹೆಣ್ಣು ಗಂಡಿಬ್ಬರೂ ಮಾನ, ಧನವನ್ನು ಕಳೆದುಕೊಳ್ಳುವುದರ ಜೊತೆಗೆ ಅವರ ಸಮಾಜದಲ್ಲಿ ಕಂಟಕ ಪ್ರಾಯರಾಗುತ್ತಾರೆ.

ಈ ವೇಶ್ಯಾದಂಧೆಯಿಂದಾಗಿ ಸ್ತ್ರೀಯರನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಗಂಡ ತಲೆಹಿಡುಕರು, ಸಮಾಜದ ಇತರ ವರ್ಗದವರು, ಅಧಿಕಾರಿಗಳು, ಮುಂತಾದವವರು ಮಹಿಳೆಯನ್ನು ತುಂಬಾ ಹೀನಾಯವಾಗಿ ನಡೆಸಿಕೊಂಡು ಹೆಣ್ಣಿನ ಬಗೆಗೆ ಪ್ರೀತಿಗೌರವದ ಬದಲು ತಾತ್ಸಾರ, ಕೀಳುದೃಷ್ಟಿ ಬೆಳೆಯುತ್ತದೆ.

ಈ ರೀತಿಯೂ ವೇಶ್ಯಾ ಸಮಸ್ಯೆಗೆ ಹಿನ್ನಲೆಗಳು ಸಾಕಷ್ಟು ಇರುವಂತೆ, ಆ ಸಮಸ್ಯೆಯು ಸಮಾಜದ ಎಲ್ಲಾ ಹಂತಗಳಲ್ಲೂ ಬದಲಾವಣೆಗಳನ್ನು ಉಂಟುಮಾಡುತ್ತದೆ.

ಅಧ್ಯಾಯ-6

ಪ್ರಗತಿಶೀಲ ಕಾದಂಬರಿಕಾರರ ದೃಷ್ಟಿಯಲ್ಲಿ ವೇಶ್ಯಾ ವಿಮೋಚನೆ

ಭಾರತೀಯ ಸಮಾಜ ಪ್ರಾಚೀನ ಕಾಲದಿಂದಲೂ ಮೂಲಭೂತ ಸಮಸ್ಯೆಗಳನ್ನು ಉಳಿಸಿಕೊಂಡು ಬಂದಿವೆ. ಜೊತೆಗೆ ನಾಗರೀಕತೆ, ಜಾಗತೀಕರಣಗಳ ಪ್ರಭಾವದಿಂದ ಹೊಸ ರೀತಿಯಾಗಿ ಸಮಸ್ಯೆಗಳು ಸೃಷ್ಟಿಯಾಗಿವೆ. ಮೂಲವಾಗಿ ಸೃಷ್ಟಿಗೊಂಡು ಹಾಗೆ ಉಳಿದು ಬೆಳೆದು ಬಂದಿರುವ ಸಮಸ್ಯೆಗಳಲ್ಲಿ ಹೆಣ್ಣಿನ ಲೈಂಗಿಕ ದೌರ್ಜನ್ಯವು ಒಂದಾಗಿದೆ. ವೈಜ್ಞಾನಿಕ ಸಮಾನ ಶಿಕ್ಷಣ, ಆ ಮೂಲಕ ಅವರಲ್ಲಿ ತಿಳುವಳಿಕೆ ಮೂಡಿ ತಮ್ಮ ಬದುಕನ್ನು ಹಸನು ಮಾಡಿಕೊಳ್ಳುವಂತಹ ಸನ್ನಿವೇಶದಲ್ಲೂ ಇಂತಹ ಸಮಸ್ಯೆಗಳು ಗೌಪ್ಯವಾಗಿ ಅಕ್ಷರಸ್ಥರಲ್ಲೇ ನಡೆಯುತ್ತಿರುವುದು ವಿಪರ್ಯಾಸವಾಗಿದೆ. ಇಂತಹ ವೇಶ್ಯಾ ಸಮಸ್ಯೆಯನ್ನು ಹೋಗಲಾಡಿಸಲು ಪುರುಷ ಮತ್ತು ಮಹಿಳೆಯರಿಬ್ಬರು ಸಾಕಷ್ಟ ಹೋರಾಟ ಮಾಡಿರುವುದು ಇದೆ. ಮಹಿಳ ಚಳುವಳಿಯ ಉದ್ದೇಶ ಇಂತಹ ಲೈಂಗಿಕ ಹಿಂಸೆಗಳನ್ನು ತಡೆಯುವುದಾಗಿದೆ. ಇದು ಇಡೀ ಪ್ರಪಂಚದಾದ್ಯಂತ ಚಳುವಳಿ ನಡೆದರೂ ಕೆಲವೊಂದು ಸರ್ಕಾರಗಳು ಈ ವೇಶ್ಯಾದಂಧೆಗೆ ಮುಕ್ತ ಅವಕಾಶಗಳನ್ನು ನೀಡಿದೆ.

ಧರ್ಮದ ಹೆಸರಿನಲ್ಲಿ ಆಚರಿಸಿಕೊಂಡು ಬಂದಿರುವ 'ದೇವದಾಸಿಪದ್ಧತಿ' ವೇಶ್ಯಾ ಸಮಸ್ಯೆಗೆ ಸೃಷ್ಟಿಗೆ ಕಾರಣವಾಗಿದೆ. ಇಂತಹ ನಂಬಿಕೆ ಆಚರಣೆಗಳ ಬಗ್ಗೆ ಅರಿವನ್ನು ಮೂಡಿಸಿ ಅಂತಹ ಹೆಣ್ಣು ಮಕ್ಕಳನ್ನು ಶಾಲೆಗೆ ಸೇರಿಸಿ ಅವರ ಶಿಕ್ಷಣಕ್ಕೆ ಆಧ್ಯತೆ ನೀಡಲಾಗಿದೆ. ಇಂತಹ ದೇವದಾಸಿ ಪದ್ಧತಿಯನ್ನು ಹೊರಹಾಕಲು ಹಲವಾರು ಕಾನೂನುಗಳು ಸೃಷ್ಟಿಯಾಗಿವೆ. ಇದಕ್ಕೆ ಬಲಿಯಾಗುವ ಅಮಾಯಕ, ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳನ್ನು ತಡೆಯುವ ಮೂಲಕ ಅವರಲ್ಲಿ 'ಮದುವೆ' ಎಂಬ ಪದ್ಧತಿಯಲ್ಲಿ ಸೆರೆಹಿಡಿಯುವ ಪ್ರಯತ್ನ ನಡೆಸಲಾಯಿತು.

"ಅತ್ಯಂತ ಅಮಾನವೀಯವಾದ ಆಚರಣೆಯಾಗಿ ಕಂಡುಬರುವ ವೇಶ್ಯಾವೃತ್ತಿಯನ್ನು ತಡೆಯಲು ಮೊಟ್ಟಮೊದಲ ಬಾರಿಗೆ 1923ರಲ್ಲಿಯೇ ಬಾಂಬೆ ಪ್ರಿವೆನ್‌ಷನ್ ಆಫ್ ಪ್ರಾಸ್ಟಿಟ್ಯೂಷನ್ ಆಕ್ಟನ್ನು ಜಾರಿಗೊಳಿಸಲಾಯಿತು. ಮುಂದೆ 1930 ರಲ್ಲಿ ಮದ್ರಾಸ್‌ನ ಪ್ರೆಸಿಡೆನ್ಸಿ, 1933 ರಲ್ಲಿ ಕಲ್ಕತ್ತ ಪ್ರೆಸಿಡೆನ್ಸಿಗಳಲ್ಲಿ ಇದು ಜಾರಿಗೆ ಬಂದಿತು. ಮೈಸೂರು ಸಂಸ್ಥಾನಗಳಲ್ಲಿ ವೇಶ್ಯಾವೃತ್ತಿಗೆ ಪೂರಕವಾಗಿದ್ದ ಧಾರ್ಮಿಕ ಪದ್ಧತಿಗಳಾದ ದೇವದಾಸಿ ಹಾಗೂ ಗೆಜ್ಜೆಪೂಜೆ ಪದ್ಧತಿಗಳನ್ನು 1909-1910ರಲ್ಲಿಯೇ ನಿಷೇಧಿಸಲಾಯಿತು. ಧರ್ಮದ

ಹೆಸರಿನಲ್ಲಿ ವೇಶ್ಯಾವೃತ್ತಿಗೆ ಬಲಿಯಾಗುವ ಮಹಿಳೆಯರನ್ನು ರಕ್ಷಿಸುವ ಸಲುವಾಗಿ 'ದಿ ಬಾಂಬೆ ದೇವದಾಸಿ ಪ್ರೊಟೆಕ್ಷನ್ ಆಕ್ಟ್ ಅನ್ನು 1934ರಲ್ಲಿ ಮತ್ತು ಯು.ಪಿ. ನಾಯಕ ಹರ್ಲ್ಸ್‌ಪ್ರೊಟೆಕ್ಷನ್ ಆಕ್ಟ್ ನಂತಹ ಕಾನೂನುಗಳು ಜಾರಿಗೊಂಡವು" 1.

'ಕನ್ಯೆಯರ ಮತ್ತು ಮಹಿಳೆಯ ಅನೈತಿಕ ವ್ಯವಹಾರ ಪ್ರತಿ ಬಂಧಕ ಕಾಯ್ದೆ 1956'ರಲ್ಲಿ ಜಾರಿಗೆ ತರಲಾಯಿತು'.2 ಇದರಲ್ಲಿ ಸ್ತ್ರೀಯರನ್ನು ಅಪಹರಣ ಮಾಡಿ ಅವರನ್ನು ವೇಶ್ಯಾ ದಂಧೆಗೆ ನೂಕುವುದನ್ನು ತಡೆಯುವ ಉದ್ದೇಶ ಇದಾಗಿದೆ. ಅಪರಾಧ ಕಾನೂನಂತಿದ್ದು 'ಪಡಿಕಾಯ್ದೆ'ಯನ್ನು 1683 ರಲ್ಲಿ ಜಾರಿಗೆ ಬಂದಿದೆ. ಏಕೆಂದರೆ ಇಂದು ಸ್ತ್ರೀಯರಿ ಮೇಲಿನ ಅತ್ಯಾಚಾರ-ಅನಾಚಾರಗಳು ಹೆಚ್ಚಾಗಿ, ಆಕೆ ತನ್ನ ಕನ್ಯತ್ವ ಕಳೆದುಕೊಂಡು ಮನೆಗೆ ಬರಲು ಸಾಧ್ಯವಾಗದೆ, ಆತ್ಮಹತ್ಯೆ ಮಾಡಿಕೊಳ್ಳುವ ಇಲ್ಲವೆ ಇಂತಹ ವೇಶ್ಯಾ ಬದುಕಿಗೆ ಬರಲು ಕಾರಣವಾಗಿದೆ. ಇಂತಹ ಲೈಂಗಿಕ ಕಿರುಕುಳಗಳನ್ನು ತಡೆಯುವುದು ಅಗತ್ಯವಾಗಿದೆ.

ವೇಶ್ಯಾವೃತ್ತಿಯನ್ನು, ಅದನ್ನು ನಡೆಸುವ ಮಹಿಳೆಯನ್ನು ನಿಂದಿಸುತ್ತೇವೆ. ಆದರೆ ಈ ಬದುಕು ಮತ್ತು ಇಂತಹ ಸನ್ನಿವೇಶಕ್ಕೆ ಹೆಣ್ಣು ಬರುವುದಕ್ಕೆ ಸಮಾಜ, ಪುರುಷರೇ ಕಾರಣರಾಗಿರುತ್ತಾರೆ. ಇಂತಹ ಸಮಸ್ಯೆಯ ಮೂಲ ಅಪರಾಧಿಗಳನ್ನು ಹಿಡಿದಾಗ ಅವರಿಗೆ ಬಲವಾದ ಶಿಕ್ಷೆ ನೀಡಿದಾಗ ಇದರ ನಿರ್ಮೂಲನೆ ಅಗತ್ಯ. ಹೆಣ್ಣನ್ನು ಪುರುಷ ತನ್ನ ಗುಲಾಮಳನ್ನಾಗಿ ಮಾಡಿದೆ. ಸ್ತ್ರೀಯನ್ನು ದಾಸ್ಯ ಪಾಕದಲ್ಲಿ ಅದ್ದಿ, ಹೆಣ್ಣಿನ ಹೃದಯದಲ್ಲಿ ವೇಶ್ಯಾವೃತ್ತಿಯ ಬೀಜಾಂಕುರ ಮಾಡಿದ್ದಾರೆ. ಧರ್ಮಶಾಸ್ತ್ರ ವೇಶ್ಯಾವೃತ್ತಿಯ ಅಡಿಗಲ್ಲು! ಹೆಣ್ಣು ತನ್ನ ದಾಸಿ, ತನ್ನ ಕಾಮೋಪಬೋಗದ ಯಂತ್ರ ಅವಳು ಸ್ವತಃ ದುಡಿಯಬಾರದು, ಪುರುಷ ಇತ್ತುದನ್ನು ತಿಂದು ಬದುಕಬೇಕೆಂದು, ವಾಮನನಂತೆ ಬೆಳೆದು, ಬಾಗಿದ ಹೆಣ್ಣನ್ನು ಬಲಿಯಂತೆ ಪಾತಾಳಕ್ಕೆ ಮೆಟ್ಟಿದ ಪುರುಷ-ಅವನು ವೇಶ್ಯಾವೃತ್ತಿಯ ಪಿತಾಮಹಾ ಎಂದು ತ.ರಾ.ಸು ರವರ ತಮ್ಮ ಕಾದಂಬರಿ ಅಂತ್ಯದಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಈ ದುರಂತಕ್ಕೆ ಪುರುಷರೂ ಕಾರಣರಾಗುತ್ತಾರೆ.

ಇಂದಿನ ವೇಶ್ಯೆ, ವೇಶ್ಯೆಯಾಗಿರುವುದು ಯಾವುದೋ ಲಾಭದ ಆಸೆಯ ಭೂತ ತೃಪ್ತಿಗಲ್ಲ, ಹೊಟ್ಟೆ ಹೊರೆಯಲು; ಬದುಕಲು ಬೇರೆ ದಾರಿಯಿಲ್ಲದೆ. ಶತಶತಮಾನಗಳ ಅಜ್ಞಾನ, ಪುರುಷ ದಾಸ್ಯದ ಬಂದಿಯಾಗಿ, ಬೇರಾವ ರೀತಿಯಲ್ಲೂ ದುಡಿಯಲರಿಯದ ಹೆಣ್ಣು, ತಾನು ಮಾಡಬಹುದಾದ ಸುಲಭವಾದ ಕೆಲಸ ಮೈಯನ್ನು ಮಾರಿ ಬದುಕುತ್ತದೆ. ಅವಳು ಕುಟುಂಬದ ಸಮಸ್ಯೆಗೆ ಬಲಿಯಾಗಿ ಸಮಾಜ ಬಾಹಿರ ಚಟುವಟಿಕೆಗೆ ಬೀಳುತ್ತಾಳೆ.

1 ಮಹಿಳಾ ಚಳುವಳಿ ಪ್ರಸಾರಾಂಗ ಪು.ಸಂ. 119

2 ಮಹಿಳಾ ಚಳುವಳಿ ಪ್ರಸಾರಾಂಗ ಪು.ಸಂ. 121

ವೇಶ್ಯಾವೃತ್ತಿಗೆ ಮೂಲವಾಗಿ ಬುನಾದಿಯಾಗಿರು ಧರ್ಮ, ಬಂಡವಾಳಶಾಹಿ, ವಿಷಮ ಸಮಾಜ ವ್ಯವಸ್ಥೆ, ಅರಸೋತ್ತಿಗೆ ಸಾಮ್ರಾಜ್ಯಶಾಹಿ ಇವೆಲ್ಲವೂ ಕಾರಣವಾಗಿರುವುದರಿಂದ ಇದರ ನಿರ್ಮೂಲನೆ ಅಗತ್ಯ. ಶೋಷಣೆ ಮಾಡುವವರ ನಿರ್ಮೂಲನೆ ಸಮಾಜದಲ್ಲಿನ ಆರ್ಥಿಕ ಸಾಮರ್ಥ್ಯ ವಿಕೇಂದ್ರೀಕರಣ ಆಗಬೇಕು. ಅಧಿಕಾರವಂತರು, ಶ್ರೀಮಂತರು ತಮ್ಮ ತಮ್ಮ ಸ್ವಾರ್ಥಕ್ಕೆ ಲೈಂಗಿಕ ತೃಪ್ತಿಗೆ ಬಳಸಿಕೊಂಡು ಆಕೆಯ ಬದುಕನ್ನೇ ನಾಶವಾಗುವ ಸ್ಥಿತಿ ಬಂದಿದೆ. ಮದುವೆಯಾಗದ ಹೆಣ್ಣು ತನ್ನ ಕಾಮತೃಪ್ತಿಗಾಗಿಯು ಈ ವೃತ್ತಿಗೆ ಜಾರುತ್ತಾಳೆ. ಅದೇ ಮದುವೆಯಾಗದ ಗಂಡು ತನ್ನ ಆಸೆಗಾಗಿ ಹಣ ನೀಡಿ ತೃಪ್ತಿ ಪಡೆದರೆ ಇವನಿಗೆ ಬಲಿಯಾದ ಹೆಣ್ಣಿನ ಸ್ಥಿತಿ ಶೋಚನೆಯಾಗಿದೆ. ಹಾಗೂ ಸ್ತ್ರೀ–ಪುರುಷರಿಬ್ಬರಲ್ಲೂ ಇರುವ ಈ ಅತಿಯಾದ ಕೌಟುಂಕ ಭಾವನೆ ಕಡಿಮೆಯಾಗಬೇಕು. ತನ್ನ ಮನಸ್ಸಿನ ಕೆಟ್ಟ ಯೋಚನೆಯ ಬಗ್ಗೆ ಅರಿವುಬೇಕು. ಮದುವೆಯಾಗಿ ಹೆಣ್ಣಿನ ಬದುಕಿನ ದಾರಿಯನ್ನು ತೋರಿಸಿ ಒಳ್ಳೆಯ ಮಹಿಳೆಯಾಗಿ ಬಾಳುವುದಕ್ಕೆ ಆಕೆಗೆ ಅರಿವನ್ನು ನೀಡಬೇಕಾಗಿದೆ.

ಸಮಾಜದಲ್ಲಿರುವ ಬಡತನ ಮೊದಲು ನಿವಾರಣೆಯಾಗಬೇಕು. ಏಕೆಂದರೆ ಈ ಬಡತನದ ಸಮಸ್ಯೆ ಸಮಾಜದ ಇತರ ಸಮಸ್ಯೆಗಳ ಸೃಷ್ಟಿಗೆ ಕಾರಣವಾಗಿದೆ. ಅವರಿಗೆ ದುಡಿಯುವಂತಹ ಸ್ವಉದ್ಯೋಗ ಅವಕಾಶಗಳನ್ನು ಕಲ್ಪಿಸಬೇಕು. ಹೆಣ್ಣಿನಲ್ಲಿ ಆರ್ಥಿಕ ಸ್ವಾತಂತ್ರ್ಯ ಉಂಟಾಗಿ ತನ್ನ ಕುಟುಂಬದ ನಿರ್ವಹಣೆಗೆ ಹಣಕ್ಕಾಗಿ ತಮ್ಮ ದೇಹ ಮಾರಿಕೊಳ್ಳುವುದರ ಬದಲು ನ್ಯಾಯಯುತ ಬದುಕನ್ನು ನಡೆಸಲು ಸಾಧ್ಯವಾಗುತ್ತದೆ.

ಸಮಾಜದ ದೃಷ್ಟಿಕೋನ ಬದಲಾಗಬೇಕು. ವೇಶ್ಯೆಯ ಮಗಳನ್ನು ವೇಶ್ಯೆಯನಾಗಿಯೇ ನೋಡುತ್ತದೆ. ಅಲ್ಲದೆ ಅನ್ಯಪುರುಷರ ಸ್ನೇಹವೇ ಅಕ್ರಮ ಸಂಬಂಧವೆಂದು ತಿಳಿದು ತಪ್ಪಾಗಿ ನೋಡತ್ತದೆ. ಆದ್ದರಿಂದ ಸಮಾಜದಲ್ಲಿರುವ ಜನರ ದೃಷ್ಟಿಕೋನ ಬದಲಾಗಿ ಅವರಲ್ಲಿ ವಿಶಾಲವಾದ ಚಿಂತನೆ ಮೂಡಬೇಕೆ ಹೊರತು ಸಂಶಯಾತ್ಮಕ ದೃಷ್ಟಿ ಒಳ್ಳೆಯದಲ್ಲ. ಸಮಾಜದ ಪರಿವರ್ತನೆಗೆ ಅವಕಾಶ ನೀಡಬೇಕೆ ಹೊರತು, ಅದರ ಮೂಲನೆಲೆಯನ್ನು ಉಳಿಸುವುದಲ್ಲಿ ದೇವದಾಸಿ, ವೇಶ್ಯಾ ಮಕ್ಕಳ ಬಗ್ಗೆ ಪ್ರೀತಿ, ವಿಶ್ವಾಸ, ಅವರಲ್ಲಿ ಪರಿವರ್ತನೆಯ ಅರಿವನ್ನು ತೋರಿಸುವ ಸಮಾನ ಧೋರಣೆ ಬರಬೇಕು. ಹಾಗಾಗಿ

"ದಾಸಿ ಪುತ್ರನಾಗಲಿ ವೇಶ್ಯಾಪುತ್ರನಾಗಲಿ
ಶಿವದೀಕ್ಷೆಯಾದ ಬಳಿದ ಸಾಕ್ಷಾತ್ ಶಿವನೆಂದು

ವಂದಿಸಿ ಪೂಜಿಸಿ ಪಾದೋದಕ ಪ್ರಸಾದ ಕೊಂಬುದೆ ಯೋಗ್ಯ
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚ ಮಹಾಪಾತಕ ನರಕ ಕಾಣ ಕೂಡಲ ಸಂಗಮದೇವಯ್ಯ" 3

ಎಂಬ ಬಸವಣ್ಣನವರ ಮಾತು ಇಂದು ಪ್ರಸ್ತುತವಾಗಿದೆ. ಯಾರ ಮಕ್ಕಳೇ ಆಗಲಿ ಅವರನ್ನು ಪ್ರೀತಿಯಿಂದ ಕಾಣುವ ಭಾವನೆ ಬರಬೇಕು. ಇಲ್ಲವಾದರೆ ಅಂತಹ ಮಕ್ಕಳು ಇಷ್ಟವಿಲ್ಲದೆ ಅನಿವಾರ್ಯವಾಗಿ ಅದೇ ಬದುಕಿನ ಬೆಂಕಿಯಲ್ಲಿ ಬೀಳಲು ನಾವೇ ಪ್ರಚೋದನೆ ನೀಡಿದಂತಾಗುತ್ತದೆ.

'ಹೆಣ್ಣು ಮಾಯೆಯಲ್ಲ, ಹೆಣ್ಣು ರಕ್ಕಸಿಯಲ್ಲ ಸಾಕ್ಷಾತ್ ಚೆನ್ನಮಲ್ಲಿಕಾರ್ಜುನ'– ಎಂಬ ಸಿದ್ದರಾಮನ ಮಾತು ಸಮಾಜದಲ್ಲಿ ಮೂಡಬೇಕು. ಹೆಣ್ಣು ಮಾಯೆ ಚಂಚಲತೆ, ಉಂಟುಮಾಡುವಂತವಳು ಎಂದು ಅಭಿಪ್ರಾಯ ಇದೆ.

ಆದರೆ ಹೆಣ್ಣಿನ ಮೋಹಕ್ಕೆ ಬಲಿಯಾಗಿ ತನ್ನ ದೃಢಮನಸ್ಸನ್ನು ಸಡಿಲಗೊಳಿಸಿ ದುರ್ಬಲವಾಗಿಸಿಕೊಳ್ಳುವುದು ಆತನ ಕೈಯಲ್ಲಿರುತ್ತದೆ. ಆದ್ದರಿಂದ ಅಂತಹ ನಿಶ್ಚಯ ಮನಸ್ಸು ಗಂಡಿನಲ್ಲೂ ಇರಬೇಕು. ಹೆಣ್ಣಿನಲ್ಲೂ ಬರಬೇಕು.

ಮಧ್ಯವರ್ತಿಗಳ ಹಾವಳಿಯನ್ನು ನಿರ್ಮೂಲನೆ ಮಾಡಬೇಕು. ಇಂದು ಹೆಣ್ಣು ಮಕ್ಕಳನ್ನು ಅಪಹರಿಸಿ ಈ ದಂಧೆಗೆ ತಳ್ಳುವುದು ನಿಲ್ಲಬೇಕು. ಹೆಣ್ಣಿನಲ್ಲಿ ಸಿನಿಮಾ, ನಾಟಕ, ಉದ್ಯೋಗ ನೀಡುವಿಕೆ–ಹೀಗೆ ಬೇರೆಬೇರೆ ಆಸೆ ಆಮಿಷಗಳನ್ನು ಒಡ್ಡಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಈ ವೃತ್ತಿ ದಂಧೆಗೆ ಬೀಳಿಸುವಂತಹ ಈ ಮಧ್ಯವರ್ತಿಗಳ ನಿರ್ಮೂಲನೆ ಆಗಬೇಕಾಗಿದೆ.

'ಬೆತ್ತಲೆ ಸೇವೆ' ಈಗಲೂ ಸಹ ಎಷ್ಟೋ ಭಾಗಗಳಲ್ಲಿ ನಡೆಯುತ್ತದೆ. ಅದರಲ್ಲಿ ಸಂಪ್ರದಾಯದ ಮೂಢತೆ ಭಾವನೆ ಇದೆ. ಇಂತಹ ಗಣಕೀಕರಣರಾದ ಯಾರಿಂದಲ್ಲೂ ಇಂತಹ ಅಂಧಭಾವನೆ ಮೊದಲು ಹೋಗಬೇಕು. ಅಲ್ಲಿನ ಜನರಲ್ಲಿ ಅದರ ಬಗ್ಗೆ ಅರಿವನ್ನು ಮೂಡಿಸಬೇಕು.

ಹೆಣ್ಣಿನಲ್ಲಿರುವ ಮನಸ್ಸು ಮುಖ್ಯವಾಗಿ ಬದಲಾಗಬೇಕು. ಏಕೆಂದರೆ ಹೆಣ್ಣು ಈ ದಂಧೆಗೆ ಬರಲು ಪುರುಷ, ಸಮಾಜ, ಸಮಸ್ಯೆಗಳು ಎಷ್ಟು ಕಾರಣವೋ ಅಷ್ಟೇ ಕಾರಣ ಹೆಣ್ಣೇ ಆಗಿರುತ್ತಾಳೆ. ಆಕೆ ಭವಿಷ್ಯದ ಬದುಕಿನ ಬಗ್ಗೆ ಬಣ್ಣಬಣ್ಣದ ಕನಸುಗಳನ್ನು ಕಟ್ಟಿಕೊಂಡು ಹೋಗುವಾಗ ಅಲ್ಲಿನ ಪರಿಸ್ಥಿತಿ, ಸನ್ನಿವೇಶಗಳ ಅರಿವು ಅಸ್ಪಷ್ಟವಾಗುತ್ತದೆ. ಆಗ ಆಕೆಯಲ್ಲಿ

3 ಮಹಿಳಾ ಚಳುವಳಿ ಪ್ರಸಾರಾಂಗ ಪು.ಸಂ. 128

ಜಾಗೃತೆ ಭಾವನೆಯು ಬಯಕೆಗಳ ಸುಳಿಯಲ್ಲಿ ನಾಶವಾಗಿರುತ್ತದೆ. ಆದ್ದರಿಂದ ಇಂತಹ ಕಾಲು ಜಾಗೃತೆ, ತನ್ನ ಬಯಕೆ, ಆಕಾಂಕ್ಷೆಗಳ ಹಿಡಿತ ಇರಬೇಕು. 'ಹಾಸಿಗೆ ಇದ್ದಷ್ಟು ಕಾಲು ಚಾಚುವಂತೆ' ತನ್ನ ಸಾಮರ್ಥ್ಯದ ಅರಿವುಬೇಕು.

ಇಂದು ಹೆಣ್ಣು ತನ್ನ ಶೋಕಿಗಾಗಿ, ಶ್ರೀಮಂತಿಕೆಯ ದುರಾಸೆಯಾಗಿ ತನ್ನ ತನವನ್ನು ಕಳೆದುಕೊಂಡು ಬದುಕು ನಡೆಸುತ್ತಿದ್ದಾಳೆ ಈ ಮೇಜಿನ ಬದುಕು ಮೊದಲು ಹೋಗಬೇಕು. ಪ್ರತಿಯೊಂದು ಕ್ಷೇತ್ರದಲ್ಲೂ ಹೆಣ್ಣು ಒಂದಲ್ಲ ಒಂದು ರೀತಿಯ ಲೈಂಗಿಕ ಹಿಂಸೆಗೆ ಬಲಿಯಾಗುತ್ತಿದ್ದಾರೆ. ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ತಮ್ಮ ಮುಗ್ಧತೆಯ ಜೀವನದಲ್ಲಿ ಕಾಮುಕರ ದೃಷ್ಟಿಗೆ ಬಲಿಯಾಗಿ ನರಳುತ್ತಿರು ಸ್ಥಿತಿ ಇಂದು ಬಂದಿದೆ. ಇಂತಹ ಮಕ್ಕಳು ರಕ್ಷಣೆ ಮೊದಲು ಬೇಕು. ಅಂತಹ ಅಪರಾಧಿಗಳಿಗೆ ಹೀಗಿರುವ ಕಾನೂನುಗಳು ಮಾತ್ರವೇ ಸಾಲದೆ ಇನ್ನೂ ಕ್ರೂರ ಶಾಸನಗಳು ಅಗತ್ಯವಾಗಿದೆ.

ಪರಿಸ್ಥಿತಿ ಮನಸ್ಥಿತಿಗಳ ಒತ್ತಡಗಳಿಂದ ವ್ಯಕ್ತಿಗಳು ಆ ದಾರಿಯತ್ತ ನಡೆದಾಗ ಸ್ತ್ರೀಯನ್ನು ಮಾತ್ರವೇ ಹೊಣೆಯಾಗಿಸಿ, ನಿರ್ದಯವಾಗಿ ತಿರಸ್ಕರಿಸುವ ಸಾಂಪ್ರದಾಯಿಕ ದೃಷ್ಟಿಯನ್ನು ಮೊದಲು ನಿರ್ಮೂಲನೆ ಮಾಡಬೇಕಾಗಿದೆ.

ವೈಶ್ಯಾವೃತ್ತಿಗೆ ಸಂಬಂಧಿಸಿದ ಕಾನೂನು ಭಾರತದಲ್ಲಿ ಬ್ರಿಟೀಷರ ಆಳ್ವಿಕೆಯಿಂದ ಗೋಚರಿಸಿದುವು. ಬ್ರಿಟಿಷರ ಆಳ್ವಿಕೆಯಲ್ಲಿ ಭಾರತ ದಂಡ ಸಂಹಿತೆಯು ವೇಶ್ಯಾವೃತ್ತಿನ್ನು ನಿಯಂತ್ರಿಸಲು ಪ್ರಮುಖ ಪಾತ್ರವಹಿಸಿ ಹೆಚ್ಚು ಪ್ರಭಾವ ಬೀರಿದೆ.

"ಮುಂಬಯಿಯು ಪ್ರಥಮವಾಗಿ 1923ರಲ್ಲಿ ವೇಶ್ಯಾವೃತ್ತಿ ನಿವಾರಣಾ ಕಾಯಿದೆಯನ್ನು ಹೊರಡಿಸಿತು. ಅನಂತರ ರಾಷ್ಟ್ರದ ಬೇರೆಬೇರೆ ರಾಜ್ಯಗಳು ಸಹ ಇಂತಹ ಕಾಯಿದೆಗಳನ್ನು ರೂಪಿಸಿ ಆ ಮೂಲಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮೈಸೂರು ರಾಜ್ಯವು 1956ರಲ್ಲಿ ವೇಶ್ಯಾವೃತ್ತಿ ರದ್ಧತಿಗಾಗಿ ಕಾನೂನ್ನು ರೂಪಿಸಿತು. ಭಾರತಿ ದಂಡ ಸಂಹಿತೆಯು 372 ಮತ್ತು 373ನೆಯ ವಿಧಿಗಳು, ಅಪರಾಧ ಪ್ರಕ್ರಿಯಾ ಸಂಹಿತೆಯ 552ನೇಯ ವಿಧಿ ಹಾಗೂ ಅನೇಕ ಆರಕ್ಷಕ ಮತ್ತು ಪುರಕಾಯಿದೆಗಳು ವೇಶ್ಯಾವೃತ್ತಿಯ ನಿವಾರಣೆಗೆ ಪ್ರಯತ್ನಿಸುತ್ತಿದೆ."[4]

ಭಾರತ ದಂಡ ಸಂಹಿತೆಯು ಸ್ತ್ರೀಯರ ಮಾನವನ್ನು ಕಾಪಾಡಲು ಮತ್ತು ಅವರನ್ನು ಅನೈತಿಕ ಲೈಂಗಿಕ ಕ್ರಿಯೆಗಳಲ್ಲಿ ತೊಡಗಿಸುವುದನ್ನು ತಡೆಯುವ ಉದ್ದೇಶ ಹೊಂದಿದೆ. ಈ ಸಂಹಿತೆಯ 354ನೇ ವಿಧಿಯ ಪ್ರಕಾರ ಸ್ತ್ರೀಯರ ಮೇಲಿನ ದೌರ್ಜನ್ಯ ಅಥವಾ ಅವರ ಚಾರಿತ್ರ್ಯವನ್ನು ಹಾಳು ಮಾಡುವ ಉದ್ದೇಶದಿಂದ ಅಪರಾಧ ಬಲವನ್ನು ಉಪಯೋಗಿಸುವುದಕ್ಕೆ

4 ಸಾಮಾಜಿಕ ಸಮಸ್ಯೆಗಳು ಎಂ.ನಾರಾಯಣ್ ಪು.ಸಂ. 391

2 ವರ್ಷ ಸೆರೆವಾಸ ಅಥವಾ ದಂಡ ಇಲ್ಲವೆ ಎರಡನ್ನು ವಿಧಿಸಬಹುದು. ಹೆಣ್ಣು ಮಕ್ಕಳನ್ನು ಆಸೆ ಆಮಿಷಿಗಳನ್ನು ತೋರಿಸಿ ಮನಸ್ಸೆಳೆದು ಅವರನ್ನು ಅಪಹರಿಸತ್ತಿದ್ದಾರೆ. ಇಂತಹ ಹೆಣ್ಣು ಮಕ್ಕಳ ಅಪಹರಣವನ್ನು ತಪ್ಪಿಸಲು 366ನೇ ವಿಧಿ 10 ವರ್ಷ ಸಜೆಯನ್ನು ಮತ್ತು ದಂಡವನ್ನು ವಿಧಿಸಲಾಗುತ್ತಿದೆ.

"ವೇಶ್ಯೆಯ ದುಡಿಮೆಯ ಮೇಲೆ ಆಧರಿಸಿ ಜೀವಿಸುವವರನ್ನು ಮಹಾರಾಷ್ಟ್ರ, ಗುಜರಾತ್, ಪಂಜಾಬ್ ಮತ್ತು ಬಂಗಾಳಗಳಲ್ಲಿ 3 ವರ್ಷ ಸೆರೆಮನೆವಾಸ, 1000ರೂ ಜುಲ್ಮಾನೆ ಚಾಟಿ ಹೊಡೆತ – ಇವುಗಳಲ್ಲಿ ಯಾವುದಾದರೊಂದನ್ನು ವಿಧಿಸಲಾಗಿದೆ.

ವೇಶ್ಯಾವೃತ್ತಿಗಾಗಿ ಹುಡುಗಿಯನ್ನು ಹೊಂದಿರುವವರಿಗೆ ಕರ್ನಾಟಕ, ಮಧ್ಯಪ್ರದೇಶ ತಮಿಳುನಾಡು, ಕೇರಳ, ಆಂದ್ರಪ್ರದೇಶ, ಬಿಹಾರ, ಮತ್ತು ಉತ್ತರ ಪ್ರದೇಶಗಳಲ್ಲಿ 3 ಸೆರೆಮನೆ ವಾಸಿ, 500 ರಿಂದ 1000ರೂ ಜುಲ್ಮಾನ ಎರಡನ್ನೂ ವಿಧಿಸಲಾಗಿದೆ.

ವೇಶ್ಯೆವೃತ್ತಿಗಾಗಿ ಹುಡುಗಿಯನ್ನು ಆಮದು ಮಾಡಿಕೊಳ್ಳುವವರಿಗೆ ಕರ್ನಾಟಕದಲ್ಲಿ 500ರೂಗಳ ಜುಲ್ಮಾನೆ ಇಲ್ಲವೆ 2 ವರ್ಷಗಳ ಸೆರೆಮನೆವಾಸ ವಿಧಿಸಲಾಗುವುದು.

"ವೇಶ್ಯಾ ಗೃಹಗಳನ್ನು ನಡೆಸುವುದು, ಹೊಂದಿರುವುದು, ನಿರ್ವಹಿಸುತ್ತಿರುವುದು, ಇಲ್ಲಿ ಸಹಾಯ ಮಾಡುವುದು ಶಿಕ್ಷಾರ್ಹಕ್ರಿಯೆ. ವೇಶ್ಯಾಗೃಹಕ್ಕೆ ಮನೆ ದೊರಕಿಸುವುದು ಕೊಡುವುದು ಶಿಕ್ಷಾರ್ಹ" 5

ಈ ಕಾನೂನುಗಳು ಪಟ್ಟಿಯಲ್ಲಿ ಇವೆ. ಆದರೆ ಇದು ಜನರಲ್ಲಿ ಭಯ ಉಂಟಾಗಿವಷ್ಟರ ಮಟ್ಟಿಗೆ ಪರಿಣಾಮವನ್ನು ಬೀರುತ್ತಿಲ್ಲ. ಅಷ್ಟು ಕ್ರೂರಾವಾಗಿ ಇಲ್ಲಿ – ಏಕೆಂದರೆ ಒಬ್ಬ ವ್ಯಕ್ತಿ 2 ಇಲ್ಲವೆ 3 ವರ್ಷ ಜೈಲು ಸೇರಿ ಬಂದವರು ಅಥವಾ 500 ಇಲ್ಲವೆ 1000 ರೂ ದಂಡ ನೀಡಿ ಬಂದವರು ಮತ್ತೆ ಆ ವೃತ್ತಿಯಲ್ಲಿ ಮುಂದುವರೆಯುತ್ತಾರೆ. ಏಕೆಂದರೆ ಆ ಶಿಕ್ಷೆ ಅವರಲ್ಲಿ ಭಯವನ್ನುಂಟು ಮಾಡಿ ಪರಿವರ್ತನೆ ಮಾಡುವುದರ ಬದಲು. ಮತ್ತೆ ದಂಡ ಕಟ್ಟಲು ಸಿದ್ದರಾಗುತ್ತಾರೆ. ಆದ್ದರಿಂದ ದಂಡಗಳಿಗೆ, ಸೆರೆಮನೆ ವಾಸಗಳಿಗೆ ಮೌಲ್ಯ ಇಲ್ಲದೆ ಇರುವುದು ವೇಶ್ಯಾ ಸಮಸ್ಯೆ ನಿರ್ಮೂಲನೆಯ ವಿಫಲತೆಗೆ ಕಾರಣವಾಗಿದೆ. ಇಂತಹ ಕಾನೂನುಗಳಿಂದ ನುಸುಳಿಕೊಳ್ಳುವವರನ್ನು ಪುನರ್ವಸತಿ ಹಾಗೂ ರಕ್ಷಣಾ ಕ್ರಮಗಳಿಂದ ಸುಧಾರಿಸಬಹುದು.

ಸಾಮಾಜಿಕ ಹಾಗೂ ನೈತಿಕ ನೈರ್ಮಲ್ಯದ ಸಲಹಾ ಸಮಿತಿ, ತರವಾಯದ ಜಾಗರೂಕತೆ ಯೋಜನಾ ಸಲಹಾ ಸಮಿತಿ, ಕೇಂದ್ರ ಸಮಾಜಕಲ್ಯಾಣ ಮಂಡಲಿ, ನೈತಿಕ

5 ಸಾಮಾಜಿಕ ಸಮಸ್ಯೆಗಳು ಎಂ.ನಾರಾಯಣ್ ಪು.ಸಂ. 393

ಮತ್ತು ಸಾಮಾಜಿಕ ನೈರ್ಮಲ್ಯ ಸಂಘ ಮುಂತಾದ ಸಂಘ ಸಮಿತಿಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪೂರ್ಣಕ್ರಮಗಳನ್ನು ಶಿಫಾರಸ್ಸು ಮಾಡಿದೆ. ಸನ್ನಿವೇಶಗಳ ಒತ್ತಡಕ್ಕೆ ಬಲಿಯಾಗಿ ವೇಶ್ಯೆಯರಾದವರಿಗೆ ರಕ್ಷಣೆ ನೀಡುತ್ತಿವೆ. ಈ ನಿವಾಸಿಗಳಿಗೆ ಅನ್ನ, ಬಟ್ಟೆ, ಹಾಸಿಗೆ, ವೈದ್ಯಕೀಯ ಸೌಲಭ್ಯಗಳನ್ನು ದೊರಕಿಸಲಾಗಿದೆ. ಅಪಾಯಕರ ಗುಹ್ಯ ರೋಗದಿಂದ ನರಳುವವರನ್ನು ಇತರರಿಂದ ಪ್ರತ್ಯೇಕವಾಗಿರಿಸಿ ಶುಶ್ರೂಷೆ ನೀಡಲಾಗುತ್ತಿವೆ. ಇವರಿಗೆ ವೃತ್ತಿಶಿಕ್ಷಣ, ಕುಶಲಕಲೆ, ಬಟ್ಟೆ ಹೊಲಿಯುವುದು, ಕಸೂತಿ, ದಾದಿ ಸೇವೆಗಳಲ್ಲಿ ತರಬೇತಿ ನೀಡಿ ನೈತಿಕ ಶಿಕ್ಷಣವನ್ನು ಬೋಧಿಸಲಾಗುವುದು ಇವರ ಮಕ್ಕಳ ಮೇಲ್ವಾಚಾರಣೆಯನ್ನು ವಹಿಸಿಕೊಳ್ಳಲಾಗುವುದು. ಆಸ್ಪತ್ರೆ, ಶಾಲೆ ಕಾರ್ಖಾನೆ ಹಾಗೂ ರೈಲ್ವೆಯಲ್ಲಿ ಲಾಭದಾಯಕ ಉದ್ಯೋಗಗಳನ್ನು ಇವರಿಗೆ ದೊರೆಕಿಸಲಾಗುತ್ತಿದೆ. ದೀರ್ಘಕಾಲ ಉಳಿಯಬೇಕಾದ ಹುಡುಗಿಯರನ್ನು ರಕ್ಷಣಾ ಗೃಹಗಳಲ್ಲಿ ಅನುಕೂಲಕರ ವಾತಾವರಣದಲ್ಲಿ ರಕ್ಷಿಸಲಾಗುವುದು ಮತ್ತು ಅವರಿಗೆ ವಿದ್ಯಾಭ್ಯಾಸವನ್ನು ನೀಡಲಾಗುವುದು.

" ಕೇಂದ್ರ ಸಾಮಾಜಿಕ ಕಲ್ಯಾಣ ಮಂಡಳಿಯು ಜಿನಿವಾದ ಅಂತರ ರಾಷ್ಟ್ರೀಯ ಸಮ್ಮೇಳನ ಸ್ತ್ರೀಯರ ಹಾಗೂ ಯುವತಿಯರ ಅನೈತಿಕ ವ್ಯವಹಾರ ಸಂಗ್ರಹಣೆಯ ತೀರ್ಮಾನದಂತೆ ಸಾಮಾಜಿಕ ಮತ್ತು ನೈತಿಕ ಆರೋಗ್ಯ ಸಲಹಾ ಸಮಿತಿಯನ್ನು 1954ರ ಡಿಸೆಂಬರ್‌ನಲ್ಲಿ ರಚಿಸಲಾಯಿತು. ಶ್ರೀಮತಿ ಧನ್ವಂತರಿ ರಾಮರಾವ್ ಅವರು ಈ ಸಮಿತಿಯ ಪ್ರಪ್ರಥಮ ಅಧ್ಯಕ್ಷಿಣಿಯಾಗಿ ನೇಮಿಸಲ್ಪಟ್ಟರು. ಇವರೂ ಸಹ ಹಲವಾರು ಶಿಫಾರಸ್ಸುಗಳನ್ನು ಹೊರಡಿಸಿದರು."[6] ವೇಶ್ಯಾವಾಟಿಕೆಯ ತೊಡಗಿರುವ ಸ್ತ್ರೀಯರು ಮತ್ತು ಹುಡುಗಿಯರ ರಕ್ಷಣೆಗೆ ಯಾರೂ ಬರಬಾರದು.

ವೇಶ್ಯೆಯರನ್ನು ಅನುಮತಿಸಿದ ಸ್ಥಳ- ರಿಮಾಂಡ್ ಹೋಂ, ಸ್ಟೇಟ್ ಹೋಂ ಫಾರ್ ವುವೆನ್‌ಗಳಿಗೆ ಒಪ್ಪಿಸುವುದು, ಸಮಾಜ ಕಾರ್ಯಕರ್ತೆಯರು, ಸಮಾಜ ಸುಧಾರಕರನ್ನು, ಸ್ವಯಂ ಸೇವಾ ಕಾರ್ಯ ಕರ್ತರನ್ನೊಳಗೊಂಡ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದು, ವೇಶ್ಯೆಯರ ಪುನರ್ವಸತಿಗಾಗಿ ನೈತಿಕ ಅಪಾಯಕ್ಕೊಳಗಾಗಿರುವ ಮಹಿಳೆಯರ ಪ್ರಾದೇಶಿಕ ಮಹಿಳಾ ಸಂಸ್ಥೆಗಳು ಮತ್ತು ರಿಮಾಂಡ್ ಹೋಂಗಳನ್ನು ಸ್ಥಾಪಿಸಬೇಕು. ವೇಶ್ಯಾವೃತ್ತಿ ನಿವಾರಣೆ ಮತ್ತು ನಿಯಂತ್ರಣ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಒಳಿತು.

6 ಸಾಮಾಜಿಕ ಸಮಸ್ಯೆಗಳು ಎಂ.ನಾರಾಯಣ್ ಪು.ಸಂ. 395

ಲೈಂಗಿಕ ಶಿಕ್ಷಣ :

ವೇಶ್ಯಾವೃತ್ತಿಯಾ ಹೆಣ್ಣು ಗಂಡಿನ ಲೈಂಗಿಕತೆಗೆ ಸಂಬಂದಿಸಿದ್ದರಿಂದ ಲೈಂಗಿಕತೆಯ ಬಗ್ಗೆ ಇರುವ ಜ್ಞಾನವನ್ನು ಹೋಗಲಾಡಿಸಲು ಲೈಂಗಿಕ ಶಿಕ್ಷಣದ ಅಗತ್ಯತೆಯಿದೆ. ಗಂಡು ಹೆಣ್ಣಿನಲ್ಲಿ ಲೈಂಗಿಕ ನೈತಿಕತೆ ಬಗ್ಗೆ, ಏಕಪತಿತ್ವ ಅಥವಾ ಏಕಪತಿತ್ವದ ಬಗ್ಗೆ, ಗುಹ್ಯ ರೋಗಗಳ ಆತಂಕಕಾರಿ ಪರಿಣಾಮಗಳ ಬಗ್ಗೆ ಮತ್ತು ಲೈಂಗಿಕ ಮೌಲ್ಯಗ ಬಗ್ಗೆ ತಿಳಿವಳಿಕೆ ನೀಡುವಂತಹ ಲೈಂಗಿಕ ಶಿಕ್ಷಣವನ್ನು ನೀಡಬೇಕು. ವೇಶ್ಯಾವಾಟಿಕೆಯಿಂದ ಗಂಡ ಹೆಂಡತಿ ದಾಂಪತ್ಯ ಸಂಬಂಧ ಮತ್ತು ಬಾಂಧವ್ಯ ಕೆಡುವುದರ ಬಗ್ಗೆ, ಕೌಟುಂಬಿಕ ಜೀವನ ಹದಗೆಡುವುದು ಹಾಗೂ ವಿವಾಹ ವಿಚ್ಚೇದನ ಮತ್ತು ಪಂತ್ಯಾಗಳು ಹೆಚ್ಚಿನ ಮಕ್ಕಳ ವ್ಯಕ್ತಿತ್ವ ಬೆಳವಣಿಗೆ ಕುಂಟಿತಗೊಳ್ಳುವದರ ಬಗ್ಗೆ ತಿಳುವಳಿಕೆ ಉಂಟುಮಾಡುವಂತಹ ಲೈಂಗಿಕ ಶಿಕ್ಷಣ ನೀಡಬೇಕು. ಇಡೀ ಜನತೆಗೆ ವೇಶ್ಯಾವೃತ್ತಿಯ ದುಷ್ಪರಿಣಾಗಳ ಅರಿವನ್ನುಂಟು ಮಾಡಬೇಕು. ಲೈಂಗಿಕ ಸಂಹಿತೆಯ ಪಾಠ ಮೊದಲು ಮನೆಯಲ್ಲಿ ಆನಂತರ ಶಾಲೆಯಲ್ಲಿ ಆರಂಭವಾಗಬೇಕು. ಶಾಲಾ ಕಾಲೇಜುಗಳಲ್ಲಿ ಲೈಂಗಿಕ ಶಿಕ್ಷಣ ಮತ್ತು ಕೌಟುಂಬಿಕ ಜೀವನದ ತರಬೇತಿಯನ್ನು ನೀಡುವ ವ್ಯವಸ್ಥೆಯಾಗಬೇಕು. ಈ ದಿಸೆಯಲ್ಲಿ ನೈತಿಕ ಮತ್ತು ಸಾಮಾಜಿಕ ಆರೋಗ್ಯ ಸಂಘವು ಕಾರ್ಯನಿರತವಾಗಿದೆ. ಈ ಲೈಂಗಿಕ ಶಿಕ್ಷಣವನ್ನು ತರಬೇತಿ ಕೇಂದ್ರಗಳಲ್ಲಿ ನೀಡಲಾಗುತ್ತದೆ. ಆದರೆ ಇದು 15–16 ವರ್ಷದ ಮಕ್ಕಳಿಗೆ ಅಗತ್ಯವಾಗಿಬೇಕಾಗಿದೆ. ಆದರೆ ಶಿಕ್ಷಣ ಅಷ್ಟಾಗಿ ಶಾಲಾಕಾಲೇಜುಗಳಲ್ಲಿ ನಡೆಯುತ್ತಿಲ್ಲ. ಕೆಲವೊಂದು ಕಡೆ ನಡೆದರೂ ಸಹ ಅದರ ಬಗ್ಗೆ ಮುಜುಗರ ಇರುತ್ತದೆಯೇ ಹೊರತು ಮುಕ್ತ ಮನಸ್ಸು ಇರುವುದಿಲ್ಲ.

ದ್ವಿಮುಖ ನೀತಿಯ ಖಂಡನೆ :

ಲೈಂಗಿಕ ನೈತಿಕತೆ ಮತ್ತು ಲೈಂಗಿಕ ಪಾವಿತ್ರ್ಯದ ಬಗ್ಗೆ ಗಂಡಿಗೊಂದು ಆಳತೆಗೋಲು ಮತ್ತು ಹೆಣ್ಣಿಗೊಂದಿರುವುದು ಸಮರ್ಥನೀಯದಲ್ಲಿ ಪತಿವ್ರತ್ಯ ಹೆಣ್ಣುನಲ್ಲದೆ ಗಂಡಿನಲ್ಲೂ ಇರಬೇಕು. ಭಾರತೀಯ ಸಮಾಜದಲ್ಲಿ ಗಂಡು ಹೆಣ್ಣುಗಳ ಸೆರಗ್ಗಿಡಿದು ಹೋಗಬಹುದು. ಆದರೆ ಹೆಣ್ಣಿಗೆ ದಿಗ್ಬಂದನ ಇದರಿಂದಲೇ ಲೈಂಗಿಕ ಅನಾಚಾರ ಏರ್ಪಡುವುದು ಶ್ರೀಮತಿ ರಂಗನಾಯಕಿ ಅವರು "ವಾಸ್ತವವಾಗಿ ಲೈಂಗಿಕ ವಿಷಯದಲ್ಲಿ ದ್ವಿಮುಖ ನೀತಿಯನ್ನು ಹೊಂದಲು ಸಾಧ್ಯವಿಲ್ಲ. ಪುರುಷನ ಪಾತಿವ್ರತ್ಯ ಇಲ್ಲದೆ ಸ್ತ್ರೀಯರ ಪಾತೀವ್ರತ್ಯ ಇರಲು ಸಾಧ್ಯವಿಲ್ಲ" 7 ಎಂದು ತಿಳಿಸಿದ್ದಾರೆ. ಕುವೆಂಪುರವರು ತಮ್ಮ 'ಶ್ರೀರಾಮಾಯಣದರ್ಶನಂ'

7 ಸಾಮಾಜಿಕ ಸಮಸ್ಯೆಗಳು ಎಂ.ನಾರಾಯಣ್ ಪು.ಸಂ. 391

ಕಾವ್ಯದಲ್ಲಿ ರಾವಣ ಸೀತೆಯನ್ನು ಅಪಹರಿಸಿದ ಕಾರಣವಾಗಿ ಆಕೆಯ ಪಾತಿವ್ರತ್ಯ ಪರೀಕ್ಷೆಗೆ ಅಗ್ನಿ ಪ್ರವೇಶವನ್ನು ಸೂಚಿಸುತ್ತಾರೆ. ಅದೇ ರೀತಿ ರಾಮನು ಪರಿಶುದ್ಧನೋ, ಅಲ್ಲವೋ ಎಂಬುದರ ಪರೀಕ್ಷೆಗಾಗಿ ಆತನೂ ಅಗ್ನಿ ಪ್ರವೇಶಿಸುವುದಕ್ಕೆ ಪ್ರಚೋದನೆ ನೀಡಿರುವುದನ್ನು ಕಾಣಬಹುದು. ಅಂದರೆ ಇಲ್ಲಿ ಲೈಂಗಿಕ ನೈತಿಕತೆ ಮತ್ತು ಲೈಂಗಿಕ ಪಾತಿವ್ರತ್ಯದ ಸ್ತ್ರೀ ಪುರುಷರಲ್ಲಿ ಸಮಾನವಾಗಿರಬೇಕು ಹೊರತು ಭಿನ್ನತೆಯಿಂದ ಕೂಡಿರಬಾರದು. ಈ ಭಿನ್ನತೆಯೇ ಒಬ್ಬರು ಮತ್ತೊಬ್ಬರ ಶೋಷಣೆಗೆ ಕಾರಣವಾಗಿದೆ. ಹಾಗಾಗಿ ಮೊದಲು ಈ ಬಗೆಯ ದ್ವಿಮುಖ ನೀತಿಯನ್ನು ಹೋಗಲಾಡಿಸುವ ಕೆಲಸ ಆಗಬೇಕು. ಆಗ ವೇಶ್ಯಾವೃತ್ತಿಯ ಸೃಷ್ಟಿಯು ಕುಗ್ಗುತ್ತದೆ.

ಮಹಿಳೆಗೆ ಉದ್ಯೋಗ :

ಮಹಿಳೆಯರ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡರೆ, ಬಡತನ ನಿರ್ಮೂಲಗೊಂಡರೆ ವೇಶ್ಯಾವೃತ್ತಿ ಕಡಿಮೆಗೊಳ್ಳುತ್ತದೆ. ಅದಕೊಸ್ಕರ ಮಹಿಳೆಯರಿಗೆ ಹೆಚ್ಚೆಚ್ಚು ಆರ್ಥಿಕಾವಕಾಶಗಳು ಮತ್ತು ಉದ್ಯೋಗವನ್ನು ಒದಗಿಸಬೇಕು.

ಕೆಲವು ಸಮಾಜಿಕ ಪದ್ಧತಿಗಳ ನಿರ್ಮೂಲನೆ :

ವೇಶ್ಯಾವೃತ್ತಿಗೆ ಪೂರಕವಾದ ಕೆಲವು ಸಾಮಾಜಿಕ ಪದ್ಧತಿ–ವಿಧನಾ ವಿವಾಹದ ಮೇಲಿನ ನಿಬಂಧ ನಿರ್ಮೂಲನೆ, ವರದಕ್ಷಿಣಾ ಪದ್ಧತಿ ನಿರ್ಮೂಲನೆ, ಬಹುಪತ್ನಿತ್ವ, ದೇವದಾಸಿಪದ್ಧತಿ, ಬಸವಿ ಬಿಡುವ ಪದ್ಧತಿ, ಸೂಳೆ ಸಂತಾನ ಮುಂತಾದ ಅನಿಷ್ಠ ಪದ್ಧತಿಗಳನ್ನು ನಿರ್ಮೂಲನೆಗೊಳಿಸಬೇಕು.

ಪ್ರಚಾರ ಮತ್ತು ಪ್ರಸಾರ :

ವೇಶ್ಯಾವೃತ್ತಿಯ ಅನಿಷ್ಠ ಪರಿಣಾಮಗಳು, ಮಾನಹಾನಿ, ಆಸ್ತಿ ಹಾಸಿ, ಗುಹ್ಯರೋಗ, ಎಡ್ಸ್ ಬಗ್ಗೆ ಸಾರ್ವಜನಿಕರಿಗೆ ಅರಿವನ್ನುಂಟು ಮಾಡಲು ವ್ಯಾಪಕ ಪ್ರಚಾರ ಮತ್ತು ಪ್ರಸಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಈ ಉದ್ದೇಶಕ್ಕಾಗಿ, ಚಲನಚಿತ್ರ ರೇಡಿಯೋ, ದೂರದರ್ಶನ ವೃತ್ತಪತ್ರಿಕೆ, ಸಭೆ, ಸಮ್ಮೇಳನ– ಮುಂತಾದ ಮಾಧ್ಯಮಗಳನ್ನು ಬಳಸಿಕೊಳ್ಳಬೇಕು. ಈ ಸಮಸ್ಯೆಯ ಬಗ್ಗೆ ಇರುವ ಕಾನೂನುಗಳು, ಪರಿಹಾರೋಪಾಯಗಳ ಬಗ್ಗೆ ವ್ಯಾಪಕ ಪ್ರಚಾರವಾಗಬೇಕು. ಕಾಮ ಕೆಳಿಸುವ ಚಲನಚಿತ್ರಗಳನ್ನು, ಆಶ್ಲೀಲ ಸಾಹಿತ್ಯಗಳನ್ನು

ಖಂಡಿಸಬೇಕು. ಇದರ ಬಗ್ಗೆ ಪೋಲಿಸಿನವರು, ಸಮಾಜ ಕಾರ್ಯಕರ್ತರು, ಮಹಿಳಾ ಕಲ್ಯಾಣ ಇಲಾಖೆಯವರು, ಸ್ವಯಂ ಸೇವಾ ಸಂಸ್ಥೆಗಳು ಉಚ್ಚೆತ್ತು ಕಾರ್ಯೋನ್ಮುಖಗೊಳ್ಳಬೇಕು.

ವೇಶ್ಯಾ ಗೃಹಗಳ, ತಲೆಹಿಡುಕರ ಮತ್ತು ಸರಬರಾಜುದಾರರ ಕಿರುಕುಳವನ್ನು ತಪ್ಪಿಸಿ, ಹೆಣ್ಣು ಮಕ್ಕಳು ವ್ಯಾಪಾರ ಮತ್ತು ಸಾಗಾಣಿಕೆ ತಪ್ಪಿಸಲು ವೇಶ್ಯಾವಾಟಿಕೆಗೆ ಪರವಾನಿಗೆ ನೀಡುವ ವ್ಯವಸ್ಥೆಯನ್ನು ಮಾಡಬೇಕು. ಪರವಾನಗಿ ಪಡೆದ ವೇಶ್ಯೆಯ ಚಟುವಟಿಕೆ ಮೇಲೆ ಪೊಲೀಸಿನವರು ನಿಗಾವಹಿಸಬೇಕು ಹಾಗೂ ವೇಶ್ಯೆಯರ ವೈದ್ಯಕೀಯ ತಪಾಸಣೆ ಮತ್ತು ಶೂಶ್ರೂಷೆಯನ್ನು ಆಗಿಂದಾಗ್ಗೆ ಏರ್ಪಡಿಸಬೇಕು. ವೇಶ್ಯಾಗೃಹಗಳ ನೋಂದಣಿ ವ್ಯವಸ್ಥೆಯಾಗಬೇಕು.

ಆರ್ಥಿಕ ಅಸಮಾನತೆ ಹಾಗೂ ಅನಕ್ಷರತೆ ಕಣ್ಮರೆಯಾಗಬೇಕು. ಇವೇ ಪ್ರಬಲವಾದ ನಿವಾರಣೋಪಾಯಗಳೆನ್ನಬಹುದು. ವೇಶ್ಯೆಯರಿಗೆ ಮಾತ್ರ ರಕ್ಷಣೆ ಕೊಡುವುದೇ ಅಲ್ಲದೆ ವೇಶ್ಯೆಯರ ದುಡಿಮೆಯನ್ನು ಧರಿಸಿದ್ದವರಿಗೂ ರಕ್ಷಣೆ ಕೊಡಬೇಕು. ವೇಶ್ಯಾ ಗೃಹ ನಿರ್ವಾಹಕಿ, ತಲೆ ಹಿಡುಕರಿಗೆ ಬೇರೆ ಜೀವನೋಪಾಯವನ್ನು ತೋರಿಸಿದರೆ ಅವರು ಈ ಕೆಲಸವನ್ನು ಬಿಡಬಹುದು. ವೇಶ್ಯೆಯರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಸತ್ಪ್ರಜೆಗಳಾಗಲು ಅವಕಾಶ ಕೊಡಬೇಕು. ಉದಾತ್ತ ಮನೋಧರ್ಮದ ಯುವಕರು, ವೇಶ್ಯೆಯರನ್ನು ವಿವಾಹವಾಗಲು ಮುಂದೆ ಬಂದಾಗ ವಿವಾಹ ಮಾಡಿಬಿಡಬೇಕು. 'ವೇಶ್ಯೆ' ಎಂದಾಕ್ಷಣ ಆಸಡ್ಡೆಯನ್ನು ವ್ಯಕ್ತಪಡಿಸದೆ ಅವರ ಮಕ್ಕಳನ್ನು ವಿವಾಹವಾಗುವಂಥ ಸಾಮಾಜಿಕ ಮೌಲ್ಯಗಳು ಬೆಳೆಯಬೇಕು. ವೇಶ್ಯೆಯರ ಮಕ್ಕಳು ಮತ್ತೆ ಈ ವೃತ್ತಿಯಲ್ಲಿ ತೊಡಗಿದಂತೆ ಎಲ್ಲಾ ಬಗೆಯ ಎಚ್ಚರಿಕೆಯನ್ನು ವಹಿಸಬೇಕು. ಈ ಎಲ್ಲಾ ಕ್ರಮಗಳು ವೇಶ್ಯಾವೃತ್ತಿಯನ್ನು ನಿಯಂತ್ರಿಸಲು ಹಾಗೂ ಸಮಸ್ಯೆಯನ್ನು ತೊಡೆದು ಹಾಕಲು ಸಹಾಯಕವಾಗುತ್ತವೆ.

ಈ ರೀತಿಯಾಗಿ ಸಾಮಾಜಿಕ ಪಿಡುಗಾದಂತಹ ಈ ವೇಶ್ಯಾ ಸಮಸ್ಯೆಯನ್ನು ನಿವಾರಿಸಲು ಕಾನೂನುಗಳು, ಸಮಾಜದ ಇತರ ವರ್ಗದ ಅಧಿಕಾರಿಗಳು, ಜನರ ಆಲೋಚನೆಗಳು ಪ್ರಮುಖ ಪಾತ್ರ ವಹಿಸುತ್ತವೆ. ವಾಸ್ತವದಲ್ಲಿ ಈ ವೇಶ್ಯಾವೃತ್ತಿಯ ರೀತಿಯಲ್ಲಿ ಲೈಂಗಿಕ ಹಿಂಸೆ ಮತ್ತು ದೌರ್ಜನ್ಯಗಳು ನಗರಗಳಲ್ಲಿ ಮಾತ್ರವಲ್ಲದೆ ಹಳ್ಳಿಗಳಲ್ಲೂ ಸೃಷ್ಟಿಯಾಗಿವೆ. ಆದ್ದರಿಂದ ಇವುಗಳ ನಿರ್ಮೂಲನೆ ಅಗತ್ಯವಾಗಿದೆ.

ಅಪರಾಧಿಯುನ್ನು ಬಲಾತ್ಕಾರದ ಆಪಾದನೆಯು ಮೇಲೆ ಅಜೀವ ಕಾರಾಗೃಹವಾಸವನ್ನು, ಅಪಹರಣಕಾರರನ್ನು ಹಂತಕರೆಂಬ ಅಪಾದನೆಯ ಮೇಲೆ ದಂಡ

ವಿಧಿಸಬೇಕು. ಅಪ್ರಾಪ್ತ ಮಕ್ಕಳನ್ನು ದೇಶದ ಹೊರಗೆ ಕಳಿಸುವುದನ್ನು ನಿಷೇದಿಸಬೇಕು. ಆಶ್ಲೀಲ ಸಾಹಿತ್ಯ ಹಾಗೂ ಸಿನಿಮಾಗಳ ಪ್ರಚಾರ, ಪ್ರಸಾರದ ಮೇಲೆ ಪ್ರತಿಬಂಧ ಹೇರಬೇಕು.

ನೈತಿಕ ಕೃತ್ಯ ನಿಷೇಧ ಕಾನೂನು ಮತ್ತು ಭಾರತೀಯ ದಂಡಸಂಹಿತೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ನಮ್ಮ ದೇಶದಲ್ಲಿ ಈ ಕಾನೂನುಗಳಿದ್ದರೂ ಸಮಸ್ಯೆಯು ಹೆಚ್ಚುತ್ತಲೇ ಬಂದಿವೆ. ಕನೂನಿನ ಪ್ರಕಾರ ಅಪ್ರಾಪ್ತ ಬಾಲಕಿಯರಾಗಲಿ, ಪ್ರಾಪ್ತ ವಯಸ್ಸಿನ ಬಾಲಕಿಯರಾಗಲಿ ಅವರುಗಳ ಮೇಲಿನ ಆತ್ಯಾಚಾರ ಅಪರಾಧಕ್ಕಾಗಿ ದಂಡನೆ ಒಂದೇ ರೀತಿಯಾದಾಗಿದೆ. ಕಾನೂನಿನ ಹಾಗೂ ನ್ಯಾಯಾಂಗದೆ ಜಟಿಲತೆಯಿಂದಾಗಿ ನ್ಯಾಯ ಸಿಕ್ಕೆ ಸಿಗುತ್ತದೆ ಎಂಬ ನಂಬಿಕೆಯಿಲ್ಲ.

ಪೋಲಿಸರು ಹಾಗೂ ನ್ಯಾಯಾಂಗ ದೃಢ ನಿಶ್ಚಯದಿಂದ ಕಾರ್ಯಪ್ರವೃತ್ತವಾದಲ್ಲಿ ಆಪ್ರಾಪ್ತ ವಯಸ್ಸಿನ ಮಕ್ಕಳ ಮೇಲಿನ ಲೈಂಗಿಕ ಶೋಷಣೆಯನ್ನು ನಿರ್ಮೂಲನೆಗೊಳಿಸಬಹುದು.

ಸಮಾರೋಪ

ವೇಶ್ಯಾ ಸಮಸ್ಯೆ ಭಾರತೀಯ ಸಮಾಜದಲ್ಲಿ ಅನಾದಿ ಕಾಲದಿಂದಲೂ ಒಂದಲ್ಲ ಒಂದು ಕಾರಣಗಳಿಂದ ಬೆಳೆದು ಬಂದಿದೆ. ಇದನ್ನು ದೇವರ ಹೆಸರಿನಲ್ಲಿ, ಶೋಕಿಗಾಗಿ, ತಮ್ಮ ಶ್ರೇಷ್ಠತೆಗಾಗಿ, ದರ್ಪಕ್ಕಾಗಿ ಮಹಿಳೆಯನ್ನು ಭಾರತೀಯ ಇತಿಹಾಸ ಪರಂಪರೆ ವೇಶ್ಯೆಯನ್ನಾಗಿ ಮಾಡಿದೆ. ಇದು ಇಂದೂ ಕೂಡ ಪ್ರಚಲಿತವಾಗಿದೆ.

ಇಂದು ವೇಶ್ಯಾಸಮಸ್ಯೆಯ ಸೃಷ್ಟಿಗೆ ನವೀನ ರೀತಿಯ ಸಮಸ್ಯೆಗಳು ಕಾರಣವಾಗಿವೆ ಇದೊಂದು ಸಾಮಾಜಿಕ ಸಮಸ್ಯೆಯಾಗಿದ್ದು ಇದನ್ನು ಆಧರಿಸಿದ ಕಾದಂಬರಿಗಳು ಕೇವಲ ಸಮಸ್ಯೆಯನ್ನು, ಅದಕ್ಕೆ ಕಾರಣಗಳನ್ನು ಚಿತ್ರಿಸುತ್ತದೆಯೇ ಹೊರತು ಅದರ ನಿವಾರಣೆಯನ್ನು ಯಾವ ಕಾದಂಬರಿಯಲ್ಲೂ ಸ್ಪಷ್ಟವಾಗಿ ಸೂಚಿಸುವುದಿಲ್ಲ.

ಈ ವೇಶ್ಯಾ ಸಮಸ್ಯೆಯಿಂದಾಗಿ ಸಮಾಜ, ಕುಟುಂಬ ಮತ್ತು ಅಲ್ಲಿನ ವ್ಯಕ್ತಿಗಳಿಗೆ ಉಂಟಾಗುವ ಪರಿಣಾಮಗಳನ್ನು ತಿಳಿಸಲಾಗಿದ್ದು, ಅದು ಹೀಗೆ ಮುಂದುವರೆದರೆ ಈಡೀ ಸಮಾಜ ಅನೈತಿಕತೆಯಿಂದ ಉಂಟಾದ ರೋಗಪೀಡತ ವ್ಯವಸ್ಥೆಯಾಗಿ ಬೆಳೆಯುತ್ತದೆ. ಇದರಿಂದ ಸಮಾಜದಲ್ಲಿ ಹೆಣ್ಣು ಗಂಡಿನ ಬಗ್ಗೆ ಪ್ರೀತಿ, ವಿಶ್ವಾಸ, ಬಾಂಧವ್ಯ, ಇತರರ ನಡುವೆ ಸಂಬಂಧಗಳು ಶಿಥಿಲಗೊಂಡು ಪಶುವಿನ ಜೀವನವನ್ನು ನಡೆಸಲಾಗುತ್ತದೆ. ಆದ್ದರಿಂದ ಸಮಾಜವು ವೇಶ್ಯೆಯರನ್ನು, ಅವರ ಮಕ್ಕಳನ್ನು ನೋಡುವ ದೃಷ್ಟಿಕೋನ ಬದಲಾಗಬೇಕಾಗಿದೆ.

ಈ ವೇಶ್ಯಾಸಮಸ್ಯೆಯ ನಿವಾರಣೆಗೆ ಸಾಕಷ್ಟು ಕಾನೂನುಗಳು ರಚನೆಯಾಗಿದ್ದರೂ ಅವುಗಳ ಶಿಕ್ಷೆ ಮತ್ತು ದಂಡಗಳು ಅಪರಾಧಿಯಲ್ಲಿ ಭಯ ಹುಟ್ಟಿಸುವ ಬದಲು ಆ ಕಾನೂನಿನ ಬಗ್ಗೆ ತಿರಸ್ಕಾರ, ತಾತ್ಸಾರದ ಭಾವನೆ ಮೂಡುತ್ತಿದೆ. ಅಲ್ಲದೆ ಇಂತಹ ಕಾನೂನುಗಳು ಸ್ವಾರ್ಥಕ್ಕಾಗಿ, ಹಣದಾಹಕ್ಕಾಗಿ ಶಿಥಿಲಗೊಂಡು ನಿರಪರಾಧಿಗಳಿಗೆ ನ್ಯಾಯಯುತ, ಮಾನವೀಯತೆಯ ರಕ್ಷಣೆ ದೊರೆಯುತ್ತಿಲ್ಲ.

ಇಂದು ಸಮಾನ ಶಿಕ್ಷಣ, ಸಮಾನ ಹಕ್ಕುಗಳು, ಸಮಾನ ಉದ್ಯೋಗ ಪಡೆಯುತ್ತಿರುವ ಕಾಲದಲ್ಲಿ, ದಿಟ್ಟವಾಗಿ ಹೆಣ್ಣು ತನ್ನ ಜೀವನವನ್ನು ರೂಪಿಸಿಕೊಳ್ಳುವ ಸ್ವತಂತ್ರ ಆಲೋಚನೆಯ ಸನ್ನಿವೇಶದಲ್ಲೂ ಸಹ ಹೆಣ್ಣಿನ ಮೇಲೆ ಲೈಂಗಿಕ ಕಿರುಕುಳಗಳು ನಡೆಯುತ್ತಿವೆ. ಕುಟುಂಬದಲ್ಲಿ ನಡೆಯುತ್ತಿದ್ದ ದಬ್ಬಾಳಿಕೆಯ ವಾತಾವರಣಗಳು ನಡೆಯುತ್ತಿವೆ. ಇಂದು ವಿವಿಧ ಉದ್ಯೋಗದ ಹಂತಗಳಲ್ಲಿ ಮೇಲಧಿಕಾರಿಗಳಿಂದ ಹೆಣ್ಣಿನ ಮೇಲೆ ಅತ್ಯಾಚಾರಗಳು ನಡೆಯುತ್ತಿದ್ದು ಭಾರತದಲ್ಲಿ ಲೈಂಗಿಕ ಕಿರುಕುಳಗಳು ವಿವಿಧ ಸಂಸ್ಥೆಗಳಲ್ಲಿ ನಡೆಯುತ್ತಿವೆ. ಆರೋಗ್ಯ ಕೇಂದ್ರಗಳಲ್ಲಿ

ವೈದ್ಯಾಧಿಕಾರಿಗಳಿಂದ ನರ್ಸ್ ಇಲ್ಲವೆ ಮಹಿಳಾ ವೈದ್ಯಾಧಿಕಾರಿಗಳ ಮೇಲೆ, ಕೈಗಾರಿಕೆಗಳಲ್ಲಿ ಮೇಲಧಿಕಾರಿಗಳು ಮಹಿಳಾ ಕ್ಲರ್ಕ್ ಟೈಪಿಸ್ಟ ಮತ್ತು ಕೆಲಸದಾಳುಗಳ ಮೇಲೆ, ಕಾಲೇಜು ಮತ್ತು ಪ್ರೌಢಶಾಲೆಗಳಲ್ಲಿ ಲೆಕ್ಚರರ್ ಮತ್ತು ಮುಖ್ಯೋಪಾಧ್ಯಾಯನಿಯರ ಮೇಲೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮೇಲೆ, ಕೃಷಿಕ್ಷೇತ್ರಗಳಲ್ಲಿ ಭೂಮಾಲಿಕರಿಂದ ಮಹಿಳಾ ಕೂಲಿಯಾಳುಗಳ ಮೇಲೆ, ಮಾರುಕಟ್ಟೆ , ಬಸ್ಟ್ ನಿಲ್ದಾಣ, ರೈಲು ನಿಲ್ದಾಣಗಳಲ್ಲಿ ಪೊಲೀಸರು ಮಹಿಳೆಯ ಮೇಲೆ ಮಾಡುವ ದೌರ್ಜನ್ಯ ಹೀಗೆ ವಿವಿಧ ಸನ್ನಿವೇಶಗಳಲ್ಲಿ ಹೆಣ್ಣಿನ ಶೋಷಣೆ ನಡೆಯುತ್ತಿದೆ.

ಮಹಿಳೆ ಸ್ವತಂತ್ರವಾಗಿ ಬದುಕಬೇಕೆಂಬ ಹಂಬಲದಿಂದ ಅರಿವಿದ್ದು ಈ ದಂಧೆಗೆ ಬರುತ್ತಾರೆ. ಕೆಲವರು ಅರಿವಿಲ್ಲದೆಯೇ ಈ ಬದುಕಿಗೆ ಬೀಳುತ್ತಾರೆ. ಇಂದು ಹೆಣ್ಣಿನ ವಿಲಾಸಿ ಜೀವನ ಬದಲಾಗುತ್ತಿದೆ. ತನ್ನನ್ನು ತಾನು ಸಮಾಜದಲ್ಲಿ ಗುರ್ತಿಸಿಕೊಳ್ಳುವ ಸಾಹಸ ಮಾಡುತ್ತಿದ್ದಾಳೆ. ಹೀಗಾಗಿ ಮಹಿಳೆ ತನ್ನ ಸಾಧನೆಯ ಹಾದಿಯಲ್ಲಿ ತನ್ನತನವನ್ನು ಕಳೆದುಕೊಂಡು ಬದುಕುತ್ತಿದ್ದಾಳೆ. ವಾಸ್ತವಿ ಸಮಾಜದಲ್ಲಿ ಚಿಕ್ಕಚಿಕ್ಕ ಬಾಲಕಿಯರನ್ನು ಅಪಹರಣ ಮಾಡಿ ಅವರನ್ನು ಮಾರಾಟ ಮಾಡಲಾಗುತ್ತಿದೆ. ಅಲ್ಲದೆ ಎಷ್ಟೋ ಶಾಲೆಗಳಲ್ಲಿ ಶಿಕ್ಷಕರೇ ಮುಗ್ಧ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ ಘಟನೆಗಳು ಕಣ್ಣು ಕಟ್ಟಿದಂತಿವೆ. ತನ್ನ ಮಗಳ ಜನ್ಮಕ್ಕೆ ಕಾರಣನಾದ ತಂದೆಯೇ ಮಗಳ ಮೇಲೆ ಕ್ರೂರವರ್ತನೆ ತೋರುವುದು ತಂದೆ–ಮಕ್ಕಳ ಬಾಂಧವ್ಯದ ಬೆಸುಗೆಯ ವಿನಾಶದ ಸ್ಥಿತಿಯನ್ನು ಪ್ರತಿಬಿಂಬಿಸಿದೆ.

ಇಂದು 'ಸಂಸ್ಕೃತಿ' ಪದದ ವಿಶಾಲ ಅರ್ಥ ಕಳೆದುಕೊಂಡು ಸಂಕುಚಿತ ಅರ್ಥವನ್ನು ಪಡೆದಿದೆ. ಶಿಕ್ಷಿತ ಹೆಣ್ಣು ಗಂಡುಗಳೇ ಅರಿವಿದ್ದು ಮಾಡುವಂತಹ ಈ ಶೋಷಣೆಯು ಸಮಾಜದದ ಭವಿಷ್ಯದ ದುರಂತವನ್ನು ಸೂಚಿಸುತ್ತಿದೆ. ಪ್ರಗತಿಶೀಲ ಕಾದಂಬರಿಗಳು ಈ ಸಮಸ್ಯಗೆ ಇರುವ ಕಾರಣಗಳನ್ನು, ಆದರಿಂದಾಗಿ ಆ ಮಹಿಳೆಯರು ಅನುಭವಿಸಲು ಮಾನಸಿಕ, ದೈಹಿಕ ಆರೋಗ್ಯ ಸಮಸ್ಯೆಗಳನ್ನು ತಿಳಿಸುತ್ತದೆ. ಯಾವೊಬ್ಬ ಪುರುಷನೂ ಹೆಣ್ಣಿನ ಅಂತರಂಗವನ್ನು ಅರಿಯುವ ಪ್ರಯತ್ನ ನಡೆಸುವುದಿಲ್ಲ. ಆದರೆ ಕಾರಂತರ ಕಾದಂಬರಿಯಲ್ಲಿ ಹೆಣ್ಣಿನ ಮನಸ್ಸನ್ನು ಆಕೆಯ ಅನಿಸಿಕೆ, ಸ್ವಾತಂತ್ರ್ಯವನ್ನು ಸೂಚಿಸುತ್ತಾರೆ. ಈ ಕಾದಂಬರಿಗಳ ರಚನೆಯ ಕಾಲದಿಂದ ನಾವಿಂದು ಮುಂದಿನ ಹಂತದಲ್ಲಿರುವುದರಿಂದ ಈ ಸಮಸ್ಯೆಗಳೇ ಭಿನ್ನ ಭಿನ್ನ ಸ್ವರೂಪವನ್ನು ಪಡೆದುಕೊಂಡಿದೆ. ಸಮಾಜಬಾಹೀರ ಲೈಂಗಿಕ ಚಟುವಟಿಕೆಗಳಲ್ಲಿ ಸ್ತ್ರೀ ಪುರುಷರಿಬ್ಬರೂ ಭಾಗಿಗಳಾವರೂ ಸಾಮಾಜಿಕ, ದೋರಣೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ಸ್ತ್ರೀಯರೇ ಆಗಿದೆ. ಪ್ರಗತಿಶೀಲ

ಕಾದಂಬರಿಗಳು ವೇಶ್ಯಾ ಬದುಕನ್ನು ಚಿತ್ರಿಸುವುದರ ಜೊತೆಗೆ ಪ್ರತಿಭಟನೆಯ ಧ್ವನಿ ಮೂಡಿ ಬಂದಿದೆ. ಆದರೆ ಕೇವಲ ಪ್ರತಿಭಟನೆ ಮುಖ್ಯವಲ್ಲ, ಅದು ಎಲ್ಲರನ್ನೂ ಮನಪರಿವರ್ತನೆ ಅಗತ್ಯವಾಗಬೇಕಾಗಿದೆ.

ವಾಸ್ತವಸಮಾಜದಲ್ಲಿ ವೇಶ್ಯಾ ಸಮಸ್ಯೆಯಿಂದ, ಗಂಡಿನ ಕಾದುಂಕಭಾವನೆ ಮತ್ತು ಹರಾದಾಹದಿಂದಾಗಿ, ಕನ್ಯಾಪಹರಣ, ಬಲತ್ಕಾರ, ಮಾನಭಂಗ, ಶೀಲಗೆಡಿಸುವುದು ಮುಂತಾದ ಲೈಂಗಿಕ ಅಪರಾಧಗಳಿಗೆ ಪ್ರಚೋದನೆ ನೀಡುತ್ತಿದೆ. ಇಂದು ಎಷ್ಟೊ ಮಂದಿ ಬಡವರು, ಮುಗ್ಧ ಹೆಣ್ಣುಮಕ್ಕಳು ನೀತಿವಂತರಾಗಿ ಬಾಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಧನಿಕರ, ಅಧಿಕಾರಿಗಳ ದೃಷ್ಟಿ ಬಿದ್ದು ತಮ್ಮ ಅಸಾಯಕತೆಯಿಂದ ನರಳುವಂತಾಗಿದೆ.

ಇಂದು ಹೆಣ್ಣು ಯಾವುದೇ ಉದ್ಯೋಗ ಪಡೆದರೂ, ಆರ್ಥಿಕ ಸ್ವಾತಂತ್ರ್ಯಗಳಿಸಿದರೂ ಸಹ ಇಂತಹ ಲೈಂಗಿಕ ಕಿರುಕುಳದಿಂದ ಮುಕ್ತವಾಗಿಲ್ಲ. ವೇಶ್ಯಾಚಟುವಟಿಕೆಗಳಿಗೆ ಹಳ್ಳಿಗಳಿಂದ ನಗರಕ್ಕೆ ಹೋಗಿ ಸೇರುತ್ತಿದ್ದರು. ಆದರೆ ಇಂದು ಪ್ರತಿಯೊಂದು ಹಳ್ಳಿಗಳಲ್ಲೂ ನಗರ ಪ್ರಭಾವದಿಂದ, ಸಾಂಸ್ಕೃತಿಕ ಮೌಲ್ಯಗಳ ಕುಸಿತದಿಂದಾಗಿ ಭಯಭೀತಿ ಇಲ್ಲದೆ ಇಂತಹ ಚಟುವಟಿಕೆಗಳು ಗೌಪ್ಯವಾಗಿ ಜರುಗುತ್ತವೆ.

ಪ್ರಸ್ತುತ ಸನ್ನಿವೇಶದಲ್ಲಿ ವೇಶ್ಯಾ ಬದುಕಿಗೆ ಇರಲು ಕಾರಣಗಳಲ್ಲಿ ಕಡಿಮೆ ಕೂಲಿಯ ಪರಿಣಾಮದಿಂದ ಉಂಟಾದ ಬಡತನವಾಗಿದೆ. ಮಹಿಳೆ ಹಿಂದಿನ ಕಾಲದ ಹಾಗೆ ದುಡಿಯುವ ಆಸಕ್ತಿ ಕಳೆದುಕೊಂಡು ನೆರಳಿನಲ್ಲಿ ಬದುಕಿ ಹಣಕ್ಕಾಗಿ ದೇಹವನ್ನು ಮಾರಿಕೊಳ್ಳುತ್ತಿದ್ದಾಳೆ. ಇತರ ಹಾಗೆ ನಾನು ಸಮಾಜದಲ್ಲಿ ಚೆನ್ನಾಗಿ ಬದುಕಬೇಕೆಂಬ ಮನದಾಸೆ ಮನಸ್ಸಿನ ಕೆಟ್ಟ ನೀತಿಗಳ ಪ್ರಚೋದನೆಗೆ ಸಹಾಯಕವಾಗಿದೆ.

ಇಂದು ವೇಶ್ಯಾವೃತ್ತಿಯು ಸಂಚಾರಿ ವ್ಯವಸ್ಥೆಯಂತೆ ಮಾರ್ಪಾಡು ಹೊಂದಿದೆ. ಹೀಗಾಗಿ ಇಂತಹ ಈ ಶೋಷಣೆಯಿಂದ ಮುಕ್ತಿ ಹೊಂದಲು ಸಾಧ್ಯವಾಗುತ್ತಿಲ್ಲ. ಹೆಣ್ಣು ಮಕ್ಕಳು ಪುರುಷನಿಗೆ ಸಮನಾದ ಉದ್ಯೋಗ ಪಡೆಯುತ್ತಿದ್ದರೂ ಸಹ ಅಲ್ಲಿ ಆಕೆಯ ಮೇಲೆ ಅಧಿಕಾರಿದ ದರ್ಪದ ನೆರಳು ಕಾಡುತ್ತಿರುತ್ತದೆ. ಅಲ್ಲದೆ ಇಲ್ಲಿನ ನೈಸರ್ಗಿಕ ವಾತಾವರಣದ ಪರಿಣಾಮ ಮಕ್ಕಳಲ್ಲಿ ಪ್ರಭಾವಬೀರಿ 8 ರಿಂದ 18 ವರ್ಷದ ವಯಸ್ಸಿನ ಹೆಣ್ಣು ಮತ್ತು ಗಂಡಿನಲ್ಲಿ ದೈಹಿಕವಾಗಿ ಮಾನಸಿಕವಾಗಿ ಬದಲಾಣೆಗಳಾಗಿ, ಅವರ ಮನಸ್ಸಿನ ಚಿಂತನೆಗಳು ದಾರಿ ತಪ್ಪುತ್ತಿವೆ. ಕೆಲವರು ಬಾಲಾಪರಾಧಗಳಲ್ಲಿ ತೊಡಗುತ್ತಿದ್ದಾರೆ. ಇಂತಹ ಬಾಲ ಅಪರಾಧಗಳಲ್ಲಿ ಗಂಡು-ಹೆಣ್ಣು ಪ್ರೀತಿ-ಪ್ರೇಮದ ಮುಖವಾಡದಲ್ಲಿ ಮೋಹಕ್ಕೆ

ಬಿಲಿಯಾಗುತ್ತಿದ್ದಾರೆ. ಭವಿಷ್ಯದ ಬದುಕಿನ ಅರಿವಿಲ್ಲದೆ ಅಲ್ಪತೃಪ್ತಿಗೆ ಬಲಿಯಾಗಿ ತಮ್ಮ ಕನ್ಯತ್ವವನ್ನು ಯೌವನದಲ್ಲೇ ಕಳೆದುಕೊಂಡ ಎಷ್ಟೋ ಅಮಾಯಕ ಬಾಲಕಿಯರು ಆತ್ಮಹತ್ಯೆಯಂತಹ ಕ್ರೂರ ಸಾವನ್ನು ತಂದುಕೊಳ್ಳುತ್ತಿದ್ದಾರೆ. ಮತ್ತೆ ಕೆಲವರು ಕುಟುಂಬ ಸಮಾಜದಿಂದ ತಿರಸ್ಕಾರವಾಗಿ ಇಂತಹ ವೇಶ್ಯಾ ಬದುಕಿಗೆ ಬಂದು ಜೀವನದ ಬಗ್ಗೆ ಜುಗುಪ್ಸೆ ತಾಳುತ್ತಿದ್ದಾರೆ.

ಇಂತಹ ವೇಶ್ಯಾ ಬದುಕಿನಿಂದ ಹಳ್ಳಿಗಳಲ್ಲಿ ಎಷ್ಟೋ ಮನೆಗಳು ಹಾಳಾಗುತ್ತಿವೆ. ಇದಕ್ಕೆ ಬಲಿಯಾದ ಪುರುಷರು ದುಶ್ಚಟಗಳಿಗೆ ಒಳಗಾಗಿ ಸಾಮಾಜಿಕ ಸಮಸ್ಯೆಗಳಲ್ಲಿ ತೊಡಗುತ್ತಿದ್ದಾರೆ.

ಗ್ರಂಥಋಣ

ಜೀವನ ಮೌಲ್ಯಗಳು ಮತ್ತು ಸಾಹಿತ್ಯ	ಡಿ.ವಿ.ಕೆ ಮೂರ್ತಿ ಪ್ರಕಾಶಕರು : ಕೃಷ್ಣಮೂರ್ತಿಪುರಂ ಮೈಸೂರು – 4 ಪ್ರಕಾಶನದ ವರ್ಷ 1986
ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ	ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು. ಪ್ರಕಾಶನ ವರ್ಷ – 1993
ಸಾಹಿತ್ಯ ವಿಮರ್ಶೆ	ಸಂಪಾದಕರು ಡಾ॥ ಜಿ. ಪ್ರಶಾಂತ ನಾಯಕ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
ಪ್ರಗತಿಶೀಲತೆ	ಹೆಚ್. ಎಸ್. ರಾಘವೇಂದ್ರರಾವ್ ಕರ್ನಾಟಕೆ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ ಬೆಂಗಳೂರು – 560002 ಪ್ರಕಟಣೆ – 1992
ಹೊಸಗನ್ನಡ ಸಾಹಿತ್ಯ	ಎಸ್. ಎಲ್. ಶೇಷಗಿರಿರಾವ್ ಕನ್ನಡ ಸಾಹಿತ್ಯ ಪರಿಷತ್ತು ಪಂಪಮಹಾಕವಿ ರಸ್ತೆ – ಚಾಮರಾಜಪೇಟೆ ಬೆಂಗಳೂರು –560018
ತ.ರಾ.ಸು	ನ. ಪ್ರಭಾಕರ್ ನವಕರ್ನಾಟಕ ಸಾಹಿತ್ಯ ಸಂಘದ ಕೇಂದ್ರ ಪಾ.ಅ.ಪ್ರ ಕನ್ನಡ ಲೇಖಕರು ನವಕರ್ನಾಟಕ ಪ್ರಕಾಶನ ಪ್ರಕಟಣೆ – 2002
ಸಾಮಾಜಿಕ ಸಮಸ್ಯೆಗಳು	ಎಂ. ನಾರಾಯಣ ಪ್ರಕಾಶಕರು – ಚೇತನ್‌ಬುಕ್‌ಹೌಸ್ ಅಂಜನಾದ್ರಿ ರೇಣುಕಾಚಾರ್ಯ ದೇವಸ್ಥಾನದ ರಸ್ತೆ ಲಕ್ಷ್ಮೀ ಟಾಕೀಸ್ ಹಿಂಭಾಗ ಮೈಸೂರು–570024 ಪ್ರಕಾಶನ ವರ್ಷ 2003
ಭಾರತೀಯ ಸಮಾಜ	ಚ.ನ ಶಂಕರ್‌ರಾವ್ ಜೈಭಾರತ್ ಪ್ರಕಾಶನ, ಮಂಗಳೂರು 2005–2006ರ ಪರಿಷ್ಕೃತ ಆವೃತಿ

ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿ ಹಿನ್ನಲೆ	ಡಾ॥ ಹಾಲತಿ ಸೋಮಶೇಖರ್ ವಿಸ್ಮಯ ಪ್ರಕಾಶನ "ಪೌನ್" ಎಲ್-7, 1ನೆಯ ತಿರುವು 1ನೇಯ ಹಂತ ಕುವೆಂಪು ನಗರ, ಮೈಸೂರು-570023 ಮೊದಲು ಮುದ್ರಣ - 2007
ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ	ವಿವಿಧ ಲೇಖಕರು ಕರ್ನಾಟಕ ಸಾಹಿತ್ಯ ಅಕಾಡೆಮಿ ಕನ್ನಡ ಭವನ ರಸ್ತೆ ಬೆಂಗಳೂರು-560002
ಮಹಿಳಾ ಅಧ್ಯಯನ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ-2006
ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ	ಡಾ॥ ಡಿ. ಮಂಗಳಪ್ರಿಯದರ್ಶಿನಿ ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿಶ್ವ ವಿದ್ಯಾನಿಲಯ ಹಂಪಿ.
ಬಸವರಾಜ ಕಟ್ಟಿ ಮುನಿಯವರ ಸಾಹಿತ್ಯ	ವಿವಿಧ ಲೇಖಕರು ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು-560001 ಪ್ರಕಟಣೆ ವರ್ಷ : 1992
ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು	ಡಾ॥ ಎಂ. ಉಷಾ ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರಕಟಣೆ ವರ್ಷ : 2004
ಮಹಿಳೆ ಮತ್ತು ಸಾಮಾಜಿಕತೆ	ಡಾ॥ ಎನ್.ಕೆ. ಕೋದಂಡರಾಮ ಶ್ರೀಮತಿ ಯಶೋದರಾಗೌ ಟ್ರಸ್ಟ್, 144 - ಕಾಳಿದಾಸ ರಸ್ತೆ, ಮೈಸೂರು.
ಸಾಮಾಜಿಕ ಮತ್ತು ಸಾಮಾಜಿಕ ನಿಲುವುಗಳು	ಸಂಪಾದಕರು ಕೆ.ಜಿ. ನಾಗರಾಜಪ್ಪ ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು-560002 ಪ್ರಕಟಣೆ ವರ್ಷ : 1989
ಲೇಖನ ನಮ್ಮ ಮಾನಸ ಪತ್ರಿಕೆ	ಮಾಸ ಪತ್ರಿಕೆ ಸಂಪಾದಕ ಮಂಡಳಿ ವನಜಾ ವೆಂ. ನೀಲಾಂಜನ ಪಂಚಾಯತಿರಸ್ತೆ, ಕಾಡುಗೋಡಿ, ಬೆಂಗಳೂರು- 560 067 ಜೂನ್ 1998